University of Agricultural Science Bill, 1975.—Int.oduction.

SRI N. CHIKKE GOWDA.—(Minister for Agriculture and Animal Housbandry). Madam, I beg to introduce the University of Agricultural Science Bill, 1975.

MADAM SPEAKER.—The Bill is introduced. *

Karnataka Forest (Amendment) Bill, 1976. Introduction.

MADAM SPEAKER.—Before the Minister for Forest introduces the Bill I have to make the following announcement.

> "In pursuance of clauses (1) and (3) of Article 207 of the Constitution of India, I, Uma Shankar Dikshit, the Governor of Karnataka, do hereby recommend that the Karnataka Forest (Amendment) Bill, 1976, be introduced in and considered by the Karnataka Legislative Assembly."

He may now introduce the Bill.

SRI C. N. PATIL (Minister for Forest) —Madam, I big to introduce the Karnataka Forest (Amendment) Bill, 1976.

MADAM SPEAKER.—The Bill is introduced. *

Karnataka Electricity Supply Undertakings (Acquisition) Amendment Bill, 1976. Introduced. *

SRI H. C. SRIKANTAIAH (Minister of State for Power).—Madam, I big to introduce the Karnataka Electricity Supply Undertakings (Acquisition) (Amendment) Bill, 1976.

MADAM SPEAKER.—The Bill is introduced.*

Motion of Thanks to the Governor's Address

SRI K. PUTTASWAMY (Chamundeswari)—I beg to move the following motion. ;

> "That we, the member of the Karnataka Legislative Assembly in this session beg leave to thank the Governor for the address delivered to the members of the Legislature on 2nd February 1976."

SRI AMMANNAVAR JAYAKUMAR SHRIPAL (Sadalga)—I second the motion.

Madam SPEAKER.—Motion moved ;

---

* Bills appended as Annexures to this Volume.

"That We, the members of the Karnataka Legislative Assembly in this session beg leave to thank the Governor for the address delivered to the members of the Ligislature on 2nd February 1976".

†ಶ್ರೀ ಕೆ. ಪುಟ್ಟಸ್ವಾಮಿ (ಚಾಮುಂಡೇಶ್ವರಿ).—ಮಾನ್ಯ ಅಧ್ಯಕ್ಷರೇ, ನಾನು ಇವತ್ತು ಈ ಸಭೆಯಲ್ಲಿ ವಂದನಾ ನಿರ್ಣಯವನ್ನು ಮಂಡಿಸುವ ಸಂಧರ್ಭದಲ್ಲಿ ನೂತನ್ ರಾಜ್ಯಪಾಲರು ಅವರ ಭಾಷಣದಲ್ಲಿ ಕರ್ನಾಟಕ ಸರ್ಕಾರ ಕಳೆದ ವರ್ಷ ಸಾಧಿಸಿರತಕ್ಕಂಥ ಸರ್ವತೋಮುಖವಾದಂಥ ಪ್ರಗತಿಯನ್ನು ಬಹಳ ಚೆನ್ನಾಗಿ ಸ್ಪಷ್ಟಪಡಿಸಿದ್ದಾರೆ ಎನ್ನುವ ಮಾತನ್ನು ಹೇಳಲು ಇಚ್ಛಿಸುತ್ತೇನೆ. ಈ ಒಂದು ಸಂದರ್ಭದಲ್ಲಿ ಕರ್ನಾಟಕ ಸರ್ಕಾರ 1972 ರಿಂದ 1975ರ ವರೆಗೆ ಕರ್ನಾಟಕ ರಾಜ್ಯದಲ್ಲಿ ಸಾಧಿಸಿರತಕ್ಕಂಥ ಪ್ರಗತಿಯನ್ನೊಳಗೊಂಡಂಥ ಒಂದು ಪುಸ್ತಕವನ್ನು ನಮ್ಮ ಸರ್ಕಾರದವರು ಅವರ ಮೂಲಕ ಪ್ರಕಟಿಸಿದ್ದಾರೆ. ಮಾನ್ಯ ಸದಸ್ಯರೆಲ್ಲರೂ ಅದನ್ನು ಅಮೂಲಾಗ್ರವಾಗಿ ಓದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದರೊಳಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಪ್ರಸ್ತಾವನೆಯನ್ನು ಬರೆಯುತ್ತಾ ಅದರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಬಹಳ ಮುಖ್ಯವಾದುದು. ಈಗ ಈ ನಿರ್ಣಯವನ್ನು ನಾವು ಚರ್ಚಿಸುವವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕ ಒಂದು ವಾಕ್ಯವನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳುವುದಾದರೆ ಆಗ ಈ ಸರ್ಕಾರ ಎಷ್ಟರಮಟ್ಟಿನ ಪ್ರಗತಿಯನ್ನು ಸಾಧಿಸಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಅವರು ಮೊದಲನೆಯ ವಾಕ್ಯದಲ್ಲಿಯೇ ಒಂದು ವಿಚಾರವನ್ನು ಹೇಳಿದ್ದಾರೆ. ಆ ವಾಕ್ಯವನ್ನು ಈ ಸಭೆಯಲ್ಲಿ ಉದಹರಿಸಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಅದು ಈ ರೀತಿ ಇದೆ.

"I am mindful of the fact that in a republic life of ours, people judge the quality of the Government not by its pronouncements and promises but by its achievements."

ಅಂದಮೇಲೆ ಸರ್ಕಾರ ತನ್ನ ಮುಂದೆ ಯಾವ ಗುರಿಯನ್ನು ಇಟ್ಟುಕೊಂಡಿದೆ ಎನ್ನುವ ವಿಚಾರವಾಗಿ ಅನೇಕಷೇಳೆ ಮಂತ್ರಿಗಳು, ಮುಖ್ಯಮಂತ್ರಿಗಳು, ಅವರ ಸಹೋದ್ಯೋಗಿ ಇತರ ಸಚಿವರು ಅನೇಕ ಸಮಾರಂಭಗಳಲ್ಲಿ ಭಾಗವಹಿಸಿದಾಗಲೆಲ್ಲಾ ತಮ್ಮ ತಮ್ಮ ಭಾಷಣಗಳಲ್ಲಿ ಈಗಾಗಲೇ ಅನೇಕಸಾರಿ ವ್ಯಕ್ತಪಡಿಸಿದ್ದಾರೆ. ಸರ್ಕಾರ ತನ್ನ ಗುರಿಯ ಸಾಧನೆಯತ್ತ ಎಷ್ಟರಮಟ್ಟಿಗೆ ತನ್ನ ಗಮನವನ್ನು ಹರಿಸಿದೆಯೆಂಬುದನ್ನು ಇಂತಹ ಒಂದು ಸಂದರ್ಭದಲ್ಲಿ ವಿಮರ್ಶಿಸಬೇಕಾದುದು ಅತ್ಯಗತ್ಯ. ಅದನ್ನು ವಿಮರ್ಶಿಸಿದ್ದೇ ಆದರೆ ನಾವು ರಾಜ್ಯಪಾಲರು ಮಾಡಿರತಕ್ಕ ಭಾಷಣಕ್ಕೆ ನಮ್ಮ ಕೃತಜ್ಞತೆಯನ್ನು ಅರ್ಪಿಸಿದಂತಾಗುತ್ತದೆ ಮತ್ತು ಅದೇ ನಮ್ಮ ಆದ್ಯ ಕರ್ತವ್ಯವೆಂಬುದು ಅದರಿಂದ ಸ್ಪಷ್ಟವಾಗುತ್ತದೆ.

ನಮ್ಮ ರಾಜ್ಯಪಾಲರು ಅವರು ಭಾಷಣಮಾಡುವ ವೇಳೆಯಲ್ಲಿ ಎರಡನೆಯ ಪ್ಯಾರಾದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಕಳೆದ ವರ್ಷ ರಾಜ್ಯಪಾಲರಾಗಿದ್ದ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಅವರು ಈ ಸಭೆಯನ್ನು ಉದ್ದೇಶಿಸಿ ಭಾಷಣಮಾಡಿದಾಗ, ಮುಂದಿನ ವರ್ಷ ಒಳಿತಿಗಾಗಿ ಬದಲಾವಣೆ' (ಚೇಂಜ್ ಫಾರದಿ ಬೆಟರ್) ಎಂಬುದಾಗಿ ಹೇಳಿ ಮುಂದಿನವರ್ಷ. 'ಉತ್ತಮವಾದಂಥ ಬದಲಾವಣೆಗಳನ್ನು ಆಗುತ್ತವೆಂಬ ಆಶೆಯನ್ನು ವ್ಯಕ್ತಪಡಿಸಿದರು. ಅದನ್ನು ನಮ್ಮ ರಾಜ್ಯಪಾಲರು ನಿನ್ನೆ ನಮ್ಮೆಲ್ಲರ ಜ್ಞಾಪಕಕ್ಕೆ ತಂದುಕೊಟ್ಟಿದ್ದಾರೆ. ಈಗಿನ ರಾಜ್ಯಪಾಲರು ಹೊಸದಾದ ನಮ್ಮ ಕರ್ನಾಟಕಕ್ಕೆ ಬಂಧಿರುವುದರಿಂದ, ಮುಂದೆ ಅವರು ಈ ರಾಜ್ಯದಲ್ಲಿ ಸಾಧಿಸತಕ್ಕ ಪ್ರಗತಿ ಏನೇನು ಎಂಬುದನ್ನು ಅವಲೋಕಿಸಿ ತಿಳಿದುಕೊಳ್ಳುವುದಕ್ಕೆ ಹೆಚ್ಚಿನ ಅವಕಾಶವಾಗುತ್ತದೆ. ಅವರಿಗೆ ಈ ರ್ಯಾಜದ ಪ್ರಗತಿಯ ಬಗ್ಗೆ ಮೊದಲಿನಿಂದಲೂ ತಿಳಿಯತಕ್ಕ ಅವಕಾಶ ಬಹಳವಾಗಿತ್ತು. ಏಕೆಂದರೆ ಅವರು ಕೇಂದ್ರದ ಸಚಿವರಾಗಿದ್ದರು. ಈ ರಾಜ್ಯದ ಬೆಳವಣಿಗೆಯ ವಿಚಾರದಲ್ಲಿ ನಿಕಟ ಸಂಪರ್ಕವನ್ನು ಹೊಂದಿದ್ದರು. ಅನೇಕ ಮಾಹಿತೆಯನ್ನು ಆಗಾಗ್ಗೆ ಪಡೆದು ರಾಜ ದ ಪ್ರಗತಿಯ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದರು. ಆದ್ದರಿಂದಲೇ

ಹಿಂದಿನ ರಾಜ್ಯಪಾಲರು ಏನೊಂದು ಉತ್ತಮವಾದಂಥ ಬೆಳವಣಿಗೆ ಮುಂದಿನವರ್ಷ ಆಗುತ್ತದೆಂದು ಹೇಳಿದ್ದರೋ ಅದರಂತೆ ಅನೇಕ ಬದಲಾವಣೆಗಳಾಗುತ್ತವೆಂದು ಏನೊಂದು ಭರವಸೆಯನ್ನು ಕೊಟ್ಟಿದ್ದರೋ ಆ ಭರವಸೆ ಈಗ ಈಡೇರಿದೆಯೆಂದು ಹೇಳಿದ್ದಾರೆ. ಈಗ ನಾವಾದರೂ ಈ ಸಂದರ್ಭದಲ್ಲಿ ಚರ್ಚಿಸಬೇಕಾದುದು ಹಾಗೂ ವಿಮರ್ಶಿಸಿ ನೋಡಬೇಕಾದ್ದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಪ್ರಕಾರ ನಮ್ಮ ದೇಶದಲ್ಲಿ ಈ ಪಕ್ಷದ ವತಿಯಿಂದ ಏನೇನು ಆಶ್ವಾಸನೆಯನ್ನು ಕೊಟ್ಟಿದೆ, ಏನೇನು ಗುರಿಯನ್ನು ಇಟ್ಟುಕೊಂಡಿದ್ದಾರೆ, ಏನೇನು ಭರವಸೆಯನ್ನು ಹಿಂದೆ ಕೊಟ್ಟಿದ್ದರು, ಆ ಭರವಸೆಗಳು ನಿಜವಾಗಿ ಈಡೇರಿವೆಯೋ ಮತ್ತು ಅವು ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆಯೆಂಬುದನ್ನು ನೋಡಬೇಕು. ಹೋದ ವರ್ಷ ರಾಜ್ಯಪಾಲರು ಏನೊಂದು ಆಶಯವನ್ನು ವ್ಯಕ್ತಪಡಿಸಿದ್ದರು ಅದು ಫಲಪ್ರದವಾಗಿದೆಯೋ ಮತ್ತು ಉತ್ತಮವಾದಂಥ ಬೆಳವಣಿಗೆಯನ್ನು ನಿರೀಕ್ಷಿಸುವುದರಲ್ಲಿ ಸಫಲವಾಗಿಯೋ ಇಲ್ಲವೇ ಎಂಬುದನ್ನು ಈಗ ಚರ್ಚಿಸಬೇಕಾದ್ದು ಮುಖ್ಯ. ಈ ಸಭೆಯ ಮೂಲಕ ಸಾರ್ವಜನಿಕರಿಗೆ ಅವನ್ನು ಮನದಟ್ಟುಮಾಡಿಕೊಡಬೇಕಾದುದು ನಮ್ಮೆಲ್ಲರ ಕರ್ತವ್ಯ. ಈ ದೇಶದಲ್ಲಿ ಎಷ್ಟೋ ಪ್ರಗತಿಪರವಾದಂಥ ಕೆಲಸಕಾರ್ಯಗಳು ಆಗುತ್ತಿವೆ, ಎಷ್ಟು ಯಶಸ್ವಿಯಾಗಿವೆ, ಎಷ್ಟು ಇನ್ನೂ ಸಾಧನೆಮಾಡಬೇಕಾದ್ದು ಇವೆ, ಯಾವಾಗ ಆ ಕೆಲಸಕಾರ್ಯಗಳು ಸಾಧನೆಮಾಡುವುದಕ್ಕೆ ಸಾಧ್ಯವಾಗಬಹುದು ಎಂಬುದನ್ನೆಲ್ಲಾ ಸಾರ್ವಜನಿಕರಿಗೆ ಅವರ ಗಮನಕ್ಕೆ ತರುವುದು ಬಹಳ ಕಷ್ಟ ಆದ್ದರಿಂದ ಈ ಸಭೆಯ ಮೂಲಕ, ಮಾನ್ಯ ಸದಸ್ಯರು ಚರ್ಚೆಮಾಡುವುದರ ಮೂಲಕ ಸಾರ್ವಜನಿಕರಿಗೆ ಅವರ ಗಮನಕ್ಕೆ ತರಬೇಕಾದುದು ಈ ಸಭೆಯ ಎಲ್ಲ ಮಾನ್ಯ ಸದಸ್ಯರ ಮುಖ್ಯ ಕರ್ತವ್ಯವಾಗಿದೆ. ಕಳೆದ ವರ್ಷದಲ್ಲಿ 1972 ರಿಂದ 1976ರೊಳಗೆ ನಾಲ್ಕು ವರ್ಷಗಳ ಅವಧಿಯಲ್ಲಿ ತಮ್ಮ ಒಂದು ಭರವಸೆಯ ಪ್ರಕಾರ ಅನೇಕ ಕಾರ್ಯಗಳನ್ನು ನಮ್ಮ ಸರ್ಕಾರ ಸಾಧಿಸಿದೆ. 1972ರ ಚುನಾವಣೆಯಲ್ಲಿ ಯಾವ ಒಂದು ಭರವಸೆಯನ್ನು ಈ ಪಕ್ಷ ಕೊಟ್ಟಿತ್ತೋ ಅದನ್ನು ಬಹುತೇಕವಾಗಿ ಸಾಧಿಸಲು ಸತತವಾಗಿ ಪ್ರಯತ್ನಮಾಡಿದ್ದಾರೆ. ಅವರು ತಮ್ಮ ಒಂದು ಪ್ರಯತ್ನದಲ್ಲಿ ಯಾವರೀತಿ ಯಶಸ್ವಿಯಾಗಿದ್ದಾರೆಂಬುದನ್ನು ನಾನು ಈ ಮಾನ್ಯ ಸಭೆಗೆ ತೋರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಸಭೆಯಲ್ಲಿರತಕ್ಕ ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ನನ್ನ ವಿನಂತಿ ಏನು ಅಂದರೆ, ನಾನು ಹೇಳುವಂಥ ಅಂಕಿಅಂಶಗಳಲ್ಲಿ ತಪ್ಪು ಇದ್ದರೆ ಅದನ್ನು ನಮಗೆ ತಿಳಿಸುವುದು ಅವರ ಕರ್ತವ್ಯ. ಯಾವ ಕೆಲಸಕಾರ್ಯಗಳೂ ಆಗಲಿಲ್ಲ, ಏನೇನೂ ಮಾಡಿಲ್ಲ, ಬರೀ ಭರವಸೆಯ ಮಾತು ಕೊಟ್ಟಿದಾರೆ, ಅವರು ಕೊಟ್ಟ ಮಾತಿನಂತೆ ನಡೆದಿಲ್ಲವೆಂದು ಹೇಳುವುದಕ್ಕೇನೊ ಅವರಿಗೆ ಸ್ವಾತಂತ್ರ್ಯವಿದೆ. ಆದರೆ ಈ ಸರ್ಕಾರ ಏನೇನು ಮಾಡಿದೆ, ಇನ್ನೂ ಏನೇನು ಮಾಡಬೇಕು ಎಂಬುದನ್ನು ಅವರು ಅಂಕಿಅಂಶಗಳ ಮೂಲಕ ಸರ್ಕಾರದ ಗಮನಕ್ಕೆ ತಂದರೆ ಬಹಳ ಒಳ್ಳೆಯದು. ಏಕೆಂದರೆ ಸರ್ಕಾರ ನಡೆಸಿರತಕ್ಕ ಎಲ್ಲ ಕಾರ್ಯಗಳಿಗೂ ಸಾಕಷ್ಟು ದಾಖಲೆಗಳಿರುತ್ತವೆ. ಯಾವ ಕ್ಷೇತ್ರದಲ್ಲಿ ಏನೇನು ಎಷ್ಟೆಷ್ಟು ಸಾಧಿಸಿದ್ದಾರೆ, ಸಮಾಜ ಸುಧಾರಣೆಯಲ್ಲಿ ಎಷ್ಟರಮಟ್ಟಿಗೆ ಪ್ರಗತಿಯಾಗಿದೆ ಭೂಸುಧಾರಣೆ ಹಾಗೂ ನೀರಾವರಿ ಕಾಮಗಾರಿಗಳಲ್ಲಿ ಏನೇನು ಪ್ರಗತಿಯನ್ನು ಸಾದಿಸಿದ್ದಾರೆ, ಎಷ್ಟುಮಟ್ಟಿಗೆ ಜನಜೀವನದಲ್ಲಿ ಪ್ರಗತಿಯುಂಟಾಗಿದೆ, ಎಷ್ಟು ಬೆಳವಣಿಗೆ ಈ ದೇಶವಲ್ಲಿ ಆಗಿದೆ, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಎಷ್ಟು ಪ್ರಗತಿಯಾಗಿದೆಯೆಂದು ತಿಳಿಯಬೇಕು. ವಿದ್ಯಾಭ್ಯಾಸ ಕ್ಷೇತ್ರದಲ್ಲಿಯೂ ಎಷ್ಟರಮಟ್ಟಿಗೆ ಪ್ರಗತಿಯನ್ನುಂಟು ಮಾಡಿದ್ದಾರೆ, ಹರಿಜನರು, ಗಿರಿಜನರು ಮತ್ತು ಇನ್ನು ಇತರ ಹಿಂದುಳಿದ ವರ್ಗಗಳಿಗೆ ಯಾವರೀತಿಯಾದಂಹ ಸೌಲಭ್ಯಗಳನ್ನು ಒದಗಿಸಿಕೊಟ್ಟಿದಾರೆ, ಆ ರೀತಿಯಾದಂಥ ಸೌಲಭ್ಯಗಳನು ಒದಗಿಸುವುದರಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದಾರೆ—ಇಂತಹ ವಿಷಯಗಳನ್ನ ಈ ಸಭೆಯಲ್ಲಿ ಈಗ ಚರ್ಚಿಸಬೇಕಾದುದು ಅತ್ಯಂತ ಅಗತ್ಯ. ಜನತೆ ನಮ್ಮ ದೇಶದಲ್ಲಿ ಇಂತಹ ಸೌಕರ್ಯಗಳನ್ನು ನಿರೀಕ್ಷಣೆ ಮಾಡುವುದರಿಂದ ಸಭಾ ಸದಸ್ಯರೆಲ್ಲರೂ ಈ ವಿಚಾರಗಳ ಕಡೆ ಹೆಚ್ಚಿನ ಆಸಕ್ತಿಯನ್ನು ವಹಿಸಿದರೆ ಆಗ ಸರ್ಕಾರ ಎಷ್ಟು ಸಾಧನೆಮಾಡಿದೆ ಎನ್ನುವುದನ್ನು ಜನತೆಗೆ ಈ ಸಭೆಯ ಮೂಲಕ ಎತ್ತಿ ತೋರಿಸುವುದಕ್ಕೆ ಸಹಾಯಮಾಡಿದಂತಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಒಟ್ಟುಮೊತ್ತಲನೆಯದಾಗಿ ಸರ್ಕಾರ ಇದುವರೆಗೂ ಏನೇನು ಸಾಧಿಸಿದೆಯೆನ್ನುವುದನ್ನು ಅಂಕಿಅಂಶಗಳ ಮೂಲಕ ನಾವು ಪರಿಶೀಲನೆಮಾಡಬಹುದು. ಒಂದನೆಯದು ಈ ರಾಜ್ಯದಲ್ಲಿ ಆಗಿರುವ ಬೆಳವಣಿಗೆ ಎರಡನೆಯದು ಸಮಗ್ರ ಭಾರತದೇಶದಲ್ಲಿ ಆಗಿರತಕ್ಕ ಬೆಳವಣಿಗೆ. ಈಗ ಇವೆರಡನ್ನೂ ಹೋಲಿಸಿ ನೋಡುವುದಕ್ಕೆ ಅವಕಾಶವಿದೆ, ಇವೆರಡನ್ನೂ ನಾವು ಅಂಕಿಅಂಶಗಳ ಮೂಲಕ ಹೋಲಿಸಿ

ನೋಡಿದರೆ ಮಾತ್ರ ನಮಗೆ ಒಂದು ಸ್ಪಷ್ಟವಾದ ಚಿತ್ರ ಗೊತ್ತಾಗುತ್ತದೆ. ನಾವು ಸಾಧಿಸಿರತಕ್ಕ ಪ್ರಗತಿಯ ವಿಚಾರದಲ್ಲಿ ನಾವು ನಿಜವಾಗಿ ಹೆಮ್ಮೆ ಪಡುವಂಥ ಪ್ರಗತಿಯನ್ನು ಸಾಧಿಸಿದ್ದೇವೆಯೇ ಎನ್ನುವುದು ಅದರಿಂದ ಸ್ಪಷ್ಟವಾಗುತ್ತದೆ.

ಮೊದಲನೆಯದಾಗಿ ನಾವು ಈ ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಎಷ್ಟು ಗಮನ ಕೊಟ್ಟಿದ್ದೇವೆ ಎನ್ನುವುದು ಮೊದಲನೆಯ ವಿಚಾರ. 1971-72ರ ಅವಧಿಯಲ್ಲಿ ನಮ್ಮ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಆಗುತ್ತಿದ್ದಂಥ ವೆಚ್ಚ 186 ಕೋಟಿ ಅದೇ 1974-75ರಲ್ಲಿ 311 ಕೋಟಿ ಆಗಿದೆ. ಸುಮಾರು 125 ಕೋಟಿ ಹೆಚ್ಚಾಗಿದೆ. 4 ವರ್ಷಗಳ ಅವಧಿಯಲ್ಲಿ ಯಾವ ಮಟ್ಟವನ್ನು ಮುಟ್ಟಿದೆ.

2-30 P.M.

SRI H.T. KRISHNAPPA (Nagamangala)—Madam Speaker, the Hon. Member is quoting from a different paper. He has to confine to the Speech delivered by the Governor.

Madam SPEAKER.—It is not necessary.

ಶ್ರೀ ಕೆ. ಪುಟ್ಟಸ್ವಾಮಿ.—ವಿರೋಧ ಪಕ್ಷದ ತಾತ್ಕಾಲಿಕ ನಾಯಕರು ಯಾರಿದ್ದಾರೆ ಅವರಿಗೆ ನಾನೇನೂ ಅಂಕಿಅಂಶಗಳನ್ನು ವಿವರಿಸಿ ಹೇಳಬೇಕಾದ್ದು ಇಲ್ಲ, ಓದಿ ಹೇಳಬೇಕಾದ್ದು ಏನೂ ಇಲ್ಲ, ಅವರು, ತಾವು ಎಲ್ಲಾ ಪ್ರಬುದ್ಧ ಪ್ರಜ್ಞಾವಂತರಿದ್ದೀರಿ ಆದುದರಿಂದ ತಾವು ನಾನು ಏನು ಹೇಳುತ್ತಿದ್ದೇನೆ ಅದನ್ನು ಸ್ವಲ್ಪ ಅವಲೋಕಿಸಿ ಕೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸಮಗ್ರ ಭಾರತದಲ್ಲಿ ಏನಾಗಿದೆ ಎಂದು ನೋಡುವುದಾದರೆ ನಮ್ಮ ಅಭಿವೃದ್ಧಿಯ ಬೆಳವಣಿಗೆಯು ಶೇಕಡ 20 ರಷ್ಟು ಹೆಚ್ಚಿದೆ. ಆದುದರಿಂದ ಇದೊಂದು ಸಂತೋಷದ ವಿಚಾರ. ಹಾಗೆಯೇ ಒಂದು ಸಾಮಾನ್ಯವಾಗಿ ಆಪಾದನೆ ಇರುತ್ತದೆ ಏನೆಂದರೆ ನೀವು ಡೆವಲಪ್‌ಮೆಂಟ್ ನಾನ್ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಹೆಚ್ಚು ಖರ್ಚು ಮಾಡಿ ಬಿಡುತ್ತೀರಿ. ಡೆವಲಪ್‌ಮೆಂಟ್ ವರ್ಕ್ಸ್‌ಗೆ ಕಡಿಮೆ ಮಾಡುವುದಿಲ್ಲ ಎನ್ನತಕ್ಕಂಥ ಆಕ್ಷೇಪಣೆ ಯಾವಾಗಲೂ ಇರತಕ್ಕಂಥದ್ದು ನಾನ್ ಡೆವಲಪ್‌ಮೆಂಟ್ ವರ್ಕ್ಸ್ ಆಗತಕ್ಕಂಥದರಲ್ಲಿ ಹೆಚ್ಚಿನ ಸಿಬ್ಬಂದಿಯ ಮೇಲೆ ಹಣ ಹೆಚ್ಚಿಗೆ ಖರ್ಚಾಗುತ್ತದೆ ಮತ್ತೆ ಅನಾವಶ್ಯಕವಾಗಿ ಸಿಬ್ಬಂದಿಯನ್ನು ನೇಮಿಸಿದ್ದಾರೆ, ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ಮಾಣ ಮಾಡಿದ್ದಾರೆ, ಬೇಡವಾದಂಥ ಸಿಬ್ಬಂದಿಯನ್ನೆಲ್ಲಾ ಅಲ್ಲಿಗೆ ಮಂಜೂರು ಮಾಡಿ ನೇಮಕ ಮಾಡಿದ್ದಾರೆ ಮತ್ತು ತೆರಿಗೆ ವಸೂಲು ಮಾಡಿದ್ದಾರೆ, ಮತ್ತೆ ಸಾಲ ಕೊಟ್ಟಿದ್ದಾರೆ, ಬಡ್ಡಿಗೆ ಹೆಚ್ಚಿನ ಹಣವನ್ನು ಕೊಟ್ಟು ಬಿಟ್ಟಿದ್ದಾರೆ ಎಂದು ಹೇಳುತ್ತಾರೆ. ಆದರೆ ಇವತ್ತು ನಾನ್ ಡೆವಲಪ್‌ಮೆಂಟ್ ವರ್ಕ್ಸ್ ನಮ್ಮಲ್ಲಿ ಎಷ್ಟಾಗಿದೆ ಎಂದರೆ 93 ಕೋಟಿ ಇದ್ದದ್ದು ಅದು ಇವತ್ತಿನ ದಿವಸ 120 ಕೋಟಿ ಆಗಿದೆ. ಅದು ಎಷ್ಟು ಪರ್ಸೆಂಟೇಜ್ ಆಗುತ್ತದೆ ಎಂದರೆ ಶೇಕಡ 9.4 ಅದೇ ಸಮಗ್ರ ಭಾರತದಲ್ಲಿ 9.6 ಇದೆ. ಆದುದರಿಂದ ಇದರಲ್ಲೂ ಕೂಡ ನಾವು ಭಾರತ ದೇಶದ ಅಂಕಿ ಅಂಶಗಳ ಸರಾಸರಿಗಿಂತ 1 ಕಡಿಮೆ ಮಾಡಿದ್ದೇವೆ. ಬಹಳ ಮುಖ್ಯವಾದದ್ದು ನಮ್ಮ ಯೋಜನಾ ವೆಚ್ಚ.ಯೋಜನಾ ವೆಚ್ಚ ಬಹಳ ಮಟ್ಟಿಗೆ ಈ ವಿಚಾರದಲ್ಲಿ ಎಲ್ಲರೂ ಆತಂಕ ವ್ಯಕ್ತಪಡಿಸಿದ್ದಾರೆ. ಕೆಲವು ದಿನಗಳ ಹಿಂದೆ ನಡೆದ ವಿಷಯ ಮಾನ್ಯ ಸದಸ್ಯರುಗಳಿಗೆ ಗೊತ್ತಿರಬಹುದು. ನಮ್ಮ ದೇಶದ ಪ್ರಧಾನ ಮಂತ್ರಿಗಳು ಮದ್ರಾಸ್ಸಿಗೆ ಬಂದಿದ್ದಾಗ, ಅಲ್ಲಿಯ ಸರ್ಕಾರದ ವಿಚಾರದಬಗ್ಗೆ ಪ್ರಸ್ತಾಪ ಮಾಡುವಾಗ ಅಲ್ಲಿಯ ಯೋಜನಾ ವೆಚ್ಚ ಕಡಿಮೆಯಾಗಿದೆ ಎನ್ನುವುದನ್ನು ಅವರು ಹೊರಗೆಡುವಿದರು. ನಮ್ಮಲ್ಲಿ ಯೋಜನಾ ವೆಚ್ಚ ಯಾವರೀತಿ ನಡೆದಿದೆ ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕು. ನಮ್ಮಲ್ಲಿ ಯೋಜನಾ ವೆಚ್ಚ 1971-72ರಲ್ಲಿ ಈ ಸರ್ಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಇದ್ದದ್ದು 88 ಕೋಟಿ ಅದೇ 1974-75ಕ್ಕೆ 136 ಕೋಟಿ ಆಗಿದೆ. ಈ ವರ್ಷ 200 ಕೋಟಿ ರೂಗಳನ್ನು ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ತಾವು ಪತ್ರಿಕೆಗಳ ಮುಖಾಂತರ ತಿಳಿದು ಕೊಂಡಿದ್ದೀರಿ. ನಾವು ಈ ಒಂದು ಬಗ್ಗೆ ಪ್ರಸ್ತಾಪ ಮಾಡಿ ಮಾತನಾಡುವಾಗ ನಾವು ಬರೀ ಭರವಸೆ ಕೊಡುತ್ತೇವೆ, ಗಗನ ಕುಸುಮ ತೋರಿಸಿ 200 ಕೋಟಿ ಖರ್ಚುಮಾಡಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದಾಗ ತಾನೇ ನೀವು ಬೆನ್ನನ್ನು ತಟ್ಟಿಕೊಳ್ಳಬಹುದೆಂದು ಮಾನ್ಯ ಸದಸ್ಯರು ಹೇಳ್ತಾ

ವುದು ಸ್ವಾಭಾವಿಕ. ನಾವು ಕಳೆದ ವರ್ಷದ ಲೆಕ್ಕವನ್ನು ತೆಗೆದುಕೊಂಡರೆ 136 ಕೋಟಿ ಖರ್ಚು ಮಾಡಿದ್ದೇವೆ ಅಂದರೆ ಅದರ ಶೇಕಡ 16 ರಷ್ಟು ಆಯಿತು ಅದೇ ನ್ಯಾಶನಲ್ ಪ್ಲಾನ್ ಸಮಗ್ರ ಭಾರತದಲ್ಲಿ ಯಾವ ಪ್ರಮಾಣದಲ್ಲಿದೆ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಕಾರಣ ಯೋಜನಾ ಆಯೋಗ ಈ ವಿಚಾರದಲ್ಲಿ ಒಂದು ಬಿಗಿಯಾದ ನೀತಿಯನ್ನು ಅನುಸರಿಸುತ್ತಾರೆ. ಆದುದರಿಂದ ನಾವು ಕೆಳಕ್ಕೆ ಬೀಳತಕ್ಕಂಥ ಅವಕಾಶಗಳು ಹೇರಳವಾಗಿರುತ್ತದೆ. ಕಾರಣವೇನೆಂದರೆ ಪ್ರತಿಯೊಂದು ಯೋಜನೆಯನ್ನು ಮಂಜೂರು ಮಾಡುವಾಗ, ಭಾರತ ಸರ್ಕಾರದವರು ತಾವು ಹಣವನ್ನು ಯೋಜನಾ ವೆಚ್ಚದಂತೆ ಒದಗಿಸುವಂಥ ವೇಳೆಯಲ್ಲಿ ಪ್ರತಿಯೊಂದು ಹಂತದಲ್ಲೂ ಕೂಡ ನಮ್ಮ ಸರ್ಕಾರ ಇಂಟರ್‌ನಲ್, ರಿಸೋರ್ಸ್‌ನಿಂದ ತನ್ನ ರಾಜ್ಯದಲ್ಲಿ ಎಷ್ಟರ ಮಟ್ಟಿನ ಉತ್ಪಾದನೆಯನ್ನು ಹೆಚ್ಚಿಸುತ್ತೇವೆ ಎನ್ನುವ ಬಗ್ಗೆ ಭರವಸೆ ಕೊಟ್ಟಿರುತ್ತೇವೆ. ಅದೇ ರೀತಿ ಈ ಸಾರ್ತಿಯೂ 200 ಕೋಟಿ ಯೋಜನಾ ವೆಚ್ಚ ಮಂಜೂರು ಮಾಡಿಸಿಕೊಳ್ಳುವಂಥ ಕಾಲದಲ್ಲಿ ನಮ್ಮ ಆದಾಯದಿಂದ ನಾವು 50 ಕೋಟಿ ಒದಗಿಸುತ್ತೇವೆಂದು ಭರವಸೆ ಕೊಟ್ಟಿರುತ್ತೇವೆ. ಆ ಭರವಸೆಯನ್ನು ಈಡೇರಿಸುವುದಕ್ಕೆ ಆಗದೇ ಹೋದಂಥ ವೇಳೆಯಲ್ಲಿ ಉಳಿದ ಹಣವನ್ನೂ ಅವರು ಕೊಡುವುದಿಲ್ಲ. ಆಗ ನಾವೇ ಕೆಳಕ್ಕೆ ಬೀಳುತ್ತೇವೆ. ಇದರಲ್ಲಿ ಏನೊಂದು ಮುಖ್ಯ ವಿಷಯವೆಂದರೆ ಸಮಗ್ರ ಭಾರತದ ಯೋಜನಾ ಮಟ್ಟ ಯಾವ ಪ್ರಮಾಣದಲ್ಲಿದೆ, ಯಾವ ಶೇಕಡಾವಾರಿನಲ್ಲಿದೆ? ಅಷ್ಟನ್ನೂ ಸಾಧಿಸುವುದಕ್ಕೆ ನಮ್ಮ ಯೋಜನಾ ವೆಚ್ಚವನ್ನು ಮಂಜೂರು ಮಾಡಿಸಿಕೊಳ್ಳುವಂಥ ವೇಳೆಯಲ್ಲಿ ಏನೇನು ಭರವಸೆಗಳನ್ನು ಕೊಟ್ಟಿದ್ದೇವೆಯೊ ಆ ಭರವಸೆಯನ್ನು ಈಡೇರಿಸಿದ್ದೇವೆ. ನಾವು ಹೊಸ ತೆರಿಗೆಗಳನ್ನು ಹಾಕಿದ್ದೇವೆ. ತೆರಿಗೆ ಬಾಕಿ ನಿಂತವರಿಂದ ವಸೂಲಿ ಮಾಡಿದ್ದೇವೆ. ಹಾಗೂ ಮಿತವ್ಯಯ ಮಾಡಿ ಇಷ್ಟು ಹಣವನ್ನು ಯೋಜನಾ ವೆಚ್ಚಕ್ಕೆ ಒದಗಿಸುತ್ತೇನೆಂದು ಭರವಸೆ ಕೊಟ್ಟಿದ್ದೆವೋ ಅದನ್ನು ಸರ್ಕಾರ ಸಾಧಿಸಿದೆ. ಇದು ಒಂದು ಬಹಳ ಪ್ರಾಮುಖ್ಯವಾದಂಥ ವಿಚಾರ. ಅದಕ್ಕಾಗಿ ನಾನು ನಮ್ಮ ಆರ್ಥಿಕ ಮಂತ್ರಿಗಳನ್ನು, ಆರ್ಥಿಕ ಇಲಾಖೆಯನ್ನು ಮೆಚ್ಚಬೇಕಾಗಿದೆ.

ಶ್ರೀ ಬಿ. ಪುಟ್ಟಸಾಮಯ್ಯ (ರಾಮನಗರಂ)—ರೈತರ ಮೇಲೆ ನೀರಾವರಿ ಕಂದಾಯದ ಭಾರವನ್ನು ಹಾಕಲಾಗಿದೆ ಇದಕ್ಕೂ ತಮ್ಮ ಮೆಚ್ಚಿಗೆ ಇದೆಯೋ?

ಶ್ರೀ ಕೆ. ಪುಟ್ಟಸ್ವಾಮಯ್ಯ—ಮಾನ್ಯ ಪುಟ್ಟಸಾಮಿಯವರು ಒಳ್ಳೆಯ ನೀರಾವರಿ ಪ್ರದೇಶದಿಂದ ಬಂದಿರತಕ್ಕಂಥವರಲ್ಲ ಆದರೆ ನಾನು ಒಳ್ಳೆಯ ನೀರಾವರಿ ಪ್ರದೇಶದಿಂದ ಬಂದಿರುವವನು, ನೀರಾವರಿ ಮೇಲೆ ಅನಿವಾರ್ಯವಾಗಿ ಕಂದಾಯವನ್ನು ಹೆಚ್ಚು ಮಾಡಲೇಬೇಕಾಗಿತು. ಅದುದರಿಂದ ನಮ್ಮ ಸರ್ಕಾರ ಸ್ವಲ್ಪ ಹೆಚ್ಚು ಹಾಕಿದೆ ಅಷ್ಟೇ.

ಶ್ರೀ ಕೆ. ಎಚ್. ಹನುಮೇಗೌಡ.—ತಾವು ನೀರಾವರಿ ಪ್ರದೇಶದಿಂದ ಬಂದಿರುವವರಲ್ಲದೆ, ತಾವು ವ್ಯವಸಾಯಗಾರರು ಆಗಿದ್ದೀರಿ. ಇವತ್ತಿನ ದಿವಸ ನೀರಾವರಿ ತೆರಿಗೆಯನ್ನು ಒಂದಕ್ಕೆರಡರಷ್ಟು ನಿಧಾಕ್ಷಣ್ಯವಾಗಿ, ನಿರ್ಭಯವಾಗಿ ಹಾಕಿದ್ದಾರೆ. ನಮ್ಮ ರೈತರ ಕಷ್ಟ ಇದರಿಂದ ಎಷ್ಟಾಗಿದೆಂಬುದನ್ನು ಹೇಳುವುದಕ್ಕೆ ದುಃಖವಾಗುತ್ತಿದೆ ಸ್ವಾಮಿ.

ಶ್ರೀ ಬಿ. ಪುಟ್ಟಸಾಮಯ್ಯ.—ಹಾಗೆಯೇ ವಿದ್ಯುಚ್ಛಕ್ತಿ ದರವನ್ನು ನಿಮ್ಮ ಸರ್ಕಾರದ ಹೆಚ್ಚು ಮಾಡಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಇವತ್ತಿನ ದಿವಸ ವಿದ್ಯುತ್ ಉತ್ಪಾದನೆ ಆಗಬೇಕಾದರೆ ಅದು ಸುಮ್ಮನೇ ಮುದ್ರಣ ಮಾಡಿದರೆ ಆಗುವುದಿಲ್ಲ. ಅದಕ್ಕೆ ವಿದ್ಯುಚ್ಛಕ್ತಿಯ ಯಂತ್ರಗಳನ್ನು ಆಮದು ಮಾಡಿಕೊಳ್ಳಬೇಕು, ಆಣೆ ಕಟ್ಟೆಗಳನ್ನು ಕಟ್ಟಬೇಕು. ಇದಕ್ಕೆಲ್ಲಾ ದುಬಾರಿ ಖರ್ಚಾಗುತ್ತದೆಂಬುದೆಲ್ಲಾ ತಮಗೆ ಗೊತ್ತಿದೆ. ಹಾಗೆಯೇ ಅಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ಬೇರೆ ಯಾರೂ ಅಲ್ಲ ಅವರು ನಮ್ಮವರೇ, ನಮ್ಮ ಬಂಧುಗಳೇ ಅಲ್ಲಿ ಇರುವುದರಿರಿದ ಅವರ ಜೀವನಕ್ಕೆ ಸರಿಯಾದ ಸಂಬಳವನ್ನು ಕೊಡಬೇಕು, ಈಗಿನ ದುಬಾರಿ ಜೀವನದಲ್ಲಿ ನಾವು ಲೆಕ್ಕ ಹಾಕಿದಾಗ ತಮಗೇ ಗೊತ್ತಾಗುತ್ತದೆ ಯಾರೂ ಕೂಡ, ಯಾವ ವ್ಯಾಪಾರಿಯೂ ಕೂಡ ನಷ್ಟ ಮಾಡಿಕೊಂಡು ವ್ಯಾಪಾರ ಮಾಡುವುದಕ್ಕಾಗುವುದಿಲ್ಲ.

ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ವಿಧ್ಯುಚ್ಛಕ್ತಿ ವಿಷಯದಲ್ಲಿ ನಮಗೆ ಸಾಕಷ್ಟು ಲಾಭ ಬರುತ್ತಿಲ್ಲ ಆದರಿಂದ ನಮಗೆ ನಷ್ಟ ವಾಗುತ್ತಿದೆ ಎಂದು ಹೇಳಿದ್ದಾರೆ.

ಶ್ರೀ ಬಾಪುಗೌಡ ಈಗ ವಿದ್ಯುಚ್ಛಕ್ತಿ ದರ 'ಏರಿಸುವುದಕ್ಕೆ ಕೆಲವು ಕಾರಣಗಳಿವೆ., ಟ್ಯಾರಿಫ್ ಹಾಕಲಾಗದೆ 'ಏಕದಮ' ಸಹಾಪುರ ದರ ಏರಿಸಿರುವುದು ಸರಿಯೇ

Sri S. M. Krishna.- He cannot be cross-examined. He is one of the Senior-most Members.

ಶ್ರೀ ಕೆ. ಪುಟ್ಟಸ್ವಾಮಿ; ಮಾನ್ಯ ಬಾಪುಗೌಡರು ಕೇಳತಕ್ಕದ್ದರಲ್ಲಿ ಕ್ರಮ ಇಲ್ಲದಿದ್ದರೆ ಅದರ ಬಗ್ಗೆ ಪ್ರಸ್ತಾಪ ಮಾಡೋಣ. ಈಗ ಅವರು ವಿದ್ಯುಚ್ಛಕ್ತಿ ಬಗ್ಗೆ ದರ ಹೆಚ್ಚಿಸಿರುವುದು ಸರಿಯೇ ಎಂದು ಕೇಳಿದ್ದಾರೆ. ಎಷ್ಟು ಹೆಚ್ಚಿಸಬೇಕಾಗುತ್ತದೆ ಅಷ್ಟನ್ನು ಹೆಚ್ಚಿಸಿದ್ದಾರೆಯೇ ಹೊರತು ಹೆಚ್ಚಾಗಿ ಹೆಚ್ಚಿಸುವುದಕ್ಕೆ ಹೋಗಿಲ್ಲ. ಈ ರೀತಿ ಮಾಡುವುದರಿಂದ ಸರ್ಕಾರದವರು ಯೋಜನಾಯೋಗಕ್ಕೆ ಏನು ಒಂದು ಭರವಸೆ ಕೊಡುತ್ತಾರೆ ಅದನ್ನು ಈಡೇರಿಸುವುದಕ್ಕಾಗುತ್ತದೆ. ನನಗಾದರೂ ಅನಿಸುವುದು ಏನು ಎಂದರೆ ಹಿಂದೆ 138 ಕೋಟಿ ರೂಪಾಯಿ ಯೋಜನಾಯೋಗಕ್ಕೆ ಕೊಟ್ಟಿದ್ದು, ಈ ಸಾರಿ 200 ಕೋಟಿ ರೂಪಾಯಿ ಯೋಜನಾವೆಚ್ಚಕ್ಕೆ ಕೊಡುತ್ತಾ ಇರುವುದು ಅತ್ಯಂತ ಅಗತ್ಯವಾದುದು ಎಂದು ಹೇಳುತ್ತೇನೆ, ಸರ್ಕಾರ ಇಷ್ಟೆಲ್ಲಾ ಸಾಧಿಸಬೇಕಾದರೆ ನಮ್ಮ ಇಂಟರ್‌ನಲ್ ರಿಸೋರ್ಸಸ್, ನಮ್ಮಲ್ಲಿರತಕ್ಕ ಹುಟ್ಟುವಳಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದರಿಂದ ಎಂದು ಹೇಳಬೇಕಾಗಿದೆ. ಅಲ್ಲದೆ ಸರ್ಕಾರವನು ಪ್ರಸಂಶೆ ಮಾಡುವುದರ ಜೊತೆಗೆ ಈ ಸಭೆಯು ಈ ವಿಚಾರದಲ್ಲಿ ತಾಳಿರತಕ್ಕ ವಿಚಾರವನ್ನು ಮೆಚ್ಚಬೇಕಾದ್ದು ಎಂದು ಹೇಳುತ್ತೇನೆ, ಪ್ರತಿಯೊಂದು ಸಾರಿಯೂ ಸರ್ಕಾರ ತಂದಂಥ ಶಾಸನಗಳಿಗೆ ನಾವು ಮಂಜೂರಾತಿ ಕೊಡಬೇಕಾಗುತ್ತದೆ, ಈ ರೀತಿ ಮಾಡದೆಹೋದರೆ ನಮ್ಮ ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ಹಿಂದೆ ನಮ್ಮ ಸ್ಟೇಟ್ ರೆವಿನ್ಯೂ 1971-72ರಲ್ಲಿ 226 ಕೋಟಿ ರೂಪಾಯಿ ಇದ್ದದ್ದು ಈಗ 401 ಕೋಟಿ ರೂಪಾಯಿ ಆಗಿದೆ, ಇಷ್ಟೊಂದು ಹೆಚ್ಚಿಗೆಯಾಗಬೇಕಾದರೆ ನಮ್ಮ ಒಪ್ಪಿಗೆ ದೊರೆತಿದುದರಿಂದಲೇ ಎಂದು ಹೇಳಬೇಕಾಗಿದೆ. ಅಲ್ಲದೆ ಈ ಒಂದು ಕಾರ್ಯದಲ್ಲಿ ನಿಮಗೂ ಕೂಡ ಒಂದು ಭಾಗ ಇದೆ ಎಂದು ಹೇಳುತ್ತೇನೆ.

ಇದು ಆನ್ಯುಯಲ್ ಗ್ರೋತ್, ಈ ಒಂದು ಹುಟ್ಟುವಳಿ ವರ್ಷೇ ವರ್ಷೇ ಯಾವ ಪ್ರಮಾಣದಲ್ಲಿ ಹೆಚ್ಚಿದೆ, ಇಂಡಿಯಾ ಸರ್ಕಾರದಲ್ಲಿ ಯಾವ ಪ್ರಮಾಣದಲ್ಲಿ ಹೆಚ್ಚಿದೆ ಇದನ್ನು ಪರಿಶೀಲನೆ ಮಾಡೋಣ. ಇದು ಹೆಚ್ಚಿರತಕ್ಕ ಪ್ರಮಾಣ ನೋಡುವುದಾದರೆ ಶೇಕಡವಾರು 22 ಇದೆ. ಇದು ಬಹಳ ಹೆಚ್ಚಿನ ಮಟ್ಟದಲ್ಲಿ ತೆರಿಗೆ ಹೆಚ್ಚಿಸಲಿಕ್ಕೆ ಆಗಿದೆ. ಇಂಡಿಯಾ ಸರ್ಕಾರದವರಿಗೆ ಸಾಧ್ಯವಾಗಿರುವುದು ಕೇವಲ ಶೇಕಡವಾರು 17 ಮಾತ್ರ ಆದರೆ ಶೇಕಡಾವಾರು 17 ಅಂದರೆ ಅವರ ಆದಾಯ ವೆಚ್ಚ ನಿಮಗೆ ಗೊತ್ತೇಇದೆ. ಅದು ನೂರಾರು ಕೋಟಿ ರೂಪಾಯಿಗಳಾಗುತ್ತದೆ. ನಾವು ಅವರ ಲೆಕ್ಕಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ ನಾವು ಅದರ ಲೆಕ್ಕ ಹಾಕಿಕೊಳ್ಳುತ್ತಾ ಹೋದರೆ ಅದು ಅಜಗಜಾಂತರ ವಾಗುತ್ತದೆ. ಅವರಿಂದ ನಾವು ಅದನ್ನು ಹೋಲಿಕೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅವರಿಗೆಇರತಕ್ಕ ರೆವಿನ್ಯೂ ರಿಸೋರಸಸ್ ನೋಡಿದರೆ ಅವರು ಹಾಕತಕ್ಕ ಆಮದು ತೆರಿಗೆ, ರಫ್ತು ತೆರಿಗೆ ಅಥವಾ ಆಧಾಯ ತೆರಿಗೆ, ಸೆಂಟ್ರಲ್ ಎಕ್ಸೈಸ್ ಇವನ್ನೆಲ್ಲ ಲೆಕ್ಕ ಹಾಕಿದರೆ, ಸಲ್ಪ ಬದಲಾವಣೆ ಮಾಡಿದರೆ ಸಾಕು· ಅದು ನೂರಾರು ಕೋಟಿ ರೂಪಾಯಿಗಳಾಗುತ್ತದೆ. ನಮಗೆ ಇರತಕ್ಕ ರಿಸೋರಸಸ್ ನೋಡಿದರೆ ಒಂದು ಕ್ಯಾಸ್ಟ್ ಐರನ್ ಪ್ರಮಾಣದಲ್ಲಿ ಇದೆ, ನಾವು ಹೆಚ್ಚಿಸಬೇಕಾದರೆ.ನೀರಿನ ತೆರಿಗೆ ಹೆಚ್ಚಿಸಬೇಕಾಗುತ್ತದೆ ಇಲ್ಲವೆ ವಿದ್ಯುಚ್ಛಕ್ತಿ ದರ ಹೆಚ್ಚಿಸಬೇಕಾಗುತ್ತದೆ. ಇಲ್ಲವೇ ಭೂಮಿ ತೆರಿಗೆ ಹೆಚ್ಚಿಸಬೇಕಾಗುತ್ತದೆ

ಶ್ರೀ ಕೆ. ಎಚ್. ಹನುಮೇಗೌಡ, ಸ್ವಾಮೀ ತಮಗೆ ಈ ಬಡಪಾಯಿಗಳನ್ನು ಬಿಟ್ಟರೆ ತಮಗೆ ತೆರಿಗೆ ಹಾಕುವುದಕ್ಕೆ ಬೇರೆ ಇನ್ನು ಯಾರು ಸಿಕ್ಕುತ್ತಾರೆಹೇಳಿ?

ಶ್ರೀ ಕೆ. ಪುಟ್ಟಸ್ವಾಮಿ. ನಮ್ಮ ಮೇಲೆ ಇರತಕ್ಕ ಹೊಣೆಯನ್ನು ನಿರ್ವಹಿಸಬೇಕಾದರೆ ಆ ರೀತಿ ಮಾಡಲೇ ಬೇಕಾಗುತ್ತದೆ. ನಾವು ಈಗಾಗಲೆ ಮಹತ್ತರವಾದಂಥ ಸಾಧನೆಯನ್ನು ಮಾಡಿದ್ದೇವೆ. ಎಂದು ಹೇಳುತ್ತೇನೆ. ನಾವು ಮಾಡಿರತಕ್ಕ ಕಾರ್ಯಗಳಲ್ಲಿ ಯಾರಿಗೂ ತಲೆಭಾಗೆ

ಬೇಕಾಗಿಲ್ಲ. ಇನ್ನು ನಮ್ಮ ಸ್ಟೇಟ್ ರೆವಿನ್ಯು ಟ್ಯಾಕ್ಸ್ ಯಾವ ಪ್ರಮಾಣಕ್ಕೆ ಹೋಗಿದೆ ಎಂದರೆ 161 ಕೋಟಿ ರೂಪಾಯಿ ಇದ್ದುದು 257 ಕೋಟಿ ರೂಪಾಯಿಯಾಗಿದೆ. ಇನ್ನು ನಾನ್ ಟ್ಯಾಕ್ಸ್ ರೆವಿನ್ಯು ಬಗ್ಗೆ ನೋಡಿದರೆ ಅದರಲ್ಲೂ ಕೂಡ ಶೇಕಡವಾರು 17 ಭಾಗ ವರ್ಷೇ ವರ್ಷೇ ಹೆಚ್ಚಾಗಿದೆ ಎಂದು ಹೇಳಬೇಕಾಗಿದೆ.

ಇನ್ನು ಸೆಂಟ್ರಲ್‌ನಲ್ಲಿ ನಾನ್ ಟ್ಯಾಕ್ಸ್ ರೆವಿನ್ಯು ಬಗ್ಗೆ ನೋಡುವುದಾದರೆ ಅದು ಶೇಕಡವಾರು 19ಭಾಗ ಆಗಿದೆ. ಅಲ್ಲಿ ಇನ್ನು ಹೆಚ್ಚಿಗೆ ಆಗುವುದಕ್ಕೆ ಸಾಧ್ಯತೆ ಇದೆ ಎಂದು ಹೇಳುತ್ತೇನೆ ಏಕೆಂದರೆ ಅವರಿಗೆ ಎಲಾಸ್ಟಿಕ್ ರೆವಿನ್ಯೂ ಸೋರ್ಸ್ ಇದೆ. ನಮ್ಮದು ಇನ್ ಎಲಾಸ್ಟಿಕ್‌ರೆವಿನ್ಯೂ ಸೋರ್‌ಆದುದರಿಂದ ನಾವು ಜನರ ಮೆಚ್ಚಿಗೆಗೆ ಪಾತ್ರರಾಗತಕ್ಕಂಥ ಕರ್ತವ್ಯ ನಿರ್ವಹಿಸಿದ್ದೇವೆ ಎಂದು ಹೇಳುವುದಕ್ಕೆ ಹೆಮ್ಮೆಯಾಗುತ್ತದೆ.

ಇನ್ನು ಪರ್ ಕ್ಯಾಪಿಟಿ ರೆವಿನ್ಯೂ ಎಕ್ಸ್‌ಪೆಂಡಿಚರ್ ನೊಡುವುದಾದರೆ ಒಬ್ಬ ಮನುಷ್ಯ ರಾಜ್ಯದ ಪ್ರಗತಿಗಾಗಿ 'ಏನು ಖರ್ಚು ಮಾಡಿದ್ದಾನೆ ತೆರಿಗೆಯನ್ನು ಯಾವ ಪ್ರಮಾಣದಲ್ಲಿ ಅವಲಂಬಿಸಲಾಗಿದೆ ಇದು ಅತ್ಯಂತ ಅವಶ್ಯಕವಾಗಿದೆ. ಈ ಸ್ಟೇಟ್ ಪರ್‌ಕ್ಯಾಪಿಟಿ ರೆವಿನ್ಯೂ 1971–72ರಲ್ಲಿ 169 ರೂಪಾಯಿ ಇವೊತ್ತು ಸೆಂಟ್ರಲ್‌ನಲ್ಲಿ ನೋಡಿದರೆ170 ರೂಪಾಯಿ ಇದೆ, ಇದನ್ನು ನೋಡಿದರೆ ಸ್ವಲ್ಪ ಎಚ್ಚು ಕಡಿಮೆ ಎರಡು ಒಂದೇ ಆಗಿದೆ. ಇದನ್ನು ನೋಡಿದರೆ ನಮ್ಮ ಜನರಿಗೆ ಈ ಸಮಯದಲ್ಲಿ ಕೃತಜ್ಞತೆಯನ್ನು ಅರ್ಪಿಸಬೇಕಾಗಿದೆ, ರಾಜ್ಯಸರ್ಕಾರ ನಿರ್ವಹಿಸತಕ್ಕ ಕರ್ತವ್ಯ ನೋಡಿದರೆ ತಾನು ಇಟ್ಟುಕೊಂಡಿರತಕ್ಕ ಗುರಿಗಿಂತ ಹೆಚ್ಚಿಗೆ ಸಾಧಿಸಿದೆ ಎಂದು ಹೇಳಬೇಕಾಗಿದೆ. ಅನೇಕ ಬಾರಿ ಶಾಸನ ಸಭೆಯಲ್ಲಿ ತೆರಿಗೆಗಳಬಗ್ಗೆ ಮಂಜೂರಾತಿಕೊಟ್ಟು ಅದರಿಂದ ಅನೇಕ ತೊಂದರೆ ಜನರಿಗೆ ಆಗಿದ್ದರೂ ಕೂಡ ಸರ್ಕಾರ ಮಾಡಿರತಕ್ಕ ಕರ್ತವ್ಯವನ್ನು ನೊಡಿದರೆ ಇವೊತ್ತಿನ ದಿವಸ ಮೆಚ್ಚಬೇಕಾಗಿದೆ. ನಮ್ಮದು ಸ್ಟೇಟ್ ಪರ್‌ಕ್ಯಾಪಿಟಿ 169 ರೂಪಾಯಿ ಇದೆ, ಇಂಡಿಯಾ ಸರ್ಕಾರದ್ದು ನೋಡಿದರೆ 170 ರೂಪಾಯಿ ಪರ್ ಕ್ಯಾಪಿಟಿ ಇದೆ ಇದು ಮೆಚ್ಚತಕ್ಕ ವಿಶಯ. ನಾನು ಈಗ ಯಾವ ಒಂದು ಸರ್ಕಾರವನ್ನು ಹೋಲಿಕೆ ಮಾಡುತ್ತಿದ್ದೇನೆ. ಅದು ನಮ್ಮ ಸರ್ಕಾರ ಏನಾಗಿದೆ ಎಂದು ನೋಡಿಕೊಳ್ಳುವುದಕ್ಕೆ ಅಷ್ಟೆವಿನಹ, ಅವರ ವಿಚಾರದಲ್ಲಿ ನಮ್ಮ ಟೀಕೆಟಿಪ್ಪಣಿಗಳು ಇಲ್ಲ. ಅವರು ಯಾವುದು ಸರಿ ಇದೆ ಅದನ್ನು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ನಾನು ಯಾವುದೇ ಒಂದು ಸರ್ಕಾರದ ಬಗ್ಗೆ ಈರ್ಷ್ಯೆ ಮಾಡಿಕೊಂಡು ಮಾತನಾಡುತ್ತಿದ್ದೇನೆ ಎನ್ನುವ ಮನೋಭಾವನೆ ಬರಬಾರದು ಎಂದು ಹೇಳುತ್ತೇತೆನೆ. ಹಾಗೆ ಸ್ಟೇಟ್ಸ್ ಎಕ್ಸ್‌ಪೆಂಡಿಚರ್ ಏನಾಗಿದೆ ಪರ್ ಕ್ಯಾಪಿಟಿ ಇನ್‌ಕಂ ಕಳೆದ ವರ್ಷ ಅದು 170 ರೂಪಾಯಿ ಆಗಿದೆ 1975-76ಕ್ಕೆ ಮಾನ್ಯ ಅರ್ಥಮಂತ್ರಿಗಳು ಅವರ ಉತ್ತರ ಹೇಳುವ ಸಂದರ್ಭದಲ್ಲಿ ಅದನ್ನು ಹೇಳುತ್ತಾರೆ.
ಈ ನಿರ್ಣಯದ ಮೇಲೆ ಸಂಪೂರ್ಣವಾದಂಥ ಒಂದು ಚರ್ಚೆಯಾಗಬೇಕೆಂದು ನಾನು ಅಪೇಕ್ಷೆಪಡುತ್ತೇನೆ,ಸಂಪೂರ್ಣವಾಗಿ ಚರ್ಚೆ ಆಗಬೇಕಾದರೆ, ಈ ವಿಚಾರದಲ್ಲಿ ಹೆಚ್ಚು ಆಸಕ್ತಿ ತೋರಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಾ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರೂ ಕೂಡ ಈ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿ, ಯಾವ ಯಾವರೀತಿಯಲ್ಲಿ ಈ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿವೆ ಎಂಬುದನ್ನು ಪ್ರಚುರಪಡಿಸುವುದು ಅವಶ್ಯವಿದೆ. ಈ ಕಾರ್ಯವನ್ನು ಅವರು ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಸ್ಟೇಟ್ ಪರ್‌ಕ್ಯಾಪಟಿ ಎಕ್ಸ್‌ಪೆಂಡಿಂಚರ್ ನಮ್ಮ ರಾಜ್ಯದ್ದು 171 ಕೇಂದ್ರದ್ದು 180. ಈ ಎರಡರ ಹೋಲಿಕೆ ಮಾಡಿ ನೋಡಿದಾಗ ಇರುವ ಅಂತರ ಅತಿ ಇಲ್ಲ. 171 ಸ್ಟೇಟ ಪರ್ ಕ್ಯಾಪಿಟಿ ಎಕ್ಸ್‌ಪೆಂಡಿಂಚರ್ ಮಾಡಿದ್ದೇವಲ್ಲಾ ಎಂದು ನಾವು ಸಂತೋಷಿಸಬಹುದಾಗಿದೆ.

ಇನ್ನು ಸ್ಟೇಟ್ ಪರ್‌ಕ್ಯಾಪಿಟಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಂಚರ್. ಇದರಲ್ಲಿ ಪ್ಲಾನಿಂಗ್ ಮತ್ತು ನಾನ್ ಪ್ಲಾನಿಂಗ್ ಎರಡೂ ಕೂಡ ಬರುತ್ತವೆ. ನಮ್ಮದು ಸ್ಟೇಟ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 93 ರೂಪಾಯಿ ಇದ್ದು, ಇದು ಕೇಂದ್ರಕ್ಕಿಂತ 35 ಜಾಸ್ತಿಯಾಗುತ್ತದೆ. ಇನ್ನು ಸ್ಟೇಟ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಇನ್ ನಾನ್ ಪ್ಲಾನಿಂಗ್‌ನಲ್ಲಿ ನೋಡೋಣ. ಇದರಲ್ಲಿ ನಮ್ಮ ರಾಜ್ಯದ್ದು 38 ಕೇಂದ್ರದ್ದು 60. ಇಲ್ಲಾ ಕೂಡ ಕೇಂದ್ರದವರು ದುಬಾರಿ ಖರ್ಚು ಮಾಡಿದ್ದಾರೆ. ಎಂದು ನಾನು ಹೇಳಬಯಸುವುದಿಲ್ಲ, ಏತಕ್ಕೆಂದರೆ ದೇಶದಲ್ಲಿ ಅವಶ್ಯವಾದ ರಕ್ಷಣೆಯ

ಜವಾಬ್ದಾರಿ ಅವರ ಮೇಲೆ ಇದೆ. ರಕ್ಷಣೆಯ ವಿಚಾರದಲ್ಲಿ ಅವರು ಎಷ್ಟು ಖರ್ಚುಮಾಡಿದರೂ ನನ್ನ ಟೀಕೆ ಇಲ್ಲ. ನಾನು ಹೋಲಿಕೆ ಮಾಡುವುದರ ಉದ್ದೇಶವೇ ಇಷ್ಟು: ನಮ್ಮದು ಈ ರೀತಿ ಇದೆ ಮತ್ತು ಇದು ಸಮಾಧಾನ ತರತಕ್ಕ ರೀತಿಯಲ್ಲಿ ವ್ಯವಹಾರಗಳು ನಡೆದಿವೆ.

ನಮ್ಮ ಸಂಪನ್ಮೂಲಗಳು, ನಮ್ಮ ಹಣಕಾಸಿನ ಶಕ್ತಿ ಮತ್ತು ಭಾರತ ಸರ್ಕಾರದವರು ನಮಗೆ ಕೊಡತಕ್ಕ ಹಣಕಾಸಿನ ಸಹಾಯ—ಇವುಗಳನ್ನು ಅನುಸರಿಸಿ ಮಾಡಿದ ಅಂಕಿ—ಅಂಶಗಳನ್ನು ನಾನು ಇಲ್ಲಿಯತನಕ ಹೇಳಿದೆ. ಆದರೆ, ಇವಿಷ್ಟೇ ಸಂಪನ್ಮೂಲಗಳಲ್ಲದೆ. ಅನೇಕ ಆರ್ಥಿಕ ಸಂಸ್ಥೆಗಳೂ ಕೂಡ ಇವೆ. ಇಂಥವುಗಳೂ ನಮ್ಮ ರಾಜ್ಯದಲ್ಲೂ ಇವೆ; ನಮ್ಮ ರಾಷ್ಟ್ರದಲ್ಲೂಇವೆ; ಮತ್ತು ನಮ್ಮ ರಾಷ್ಟ್ರದ ಹೊರಗಡೆಯೂ ಇವೆ. ಇದರಲ್ಲಿಬಹಳ ಮುಖ್ಯವಾದುದು ಎಂದರೆ ಪ್ರಪಂಚ ಬ್ಯಾಂಕ್ ಪ್ರಪಂಚ ಬ್ಯಾಂಕ್‌ನಿಂದ ನಮಗೆ ಹೆಚ್ಚು ಸಹಾಯವಾಗಿಲ್ಲ. ಈಗ ನಮ್ಮ ರಾಷ್ಟ್ರದ ಅನೇಕ ರಾಜ್ಯಗಳಿಗೆ ಪ್ರಪಂಚ ಬ್ಯಾಂಕ್ ಹಣಕಾಸಿನ ಸಹಾಯವನ್ನು ನೀಡುತ್ತಿದೆ ನಮ್ಮ ರಾಜ್ಯಕ್ಕು ಹಣಕಾಸಿನ ಸಹಾಯ ಕೊಡುತ್ತೇವೆ. ಎಂದು ಪ್ರಪಂಚ ಬ್ಯಾಂಕಿನವರು ಕಮಿಟ್ ಮಾಡಿಕೊಂಡಿದ್ದಾರೆ. ಒಪ್ಪಿಕೊಂಡಿದ್ದಾರೆ. ಇದು ಸುಮಾರು 68 ಕೋಟಿ ರೂಪಾಯಿ. ಪ್ರಪಂಚ ಬ್ಯಾಂಕ್ ನಮ್ಮ ರಾಷ್ಟ್ರದ ನಾನಾ ಸರ್ಕಾರಗಳಿಗೆ—ನಾನಾ ಯೋಜನೆಗಳಿಗೆ ಹಣಕಾಸಿನ ಸಹಾಯವನ್ನು ಒದಗಿಸಿರತಕ್ಕ ಪ್ರಮಾಣ ಮತ್ತು ನಮಗೆ ಒದಗಿಸಿರತಕ್ಕ ಪ್ರಮಾಣಕ್ಕೆ ಹೋಲಿಕೆಮಾಡಿದರೆ, ನಮಗೆ ಶೇಕಡ 12 ಭಾಗ ದೊರಕಿದೆ. ಅಷ್ಟೇ ಅಲ್ಲದೆ,ಪದೇ ಪದೇ ಕ್ಷಾಮ ಡಾಮರಗಳಿಗೆ ಈಡಾಗತಕ್ಕ ಭಾಗಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳಿಗೆ, ಪ್ರಪಂಚ ಬ್ಯಾಕ್ ನಮಗೆ 10 ಕೋಟಿ ರೂಪಾಯಿ ಒದಗಿಸಿದೆ. ಅದೂಕೂಡ ನಮಗೆ ಶೇಕಡ 12 ಭಾಗವಾಗುತ್ತದೆ. ಅಗ್ರಿಕಲ್ಚರಲ್ ರೀ-ಫೈನಾನ್ಸ್ ಬಾಬಿಗೂ ಕೂಡನಮಗೆ 81 ಕೋಟಿ ರೂಪಾಯಿ ಕೊಟ್ಟಿದೆ ಅದೂಕೂಡ ಶೇಕಡ 9 ಭಾಗವಾಗುತ್ತದೆ. ನಮ್ಮ ರಾಜ್ಯದ ಪ್ರಜಾಸಂಖ್ಯೆಗೂ ಮತ್ತು ನಮ್ಮ ರಾಷ್ಟ್ರದ ಪ್ರಜಾಸಂಖ್ಯೆಗೂ ಹೋಲಿಸಿದರೆ, ನಾವು ಕೇವಲ 5 ಭಾಗ ಬರುತ್ತೇವೆ. ಇಷ್ಟು ಜನಸಂಖ್ಯೆಇರತಕ್ಕ ರಾಜ್ಯಕ್ಕೆ ಈ ಪ್ರಪಂಚ ಬಾಂಕಿನಿಂದ ಬಂದಿರತಕ್ಕ ಹಣ ಅಭಿವೃದ್ಧಿ ಕಾರ್ಯಗಳಿಗೆ ಶೇಕಡ 12 ಭಾಗ, ಅಗ್ರಿಕಲ್ಚರಲ್ ರೀ-ಫೈನಾನ್ಸ್ ಬಾಬಿಗೆ ಶೇಕಡ 9ಭಾಗ ಬಂದಿದೆ ಇದನ್ನು ನೋಡಿದಾಗ ನಮ್ಮ ರಾಜ್ಯಕ್ಕೆ ಬರಬೇಕಾದಂಥ ಭಾಗಕ್ಕಿಂತ ಹೆಚ್ಚು ಬಂದಿದೆ ಎಂಬುದು ನಮಗೆ ವೇದ್ಯವಾಗುತ್ತದೆ ಹೀಗೆ ಹೆಚ್ಚು ಬರುವುದಕ್ಕೆ ಕಾರಣವೇನು? ಹೇಗೆ ಬರುತ್ತದೆ? ಈ ಕುರಿತು ನಾವು ವಿಚಾರ ಮಾಡುವುದು ಬಹಳ ಮುಖ್ಯವಾದುದು. ಇಲ್ಲಿಂದ ಬಹುದೂರ, ಲಂಡನ್ ನಗರದಲೋ ನ್ಯೂಯಾರ್ಕ್ ನಗರದಲೋ ಇರುವ ಈ ಬಾಂಕ್ ನಾವು ಕಾಗದ ಪತ್ರಗಳ ಮುಖಾಂತರ ಕಳುಹಿಸಿದ ಯೋಜನೆಗಳನ್ನು ನೋಡಿ ನಮಗೆ ಹಣ ಮಂಜೂರು ಮಾಡುವುದಿಲ್ಲ ಬ್ಯಾಂಕಿನ ತಜ್ಞರು ಇಲ್ಲಿಗೆಬರುತ್ತಾರೆ; ಬಂದು ಇಲ್ಲಿ ಯಾವ ಯೋಜನೆಯನ್ನು ಕೈಗೊಂಡಿದ್ದಾರೆ; ಕೈಗೊಂಡಿರುವ ಯೋಜನೆಗೆ ಯಾವರೀತಿ ಸಿದ್ಧತೆಗಳನ್ನು ಮಾಡಿದ್ದಾರೆ; ಮತ್ತು ಕೈಗೊಂಡಿರುವ ಯೋಜನೆಯನ್ನು ಸಾಧಿಸುವುದಕ್ಕೆ, ಯಶಸ್ವಿಗೊಳಿಸುವುದಕ್ಕೆ ಇವರಿಗೆ ಶಕ್ತಿ ಇದೆಯೆ ಎಂಬ ಅನೇಕ ವಿಚಾರಗಳನ್ನು ಪರಿಶೀಲನೆ ಮಾಡಿ ಸಮರ್ಪಕವಾಗಿ ಇರುವುದು ಅವರಿಗೆ ಕಂಡುಬಂದರೆ ಹಣ ಮಂಜೂರು ಮಾಡುತ್ತಾರೆ, ಇಲ್ಲದಿದ್ದರೆ ಕೊಡುವುದಿಲ್ಲ. ಆದುದರಿಂದ ನಮ್ಮ ರಾಜ್ಯಕ್ಕೆ ಹೆಚ್ಚು ಪ್ರಮಾಣದಲ್ಲಿ ಹಣ ಸಹಾಯ ಮಾಡಲು ಇದೇ ಕಾರಣ ನಮ್ಮ ರಾಜ್ಯದಲ್ಲಿ, ಯಾವುದೇ ಒಂದು ಯೋಜನೆಯನ್ನು ಹಾಕಿಕೊಂಡರು ಕೂಡ, ಅದಕ್ಕೆ ನಮ್ಮ ಜನರಲ್ಲಿರತಕ್ಕ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು, ಆ ಯೋಜನೆಯನ್ನ ಕಾರ್ಯರೂಪಕ್ಕೆ ತರುವಂಥ, ಸಾಧಿಸುವಂಥ ಶಕ್ತಿಯನ್ನು ನಾವು ಪಡೆದಿದ್ದೇವೆ. ಅದು ಮಾನ್ಯ ಸದಸ್ಯರೆಲ್ಲರಿಗೂ ಸಂತೋಷವಾಗಬಹುದು. ನಾವು ಕೈಗೊಂಡಿರತಕ್ಕ ಕಾಳಿ ನದಿ ಯೋಜನೆಕೂಡ—ನಮ್ಮ ಇಂಜಿನಿಯರುಗಳೇ ನಮ್ಮ ಶಿಲ್ಪಿಗಳೇ ಮತ್ತು ನಮ್ಮ ಕೆಲಸಗಾರರೆ ಯೋಚಿಸಿ, ನಿರೂಪಿಸಿದ್ದಾರೆ ಮತ್ತು ಈಗ ಅದನ್ನು ಪೂರ್ಣಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇದು ಬಹಳ ಶ್ಲಾಘನೀಯವಾದದ್ದು- ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು)- ಈ ಬಗ್ಗೆ ಹಿಂದಿನ ಸರ್ಕಾರ ಏನೂ ಮಾಡಿರಲಿಲ್ಲವೆ?

ಶ್ರೀ ಕೆ. ಪುಟ್ಟಸ್ವಾಮಿ- ಈ ಸರ್ಕಾರದವರು ಕೂಡ ಮಲಗಿ ನಿದ್ರೆ ಮಾಡಬಹುದಿತ್ತು ಆದರೆ ಮಾಡಲಿಲ್ಲ. ಶರಾವತಿ ವಿದ್ಯುದಾಗಾರವನ್ನು ಕೈಗೊಂಡಾಗ ನಮ್ಮಲ್ಲಿದ್ದಂಥ ಶಕ್ತಿ ಸಾಮರ್ಥ್ಯಕ್ಕು ಮತ್ತು ಕಾಳಿನದಿ ವಿದ್ಯುದಾಗಾರವನ್ನು ಕೈಗೊಂಡಾಗ ನಮ್ಮಲ್ಲಿದ್ದಂಥ ಶಕ್ತಿ ಸಾಮರ್ಥ್ಯಕ್ಕು

ವ್ಯತ್ಯಾಸವಿದೆ.ಆದರೆ ನಮ್ಮ ಸರ್ಕಾರ ಇವತ್ತು ಯಾವ ಮಟ್ಟವನ್ನು ಮುಟ್ಟಿದೆ ಹೆಚ್ಚು ಪ್ರಗತಿಪರವಾಗಿದ್ದ ಸರ್ಕಾರಗಳು, ಹೆಚ್ಚು ಅಭಿವೃದ್ಧಿ ಸಾಧಿಸಿದಂಥ ನೆರೆ ಸರ್ಕಾರಗಳು, ನಮಗಿಂತ ಹೆಚ್ಚು ಸವಲತ್ತನ್ನು ಹೊಂದಿದ್ದ ಸರ್ಕಾರಗಳು ಇವತ್ತಿನ ದಿವಸ ಹಿಂದೆ ಬಿದ್ದಿವೆ. ನಮಗೆ ಇರತಕ್ಕ ಸೌಲಭ್ಯವನ್ನು ಯೋಗ್ಯ ರೀತಿಯಲ್ಲಿ ವಿನಿಯೋಗಿಸಿಕೊಂಡು ನಾವು ಮುಂದುವರಿಯುತ್ತಿದ್ದೇವೆ. ನಾನು ಈ ಹೋಲಿಕೆಯನ್ನು ಬೇರೆ ರಾಜ್ಯಗಳನ್ನು ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ಮಾಡುತ್ತಾ ಇಲ್ಲ., ನಾವು ಸರಿಯಾದ ರೀತಿಯಲ್ಲಿ ಹೋಗುತ್ತಿದ್ದೇವೆ, ಸರಿಯಾದ ವೇಗದಲ್ಲಿ ಹೋಗುತ್ತಿದ್ದೇವೆ, ಕೈಗೊಂಡಿರತಕ್ಕ ಯೋಜನೆಯನ್ನು ಸಾಧಿಸಬಲ್ಲೆವು ಎಂಬುದನ್ನು ತಿಳಿಯಪಡಿಸಲೋಸುಗ ಹೇಳುತ್ತಿದ್ದೇನೆ, ಮೊನ್ನೆ ತಾನೇ ನಾನು ಕಾಳಿನದಿ ಯೋಜನೆಯನ್ನು ವೀಕ್ಷಣೆ ಮಾಡುವುದಕ್ಕೆ, ಹೋಗಿದ್ದೆ. ಕಳೆದ ಸಾರಿ ಬೇರೆ ಒಂದು ಸಂದರ್ಭದಲ್ಲಿ ಕಾಳಿ ನದಿ ಯೋಜನೆ ಬಗ್ಗೆ ಇಲ್ಲಿ ಚರ್ಚೆಯಾಗಿದ್ದು ಮಾನ್ಯ ಸದಸ್ಯರಿಗೆಲ್ಲ ಜ್ಞಾಪಕವಿರಬಹುದು. ಕಾಂಟ್ರ್ಯಾಕ್ಟರಿಗೆ ಹೆಚ್ಚು ಹಣ ಕೊಟ್ಟರು; ಟವರ್ಸ್ ಎಲ್ಲಾ ಬದಲಾವಣೆ ಮಾಡಿದರು ಎಂಬ ವಿಚಾರಗಳು ಆಗ ಪ್ರಸ್ತಾಪಕ್ಕೆ ಬಂದಿದ್ದವು. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದರ ಜೊತೆಗೆ ಸರ್ಕಾರದವರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಕಾಳಿನದಿ ಯೋಜನೆ ಬಗ್ಗೆ ಅನುಮಾನ ಪಡತಕ್ಕವರನ್ನು ಅಲ್ಲಿಗೆ ಕಳುಹಿಸಬೇಕು ಎಂದು. ಅಲ್ಲಿ ನಡೆಯುತ್ತಾ ಇರತಕ್ಕ ಕಾರ್ಯ ಯಾವ ಪ್ರಮಾಣದ್ದು, ಯಾವ ಮಟ್ಟದ್ದು ಎಂಬುದನ್ನು ಅಲ್ಲಿಗೆ ಹೋಗಿ ನೋಡಿ ಬಂದರೆ, ಇವತ್ತಿನ ದಿವಸ ಸರ್ಕಾರ ಕೈಗೊಂಡಿರತಕ್ಕ ಎಲ್ಲಾ ಕಾರ್ಯಗಳಿಗೂ-ಕೊನೆಗೆ ಕಂಟ್ರ್ಯಾಕ್ಟದಾರರಿಗೆ ನಿಗಧಿಯಾದಂಥ ಅವಧಿಯಲ್ಲಿ ಕೆಲಸ ಮಾಡಲಿಕ್ಕೆ ಕೆಲವು ಸೌಲಭ್ಯಗಳನ್ನು ಒದಗಿಸಿಕೊಟ್ಟು ಮಾಡಿಸಿದ್ದಾರೆ ಎಂದು ವೇದ್ಯವಾಗುತ್ತದೆ.

3-00 P.M.

ನಮ್ಮಲ್ಲಿ ಹೋಗಿ ನೋಡುವುದಕ್ಕೆ ಅವಕಾಶ ಇಲ್ಲ ಅಥವಾ ವ್ಯವಧಾನ ಇಲ್ಲ ಕಾಗದದಲ್ಲಿರತಕ್ಕ ಅಂಕಿಅಂಶಗಳಾ ಮೇಲೆ ಟೀಕೆ ಮಾಡುತ್ತೇವೆಯೋ ಹೊರತು. ಅದನ್ನು ವಾಸ್ತವಿಕತೆಯಿಂದ ನೋಡಿದಾಗ ಅದರ ಅರಿವು ಆಗುತ್ತದೆ. ನಮ್ಮ ಸರಕಾರ ಒಂದು ತಪ್ಪು ಮಾಡಿಕೊಳ್ಳುತ್ತದೆ, ಸ್ವಲ್ಪ ಹೆಚ್ಚಿಗೆ ಹಣ ವೆಚ್ಚವಾದರೂ ಚಿಂತೆಯಿಲ್ಲ, ಆ ಕಡೆ ಸರ್ಕಾರ ಹೆಚ್ಚಿಗೆ ಗಮನಕೊಡಬೇಕು. ಪ್ರಧಾನಿ ಇಂದಿರಾ ಗಾಂಧಿಯವರು 'ಸೂಪಾ ಅಣೆಕಟ್ಟೆಗೆ' ಶಿಲೆಯನ್ನು ಹಾಕಿದ್ದಾರೆ. ನಾನು ಖುದ್ದಾಗಿ ಹೋಗಿ ನೋಡಿ ಅಲ್ಲಿನ ಕೆಲ್ಲಸವನ್ನು ಮೆಚ್ಚಿದ್ದೇನೆ. ನಮ್ಮ ಇಂಜಿನಿಯರ್ಸ್‌ಗಳು ಹಾಗೂ ಇತರೆ ಸಿಬ್ಬಂದಿ ವರ್ಗದವರು ತಮ್ಮ ಸಂಸಾರಗಳನ್ನು ಅವರ ಊರಿನಲ್ಲಿಯೋ, ಬಂದು ಬಳಗದಲ್ಲಿಯೋ ಬಿಟ್ಟು ಅಲ್ಲಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಒಳ್ಳೆಯ ವಾತಾವರಣ ಅಲ್ಲಿ ಇಲ್ಲ, ಆದರೂ ರಾತ್ರಿಹಗಲು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ನಾವು ಮೆಚ್ಚಿಗೆ ಸೂಚಿಸಬೇಕು, ಇನ್ನೂ ಹೆಚ್ಚಿನ ಹುರುಪಿನಿಂದ ಕೆಲಸ ಮಾಡುತ್ತಾರೆ. ವರ್ಲ್ಡ್ ಬ್ಯಾಂಕನಿಂದ ಅಸಿಸ್ಟೆನ್ಸ್ ಬರಬೇಕಾದರೆ ಸುಮ್ಮನೆ ಬರುವುದಿಲ್ಲ ನಮಗೆ ಲಭ್ಯವಾಗುವುದಕ್ಕಿಂತ ಹೆಚ್ಚಿಗೆ ಹಣ ದೊರಕಬೇಕಾದರೆ, ನಾವು ಕೈಗೊಂಡಿರತಕ್ಕ ಕಾರ್ಯವನ್ನು ಅವರು ಮೆಚ್ಚಿದ್ದಾರೆ. ಇದರ ಬೆಳವಣಿಗೆ ಏನು ? ಇದರ ಫಲ ಜನತೆಗೆ ಮುಟ್ಟಿದೆಯೇ ? ಇದು ಜನತೆಗೆ ಮುಟ್ಟಿದೆ ಇದ್ದರೆ ಅದರಿಂದ ಏನೂ ಪ್ರಯೋಜನ ಇಲ್ಲ. ಅದುದರಿಂದ ಇದು ಜನತೆಗೆ ಮುಟ್ಟುತ್ತದೆಯೇ ಎನ್ನುವದನ್ನು ತಿಳಿದು ಕೊಳ್ಳುವುದು ಅವಶ್ಯಕ. ಈ ಬಗ್ಗೆ ತಾವು ಅಲೋಚನೆ ಮಾಡಿದ್ದೀರಾ ? ನಮ್ಮ ತಜ್ಞರು ಇದ್ದಾರೆ, ಅವರು ಅಂಕಿಅಂಶಗಳನ್ನು ಸಂಗ್ರಹಿಸುತ್ತಿದ್ದಾರೆ. ಯಾವ ರೀತಿ ನಮ್ಮ ಆದಾಯ ಪ್ರಮಾಣ ಹೆಚ್ಚುತ್ತದೆಂದು. ಶರಾವತಿ ವಿದ್ಯುತಗಾರದಿಂದ ಬೇಕಾದಷ್ಟು ವಿದ್ಯುಚ್ಛಕ್ತಿಬಂತು ವಿದ್ಯುತಚ್ಛಕ್ತಿಯನ್ನು ಉಪಯೋಗಿಸಿಕೊಂಡು ಸಣ್ಣ ಕಾರ್ಖಾನೆಗಳು ದೊಡ್ಡ ಕಾರ್ಖಾನೆಗಳು ಆದವು. ಕೈಗಾರಿಕೆಗಳು ಹೆಚ್ಚಿದವು, ರೈತರು ಸಹ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡು ಹೆಚ್ಚು ಹೆಚ್ಚು ಬಾವಿಗಳಿಗೆ ವಿದ್ಯುತ ಉಪಯೋಗಿಸಿ, ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರಿಂದ ಅದಾಯವೂಕೂಡ ಹೆಚ್ಚಿದೆ.

ಶ್ರೀ ಕೆ: ಹೆಚ್. ಹನುಮೇಗೌಡ.—ಬಡತನದ ರೇಖೆ ತಮ್ಮ ಅಧಿಕಾರ ಪ್ರಾರಂಭವಾದ ಮೇಲೆ ಏಕ್ಕಿದೆ ಎನ್ನುವುದಕ್ಕೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ನಿಮಗೆ ಬ್ರಾಂತು, ಬಡತನ ಇಲ್ಲಎಂದು ಹೇಳುತ್ತಿಲ್ಲ. ಬಡತನ ಕಡಿಮೆ ಮಾಡುವುದಕ್ಕೆ, ದಾರಿದ್ರ್ಯ ನಿವಾರಣೆ ಮಾಡುವುದಕ್ಕೆ ಈ ರಾಜ್ಯ ಸರ್ಕಾರ ಏನು ಮಾಡುತ್ತಿದೆ........

ಶ್ರೀ ಕೆ. ಹೆಚ್. ಹನುಮೇಗೌಡ. –ಬಡತನದ ರೇಖೆ ಕೆಳಗಡೆ ಇರತಕ್ಕವರ ಸಂಖ್ಯೆ ಏರುತ್ತಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ರಾಜ್ಯದಲ್ಲಿ 1955–56, 56-57ರಲ್ಲಿ ಧಾರಣೆವಾಸಿಗಳು ಹೇಗಿದ್ದುವು, ಆದರ ಮೇಲೆ ಎಷ್ಟು ಉತ್ಪನ್ನಬರುತ್ತಿತ್ತು ಎನ್ನುವುದನ್ನು ನಿರ್ಧಾರ ಮಾಡಿದ್ದಾರೆ. ಈಗ ಎಷ್ಟು ಉತ್ಪನ್ನ ಬರುತ್ತಿದೆ ? ಅವೊತ್ತಿನ ದಿನದ ಆಧಾರದ ಮೇಲೆ ಲೆಕ್ಕ ಹಾಗದರೆ, ಆ ದಿನ ನಮ್ಮಲ್ಲಿ 911 ಕೋಟಿ ಇತ್ತು. ಈಗ 997 ಕೋಟಿ ರೂ. ಆಗಿದೆ. ಸುಮಾರು 86 ಕೋಟಿ ರೂಪಾಯಿ ಹೆಚ್ಚಾಗಿದೆ. ಇದರ ವಾರ್ಷಿಕ ಬೆಳವಣಿಗೆ ಎಷ್ಟು 3.1 ಹಾಗೆ ರಾಷ್ಟ್ರದಲ್ಲಿ 1.3. ನಮ್ಮ ತಜ್ಞರು ಅಂಕಿಅಂಶಗಳನ್ನು ಸಂಗ್ರಹ ಮಾಡುತ್ತಾರೆ. ಇದರಿಂದ ನಮ್ಮ ವಾರ್ಷಿಕ ಆದಾಯವೂ ಕೂಡ ಹೆಚ್ಚುತ್ತದೆ. ರಾಷ್ಟ್ರದ ಮಟ್ಟಕಿಂತ ಹೆಚ್ಚಿನ ಮಟ್ಟದಲ್ಲಿದೆ. ಅದಕ್ಕೆ ಕಾರಣ ನಮ್ಮಲ್ಲಿ ಪ್ರಕೃತಿದತ್ತವಾದ ಸೌಲಭ್ಯಗಳನ್ನು ನಮ್ಮ ಮುಂದಿನ ಅಭಿವೃದ್ಧಿಗಾಗಿ ಒಳಪಡಿಸಿರುವುದು. ಶರಾವತಿ ಹಿಂದಿನಕಾಲದಿಂದಲೂ ಹರಿಯುತ್ತಿತು. ದಿವಂಗತರಾದ ಪೂಜ್ಯ ವಿಶ್ವೇಶ್ವರಯ್ಯನವರು ಶರಾವತಿ ನೋಡಿದಾಗ ಅವರು ಬರೆದಿಟ್ಟಿದ್ದಾರೆ, “ವಾಟ ಎ ವೇಸ್ಟ್” ಇಂಥ ಅಗಾಧವಾದ ಶಕ್ತಿಯನ್ನು ಉಪಯೋಗಿಸುವುದಕ್ಕೆ ಸಾಧ್ಯವಿಲ್ಲ ಎಂದು ಅವರು ಪಶ್ಚಾತ್ತಾಪ ಪಟ್ಟಿದ್ದಾರೆ, ದುಃಖಪಟಿದ್ದಾರೆ. ಆ ಒಂದು ಸ್ಥಿತಿಯಲ್ಲಿ ನಾವು ಈಗ ಇಲ್ಲ. ಅಂದು ಈ ಕಾರ್ಯ ಮಾಡುವುದಕ್ಕಾಗುತ್ತಿರಲಿಲ್ಲ. 1945ರಲ್ಲಿ ಹಿರೇಭಾಸ್ಕರ ಅಣೆಕಟ್ಟು, ಮಹಾತ್ಮಗಾಂಧಿ ವಿದ್ಯುತಗಾರ ಸ್ಥಾಪನೆ ಮಾಡುವುದಕ್ಕೆ ಆಗುತ್ತಾಇರಲಿಲ್ಲ. ನಮ್ಮ ರಾಜ್ಯದ ಆದಾಯ ಕರೆಂಟ್ ಪ್ರೈಸೆಸನಲ್ಲಿ 1971–72ರಲ್ಲಿ 1,632 ಕೋಟಿ ಇತ್ತು. ಅದು ಈಗ 1974–75ಕ್ಕೆ 2,544 ಕೋಟಿ ಆಗಿದೆ. ರಾಷ್ಟ್ರೀಯ ವರಮಾನ ಶೇಕಡ 16 ಇದೆ. ರಾಷ್ಟ್ರದ ಮಟ್ಟಕ್ಕೆ ಹತ್ತಿರದಲ್ಲಿದ್ದೇವೆ.

ಈವೊತ್ತಿನ ದಿವಸ ರೂಲಿಂಗ್ ಪ್ರೈಸಸನ್ನು ನೋಡಿದರೆ ಅದರಲ್ಲೂ ಕೂಡ ನಾವು ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳಬಹುದು. ಆದರೆ ಶ್ರೀಮಾನ್ ಮಂಜುನಾಥರವರು ಕೇಳಬಹುದು ಈ ವ್ಯವಸಾಯಕ್ಕೆ ಹೆಚ್ಚು ಖರ್ಚಾಗುವುದಿಲ್ಲವೇ ಎಂದು ಕೇಳಬಹುದು. ಆ ವಿಷಯದಲ್ಲಿ ಹೇಳುವುವಾದರೆ ಈ ವ್ಯವಸಾಯದ ಕೂಲಿಗಾರರಿಗೆ ನಾನು ಹೆಚ್ಚಿನ ಒಂದು ಕೂಲಿ ಕೊಡಲೇಬೇಕಾಗುತ್ತದೆ, ಈ ಒಂದು ಹೆಚ್ಚಿನ ಖರ್ಚು ಬಿದ್ದರೂ ಕೂಡ ನಾವು ಅದಕ್ಕೆ ಹಿಂದೆ ಬೀಳುತ್ತಾ ಇಲ್ಲ. ಮುಂದೆ ಮುಂದೆ ಹೋಗುತಾ ಇದ್ದೇವೆ. ಇದು ನಮಗೆ ಒಂದು ಸಂತೋಷ ಉಂಟು ಮಾಡತಕ್ಕಥ ವಿಷಯ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಹಿಂದೆ ಸ್ಟೇಟ್ ಪರ್ ಕ್ಯಾಪಿಟಾ ಇನ್‌ಕಂ 540 ಇದ್ದುದು ಈವೊತ್ತು 784 ಆಗಿದೆ, ಇದರ ಗ್ರೋತ ರೇಟ್ ಕೂಡ 13.4 ರಷ್ಟು ಆಗಿದೆ. ರಾಷ್ಟ್ರದ ಗ್ರೋತದ ರೇಟ್ ತೆಗೆದುಕೊಂಡರೆ 13.7 ಇದೆ. ಇದರಲ್ಲೂ ಕೂಡ ನಾವು ಅದರ ಹತ್ತಿರ ಹತ್ತಿರ ಹೆಜ್ಜೆ ಇಟುಕೊಂಡು ಹೋಗಿದ್ದೇವೆ, ಎಂದು ಹೇಳಬಹುದು. ಈವೊತ್ತು ಸ್ಟೇಟ್ ಪರ್ ಕ್ಯಾಪಿಟಾ ಇಕನ್‌ಂ 784, ಇದೆ, ನ್ಯಾಷನಲ್ ಪರ್ ಕ್ಯಾಪಿಟಾ ತೆಗೆದುಕೊಂಡರೆ ಅದರ ಇನ್‌ಕಂ 850 ಇದೆ. ನಮ್ಮ ರಾಜ್ಯದ ಇನ್‌ಕಂ 784 ಇದೆಯೊಂದು ತಾವು ಏನು ಸಾಧಿಸಿದ್ದೀರಿ ಎಂದು ಕೇಳಬಹುದು. ಬಾಂಬೆ, ಕಲ್ಕತ್ತಾ, ಡೆಲ್ಲಿ, ಮದ್ರಾಸ್ ಇವುಗಳು ದೇವು ಪಟ್ಟಣಗಳಾಗಿವೆ ಮತ್ತು ಅಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಬಂದಿವೆ, ಇವೆಲ್ಲಾ ನ್ಯಾಷನಲ್ ಪರ್ ಕ್ಯಾಪಿಟಾ ಇನ್‌ಕಂಗೆ ಬರುತ್ತದೆ. ನಮಗೆ ಆ ಸೌಲಭ್ಯಗಳು ಇಲ್ಲ. ನಮಗೆ ಅಷ್ಟು ಪ್ರಮಾಣದಲ್ಲಿ ಸೌಲಭ್ಯಗಳು ಇಲ್ಲದೇ ಇದ್ದರೂ ಕೂಡ ನಾವು ಇಷ್ಟು ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆಲ್ಲಾ ಅನ್ನುವುದು ಸಂತೋಷ ಉಂಟುಮಾಡತಕ್ಕಂಥ ವಿಷಯ ಎಂದು ನಾನು ಹೇಳುತ್ತೇನೆ;

ಇನ್ನು ಅನ್‌ಎಂಪ್ಲಾಯಮೆಂಟ್ ವಿಷಯ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ಈಗ ಅತ್ಯಧಿಕ ಸಂಖ್ಯೆಯಲ್ಲಿ ವಿದ್ಯಾವಂತರು ಬರುತ್ತಿದ್ದಾರೆ- ಅವರಿಗೆಲ್ಲಾ ಉದ್ಯೋಗ ಒದಗಿಸುವುದು ಅವಶ್ಯಕವಿದೆ. ಅದಕ್ಕೋಸ್ಕರವಾಗಿಯೇ ನಾವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿ

ದ್ದೇವೆ. ಕಾಳೀನದಿ ಯೋಜನೆ ಇನ್ನು ಇತರ ಯೋಜನೆಗಳನ್ನು ಕೈಗೊಂಡಿದ್ದೇವೆ. ಇದರಿಂದ ಈಗಾಗಲೇ ಅನೇಕ ಜನರಿಗೆ ಉದ್ಯೋಗ ಸಿಕ್ಕಿದೆ. ಈ ಕಾಳೀನದಿ ಯೋಜನೆ ಪೂರ್ಣವಾದ ಮೇಲೆ ಎಷ್ಟೋ ಜನರಿಗೆ ಉದ್ಯೋಗ ಒದಗಿಸಲು ಅವಕಾಶವಾಗುತ್ತದೆ. ಇದನ್ನು ತಾವುಗಳು ಊಹಿಸಿಕೊಳ್ಳುವುದಕ್ಕೆ ಶಕ್ತಿ ಇದೆ. ಅದಕ್ಕಾಗಿಯೇ ನಾವು ಇವೆಲ್ಲಾ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ನಮ್ಮಲ್ಲಿ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಉದ್ಯೋಗ ಸಿಗಬಹುದು ಎನ್ನುವುದಕ್ಕೆ ಸರ್ಕಾರದಲ್ಲಿ ಇರತಕ್ಕಂಥ ಅಂಕಿಅಂಶಗಳಾದ, ಸರ್ಕಾರದಲ್ಲಿ ಒಂದು ವ್ಯವಸ್ಥಿತವಾಗಿರತಕ್ಕಂಥ ಸಂಸ್ಥೆಗಳಿಂದ ಅಂಕಿಅಂಶವನ್ನು ಒದಗಿಸಲಾದೆ. ಕೆಲವು ಅರ್ಗನೈಜರ ರಿಕ್ವಾರ್‌ನಲ್ಲಿ ಇಲ್ಲದೆಇರುವುದೂ ಇದೆ. ಆ ಬಗ್ಗೆ ತಮಗೆ ಒಸದು ನಿದರ್ಶನ ಕೊಡುತ್ತೇನೆ. ಒಬ್ಬ ರೈತನಿಗೆ 4 ಎಕರೆ ಹೊಲ ಇದೆ ಎಂದು ಇಟ್ಟುಕೊಳ್ಳೋಣ. ಅವನಿಗೇನೇ ಅದರಲ್ಲಿ ಸಾಕಷ್ಟು ಕೆಲಸ ಒದಗುವುದಿಲ್ಲ. ಅವನ ಮನೆಯಲ್ಲಿ ಇರತಕ್ಕಂಥಾವರೆಲ್ಲರೂ ಸೇರಿ ಆ 4 ಎಕರೆ ಹೊಲದಲ್ಲಿ ರಾಗಿ ಜೋಳ ಬೆಳೆದರೆ ಅದರಿಗೆ ಪೂರ್ಣವಾಗಿ ಅದರಲ್ಲೇ ಬೆಳೆಯುವ ಆಹಾರ ಒದಗುತ್ತದೆ. ಅವನು ಬಾವಿ ತೆಗೆದು ಅದರಲ್ಲಿ ಸಂಪೂರ್ಣವಾಗಿ ಜಲ ಬಂದು ಅದರಲ್ಲಿ ನೀರಾವರಿ ಸೌಕರ್ಯ ಮಾಡಿಕೊಂಡಲಿ ಆಗ ಆ 4 ಎಕರೆ ಭೂಮಿಯಲ್ಲಿ ಅವರ ಮನೆಯವರೂ ಕೆಲಸ ಮಾಡುತ್ತಾರೆ ಜೊತೆಗೆ ಅನೇಕ ಜನರಿಗೆ ಕೆಲಸವನ್ನೂ ಕೂಡ ಒದಗಿಸಿಕೊಡಬಹುದು. ಅದರೆ ಈ ಲೆಕ್ಕ ಸರ್ಕಾರಕ್ಕೆ ಸಿಕ್ಕುವುದಿಲ್ಲ. ಇದನ್ನು ತಾವು ಗಮನದಲ್ಲಿಡಬೇಕು ಈ ಒಂದು ಲೆಕ್ಕಾಚಾರ ಹಾಕಿಕೊಂಡರೆ ನಮ್ಮಲ್ಲಿ 1971-72ರಲ್ಲಿ 8 ಲಕ್ಷ 60 ಸಾವಿರ ಉದ್ಯೋಗ ಇದ್ದುದು ಈಗ 10 ಲಕ್ಷಕ್ಕೆ ಬಂದಿದೆ. ಇದರ ಅವರೇಜ್ ಗ್ರೋತ್ ರೇಟ್ 5.6 ಅಗಿದೆ. ಆದರೆ ಇದು ರಾಷ್ಟ್ರದಲ್ಲಿ ಕೇವಲ [illegible] ಪರ್ಸೆಂಟ್ ಮಾತ್ರ ಇದೆ. ಅದುದರಿಂದ ಈ ಉದ್ಯೋಗ ಒದಗಿಸುವುದರಲ್ಲೂ ಕೂಡ ನಾವು ಯಶಸ್ವಿಯಾಗಿದ್ದೇವೆ. ಹೆಚ್ಚಿನ ಒಂದು ಉದ್ಯೋಗಾವಕಾಶವನ್ನು ನಮ್ಮ ಯುವಕರಿಗೆ ನಾವು ಒದಗಿಸಿಕೊಟ್ಟಿದ್ದೇವೆ. ಹಾಗೆ ಇದ್ದರೆ ಅನ್‌ಎಂಪ್ಲಾಯಮೆಂಟ್ ಕಡಿಮೆಯಾಗಬೇಕಲ್ಲ ಎಂದು ತಾವು ಕೇಳಬಹುದು. ನಾನು ಅನ್‌ಎಂಪ್ಲಾಯಮೆಂಟ್ ಕಡಿಮೆಯಾಗಿದೆ ಅನ್ನುವ ವಾದಕ್ಕೆ ಹೋಗುವುದಿಲ್ಲ. ಅನ್‌ಎಂಪ್ಲಾಯಿಮೆಂಟ್ ಒಂದು ಹೆಚ್ಚಿನ ಸಂಖ್ಯೆಯಲ್ಲಿ ಸಿಗದಿದ್ದರೂ ಆದರಲ್ಲಿರುವ ಸಂಖ್ಯೆ ಕಡಿಮೆ ಇದೆ ಎಂದು ಹೇಳಬಹುದು. ನಮ್ಮಲ್ಲಿ ಹಿಂದೆ 2 ಲಕ್ಷ 70 ಸಾವಿರ ಜನ ಅನ್‌ಎಂಪ್ಲಾಯಮೆಂಟ್ ಇದ್ದುದು ಈವೊತ್ತು 3 ಲಕ್ಷ 90 ಸಾವಿರಕ್ಕೆ ಹೋಗಿದೆ. ಇದರ ಗ್ರೋತ್ ರೇಟ್ ಶೇಕಡ 13 ಆಗಿದ. ಆದರೆ ನ್ಯಾಷನಲ್ ಲೆವಲ್‌ನಲ್ಲಿ ಇದು 19 ಆಗಿದೆ. ಅಲ್ಲಿ ಏನು ಒಂದು ಪ್ರಮಾಣದಲ್ಲಿ ನಿರುದ್ಯೋಗ ಬೆಳೆದಿದೆ ಆ ಒಂದು ಪ್ರಮಾಣದಲ್ಲಿ ನಮ್ಮಲ್ಲಿ ಬೆಳೆದಿಲ್ಲ. ಸರ್ಕಾರ ಈಗ ಕೈಗೊಂಡಿರತಕ್ಕಂತ ಯೋಜದೆ ಕೈಗೊಡಿದರೆ, 5ನೇ ಪಾಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಷ್ಟುಜನರಿಗೆ ಉದ್ಯೋಗ ಇದಗಿಸುವುದಕ್ಕಾಗುತ್ತದೆ ಅನ್ನುವುದನ್ನು ತಾವೇ ಊಹೆ ಮಾಡಿಕೊಳ್ಳಬೇಕು. ಬಹುಶಃ ನಮ್ಮಲ್ಲಿ ಎಲ್ಲರಿಗೂ ಉದ್ಯೋಗಾವಕಾಶ ದೊರೆಯಬಹುದು. ನಾವು ಕೈಗೊಂಡಿರತಕ್ಕಂಥ ನೀರಾವರಿ ಕಾಮಗಾರಿಗಳು ಕೈಗೂಡಿದರೆ ಈಗಾಗಲೇ ನಾವು ಅದರ ಹತ್ತಿರ ಹತ್ತಿರ ಬರುತ್ತಿದ್ದೇವೆ, ಎಲ್ಲರಿಗೂ ಉದ್ಯೋಗ ಸಿಗಬಹುದು. ಈಗಾಗಲೇ ಕಬಿನಿ ಕಾರ್ಯ ಮುಗಿದಿದೆ, ಹಾಗೆಯೇ ಘಟಪ್ರಭಾ, ಮಲಪ್ರಭಾ ತೆಗೆದುಕೊಂಡರೆ ಅದರ ಕಾರ್ಯಗಳೂ ಕೊಡ ಮುಗಿದಿವೆ. ಇದರ ನೀರಾವರಿ ಸೌಲಭ್ಯ ಅಲ್ಲಿಯ ಜನತೆಗೆ ದೊರತರೆ ಅನಂತರ ನಮ್ಮ ಕೃಷ್ಣಾ ನದಿಯ ಜಲರಾಶಿಯನ್ನು ಉಪಯೋಗಿಸಿಕೊಳ್ಳುವ ಒಂದು ಸುದಿನ ಬಂದ ಕಾಲದಲ್ಲಿ ಈ ದೇಶದಲ್ಲಿ, ಜೇನು ಹೊಳೆ ಹರಿದಂತೆ ಆಗಬಹುದು. ಅದುವರಿಗೆ ನಾವು ಇಲ್ಲದಿದ್ದರೂ ಕೂಡ ಶ್ರೀಮಾನ್ ಮಂಜುನಾಥರವರು ಇಲ್ಲಿ ಇರಲಿ ಎಂದು ಹಾರೈಸುತ್ತೇನೆ. ನೀವು ಕೃಷ್ಣಾ ನದಿಯ ಜಲರಾಶಿಯನ್ನು ಉಪಯೋಗಿಸಿಕೊಳ್ಳಲು ಸಾಧ್ಯವೇ ಎಂದು ಕೇಳಬಹುದು.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) —ಈವೊತ್ತಿನ ದಿವಸ ಎಷ್ಟೋಜನ ಹೊಟ್ಟೆಗಿಲ್ಲದೇ ಸಾಯುತ್ತಿದ್ದಾರೆ, ನಿಮ್ಮನ್ನು ದಿನಾಶಪಿಸುತ್ತಿದ್ದಾರೆ, ನೀವು ''ಜೇನು ಹೊಳೆ ಹರಿಸುತ್ತೇವೆ'' ಅಂತ ಹೇಳುತ್ತೀರಿ........

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಅಗಲೇ ಹೇಳಿದ್ದೇನೆ, ನಿಮಗೆ ಯಾವ ಔಷಧಿ ಕೊಟ್ಟರೂ ಕೂಡ ನಿಮ್ಮ ಕಣ್ಣಿಗೆ ಅರಿಶಿನ ಬಣ್ಣ ಅಗಿದ್ದರೆ ನಾನೇನು ಮಾಡಲಿ ? ಹಳದಿ ಬಣ್ಣದ ರೋಗವಿರುವವರಿಗೆ ಎಲ್ಲವೂ ಹಳದಿ ಬಣ್ಣದಂತೆ ಕಾಣುತ್ತದೆ.

ಶ್ರೀ ಟಿ. ಎಂ. ಮಜುನಾಥ.—ತಾವು ಬಿಳಿ ಬಣ್ಣದ ಕನ್ನಡಕ ಹಾಕಿಕೊಂಡಿರುವುದರಿಂದ ಎಲ್ಲವೂ ತವಗೆ ಬಿಳಿಯಾಗಿ ಕಾಣುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಮಂಜುನಾಥ ಅವರು ನಾನು ಈ ಹಿಂದೆ ಮಾಡಿರುವ ಭಾಷಣಗಳನ್ನು ಓದಿ ನೋಡಿದರೆ ತಿಳಿಯುತ್ತದೆ. ಏನೆಂದರೆ, ನಾನು ಸಮಯಕ್ಕೆ ತಕ್ಕಂತೆ ಯಾವಗಲೂ ಭಾಷಣ ಮಾಡಿಲ್ಲ, ನನಗೆ ಏನು ತೋರುತ್ತದೆ. ಅದನ್ನು ನಿರ್ಭಯವಾಗಿ ಪ್ರತಿ ಸಲವೂ ವ್ಯಕ್ತ ಮಾಡಿದ್ದೇನೆ. ಮೆಚ್ಚುಗೆ ಸೂಚಿಸುವ ಸಂದರ್ಭದಲ್ಲಿ ಮೆಚ್ಚುಗೆಯನ್ನು ಸೂಚಿಸಿದ್ದೇನೆ. ಅಗ್ರಹ ಸೂಚಿಸುವ ಸಂದರ್ಭದಲ್ಲಿ ಅಗ್ರಹ ಸೂಚಿಸಿದ್ದೇನೆ ಅಂದರೆ ಅಗ್ರಹ ಸೂಚಿಸುವ ಸಂದರ್ಭದಲ್ಲಿ ನಾನು ಸೌಮ್ಯವಾಗಿ ಸೂಚಿಸಿರಬಹುದು.

ಮುಖ್ಯವಾಗಿ ನಾವು ಉದ್ಯೋಗ ಒದಗಿಸುವುದರಲ್ಲಿ ಯಶಸ್ವಿಗಳಿಸಿದ್ದೇವೆ. ನಮ್ಮ ಇಂಡಿಯಾ ದೇಶವೇ ವ್ಯವಸಾಯ ದೇಶವಾಗಿದೆ. ನಮ್ಮ ರಾಜ್ಯದಲ್ಲಿಯೂ ಸಹ ಶೇಕಡಾ 70ರಷ್ಟು ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ವ್ಯವಸಾಯದ ಕ್ಷೇತ್ರದಲ್ಲಿ ನಾವು ಯಾವ ರೀತಿ ಪ್ರಗತಿ ಸಾಧಿಸಿದ್ದೇವೆಂಬುದನ್ನು ಪರಿಶೀಲನೆಮಾಡಿ ನೋಡುವುದಾದರೆ, 1971-72ರಲ್ಲಿ 60 ಲಕ್ಷ ಟನ್ ಆಹಾರಧಾನ್ಯಗಳ ಉತ್ಪಾದನೆಯಾಗಿದ್ದರೆ, 1974-75ರಲ್ಲಿ 66 ಲಕ್ಷ ಟನ್ ಆಗಿದೆ. ಈಗ ಅಂದರೆ 1975-76ರಲ್ಲಿ ಬಹುಶಃ 67 ಲಕ್ಷ ಟನ್ ಉತ್ಪಾದನೆಯಾಗಬಹುದೆಂದು ಅಂದಾಜು ಮಾಡಿದ್ದಾರೆ. ಅಂಗೈ ಹುಣ್ಣಿಗೆ ಕನ್ನಡಿ ಏತಕ್ಕೆ ಬೇಕು? ಈ ಒಂದು ಅಂಕಿಅಂಶಗಳಿಂದಲೇ ನಾವು ಆಹಾರಧಾನ್ಯದಲ್ಲಿ ಹಿಂದಿನ ವರ್ಷಗಳಿಗಿಂತ ಹೆಚ್ಚು ಬೆಳೆದಿದ್ದೇವೆಂಬುದು ಅರ್ಥವಾಗುತ್ತದೆ. ಜೊತೆಗೆ ಬೇಸಿಗೆ ಬೆಳೆಯನ್ನು ಸಹ ಹೆಚ್ಚು ಪ್ರಮಾಣದಲ್ಲಿ ಬೆಳೆಯಲು ನಮಗೆ ಅವಕಾಶವಿದೆ. ಮುಖ್ಯವಾಗಿ ನಾವು ಆಹಾರ ವಲಯದಲ್ಲಿ ಗಮನಾರ್ಹವಾದಂಥ, ನಾವು ಸಂತೋಷ ಪಡುವಂತಹ ಪ್ರಗತಿಯನ್ನು ಸಾಧಿಸಿದ್ದೇವೆ. ಇದೇ ಸಮಯದಲ್ಲಿ ನಮಗೆ ಅಪಾರವಾದ ಕರುಣೆಯನ್ನು ತೋರಿಸಿದ ಪ್ರಕೃತಿದೇವಿಗೆ ನಾವೆಲ್ಲರೂ ಕೃತಜ್ಞರಾಗಿರಬೇಕಾಗಿತ್ತೆ. 1972ರಲ್ಲಿ ಬಿಜಾಪುರ, ಗುಲ್ಬರ್ಗ ಮುಂತಾದ ಕಡೆಗಳಲ್ಲಿ ಭೀಕರ ಬರಗಾಲ ಬಂದಾಗ ಅಲ್ಲಿಯ ರೈತರನ್ನು ಹೆಚ್ಚು ಬೆಳೆಯಿರಿ ಎಂದರೆ ಅವರು ಏನು ಬೆಳೆಯುವುದಕ್ಕೆ ಸಾಧ್ಯವಿತ್ತು? ಅವರಿಗೆ ಆಗ ಕುಡಿಯುವ ನೀರನ್ನು ಸಹ 20 ಮೈಲಿ ದೂರದಿಂದ ಸಾಗಿಸಿ ಕೊಡಬೇಕಾಗಿತ್ತು ಆ ಒಂದು ಪರಿಸ್ಥಿತಿ ಅಂದು ಬರದಿದ್ದರೆ ನಮ್ಮ ರಾಜ್ಯದ ಪರಿಸ್ಥಿತಿ ಇಂದು ಇನ್ನೂ ಆಹ್ಲಾದಕರವಾಗಿರುತ್ತಿತ್ತು.

[ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ನಾವು ಸರ್ಕಾರದ ಒಂದು ಸಾಧನೆಯನ್ನು ತುಲನೆ ಮಾಡುವಾಗ ಈ ಹಿಂದೆ ಏನು ತೊಂದರೆಗಳು ಬಂದಿದ್ದವು ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಆ ಒಂದು ತೊಂದರೆಗಳನ್ನೆಲ್ಲಾ ನಾವು ನಿಭಾಯಿಸಿಕೊಂಡು ಇಂತಹ ಒಂದು ಪ್ರಗತಿಯನ್ನು ಆಹಾರವಲಯದಲ್ಲಿ ಸಾಧಿಸಿದ್ದೇವೆ. ಇದು ಯಾರಿಂದ ಸಾಧ್ಯವಾಯಿತು? ಆಯಿಲ್ ಸೀಡ್ಸ್ ತೆಗೆದು ಕೊಂಡರೆ 8.80 ಲಕ್ಷ ಟನ್‌ಗಳಿಂದ 9.20 ಲಕ್ಷ ಟನ್‌ಗಳಿಗೆ ಹೆಚ್ಚಿದೆ. ಹತ್ತಿಯ ಬೆಳೆ 5 80 ಲಕ್ಷ ಬೇಲುಗಳಿಂದ 7.70 ಲಕ್ಷ ಬೇಲುಗಳಿಗೆ ಹೋಗಿದೆ. ಕಬ್ಬಿನ ಬೆಳೆ ಸಹ 91 8 ಲಕ್ಷ ಟನ್‌ಗಳಿಂದ 96-8 ಲಕ್ಷ ಟನ್‌ಗಳಿಗೆ ಹೋಗಿದೆ. ಇದನ್ನೆಲ್ಲಾ ನೋಡಿದರೆ ಆಹಾರವಲಯದಲ್ಲಿ ಇಡೀ ದೇಶದಲ್ಲಿ ನಮ್ಮ ರಾಜ್ಯವೇ ಮುಂದಿದೆ ಎಂದು ಹೇಳಬಹುದು, ಆಹಾರವಲಯವನ್ನು ತೆಗೆದುಕೊಂಡರೆ, ರಾಷ್ಟ್ರದಲ್ಲಿ ನಮಗಿಂತ 2 ನೆಗೆಟಿವ್ ಗ್ರೋಥ ಆಗಿದೆ. ಅಂದರೆ ನ್ಯಾಷನಲ್ ಗ್ರೋತ್ 3.6 ಇದ್ದರೆ ನಮ್ಮದು 3 8 ಕ್ಕೆ ಮುಂದೆ ಹೋಗಿದೆ. ಇದರಿಂದ ನಾವು ಪ್ರಗತಿ ಸಾಧಿಸುತ್ತಿದ್ದೇವೆಂದ ಅರ್ಥವಾಗುತ್ತದೆ. ಇದರಿಂದ ನಾವು ಬರುವವರ್ಷಗಳಲ್ಲಿ ಆಹಾರವಲಯದಲ್ಲಿ ಇನ್ನೂ ಮುಂದೆ ಹೋಗಬಹುದೆಂಬ ಕಲ್ಪನೆಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮ ರಾಜ್ಯದ ಕೇಲವು ಅಣೆಕಟ್ಟುಗಳ ಕೆಲಸ ಈಗ ಮುಗಿದಿದೆ. ಸಹಸ್ರಾರು ಅಣೆಕಟ್ಟುಗಳ ಕೆಲಸಗಳು ಈಗ ಪ್ರಗತಿಯಲ್ಲಿವೆ. ಅದೇ ರೀತಿ ಅನೇಕ ಏತದ ನೀರಾವರಿ ಕೆಲಸಗಳನ್ನು ಕೈಕೊಂಡಿದ್ದಾರೆ. ಈ ಕಾರಣದಿಂದ ಮುಂದಿನ ವರ್ಷ ನಮ್ಮ ಆಹಾರದ ಪರಿಸ್ಥಿತಿ ಇನ್ನೂ ಉತ್ತಮವಾಗುತ್ತದೆಂದು ನಾನಾದರೂ ನಿರೀಕ್ಷೆ

ಮಾಡುತ್ತೇನೆ. ಈ ದಶಕದ ಕೊನೆಯಲ್ಲಿ ಅಂದರೆ 1980ಕ್ಕೆ ಮುಂಚೆಯೇ ನಾವು ಆಹಾರ ವಲಯದಲ್ಲಿ ಸಂಪೂರ್ಣವಾದಂಥ ಸ್ವಾವಲಂಭವೆಯನ್ನು ಮುಟ್ಟುವುದೇ ಅಲ್ಲದೆ ಚಹುಶ ನೆರಯರಾಜ್ಯಗಳಿಗೂ ಆಹಾರವನ್ನು ಒದಗಿಸುವಂತಹ ಒಂದು ಸ್ಥಿತಿಗೆ ನಾವು ಮುಟ್ಟುತ್ತೇವೆಂಬುದರಲ್ಲಿ ಯಾವ ಒಂದಕ್ಕೆ ಅನುಮಾನವೂ ಇಲ್ಲ, ಇವೊತ್ತು ನಾವು ಭೂಮಿಯನ್ನು ವಿಸ್ತಾರ ಮಾಡಿಕೊಂಡು ಹೋಗುವುದು. ಸಾಧ್ಯವಿಲ್ಲ, ನಮ್ಮ ರಾಜ್ಯದಲ್ಲ ಹಣದ ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶವಿದೆ. ಆದರೆ ಒಬ್ಬ ರೈತನಿಗೆ ಎರಡು ಎಕರೆ ಭೂಮಿ ಇದ್ದರೆ ತನ್ನ ಮನೆಗೆ ಭತ್ತವನ್ನೇ ಆತ ಬೆಳೆಯಬೇಕಾಗುತ್ತದೆ. ಕಬ್ಬು ಬೆಳೆಯಲು ಅವಕಾಶವಿದ್ದರೂ ಭತ್ತವನ್ನು ಬೆಳೆಯಬೇಕಾಗುತ್ತದೆ ಆದರೆ ಇಂದು ತಜ್ಞರು ಸುಧಾರಿತವಾದಂಥ ವಿಧಾನಗಳನ್ನು ಕಂಡುಹಿಡಿದಿರುವುದರಿಂದ, ಹೆಚ್ಚು ಬೆಳೆ ಕೊಡುವಂಥಹ ಧಾನ್ಯಗಳು ಬಂದಿವೆ. ಇದರಿಂದ ರೈತನು ಒಂದು ಎಕರೆಯಲ್ಲಿ ಭತ, ಮತ್ತೊಂದು ಎಕರೆಯಲ್ಲಿ ಕಬ್ಬನ್ನು ಬೆಳೆಯಬಹುದಾಗಿದೆ. 1971-72ರಲ್ಲಿ 5 ಲಕ್ಷ 70 ಸಾವಿರ ಹೆಕ್ಟಾರೆ ಪ್ರದೇಶದಲ್ಲಿ ಸುಧಾರಿತ ಬೆಳೆಗಳನ್ನು ಬೆಳೆಯುತ್ತಿದ್ದರೆ ಇಂದು ಆದರ ವಿಸ್ತೀರ್ಣ 11.50 ಲಕ್ಷಕ್ಕೆ ಹೋಗಿದೆ. ಅಂದರೆ ಶೇಕಡಾ 27 ಭಾಗಕ್ಕೆ ಅದು ವಿಸ್ತಾರಗೊಂಡಿದೆ, ಇಡೀ ರಾಷ್ಟ್ರ ತೆಗೆದುಕೊಂಡರೆ ಅದು ಶೇಕಡಾ 4ರಲ್ಲಿ ನಿಂತಿದೆ. ಆದಕಾರಣ ನಾವು ಈ ಬಗ್ಗೆ ಹೆಚ್ಚಿನ ಪ್ರಗತಿ ಸಾಧಿಸಿದ್ದೇವೆಂದು ಹೇಳಬಹುದು. ಈಗ ಹೆಚ್ಚಿನ ರೈತರು ಹೆಚ್ಚು ಫಸಲು ಕೊಡುವ ಸುಧಾರಿತ ಬೆಳೆಗಳನ್ನೇ ಬೆಳೆಯುತ್ತಿದ್ದಾರೆ. ಈ ಮೂಲಕ ರೈತರು ಸ್ವಪರಿಪೂರ್ಣತೆಯ ಮಟ್ಟಕ್ಕೆ ಬರಲು ಕಾರಣನೇಂದರೆ, ನಮ್ಮ ವ್ಯವಸಾಯ ಇಲಾಖೆಯವರು ಒಳ್ಳೆಯ ಪರಿಣಾಮಕಾರಿಯಾದಂಥ ಕಾರ್ಯವನ್ನು ಮಾಡುತ್ತಿರುವುದು, ರೈತರಿಗೆ ಬೇಕಾಗುವಂತಹ ಎಲ್ಲ ರೀತಿಯ ಸೌಲಭ್ಯಗಳನ್ನು ಅವರು ಒದಗಿಸಿಕೊಡುತ್ತಿದ್ದಾರೆಂದು ನಾವು ಊಹೆ ಮಾಡಬಹುದು.

3-30 P.M.

ಅಲ್ಲಿ ಇಲ್ಲಿ ಸ್ವಲ್ಪ ದೋಷ ಇರಬಹುದು. ಇದು ಒಂದು ಕಾರಣ ಅದನ್ನು ಕೂಡ ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ನಮ್ಮಲ್ಲಿ ಇಂಡಸ್ಟ್ರೀಯಲ್ ಪ್ರೊಡಕ್ಷನ್ ಇನ್ನು ಅಷ್ಟು ಮುಂದುವರಿದಿಲ್ಲ. ಆದರೆ ವ್ಯವಸಾಯ ಒಂದರಲ್ಲ ನಾವು ಸಾಕಷ್ಟು ಮುಂದುವರಿದರೆ ಸಾಲದು. ನಮ್ಮ ರಾಜ್ಯದಲ್ಲಿ ಕೈಗಾರಿಕರಣ ಆಗಬೇಕು. ಇಂಡಸ್ಟ್ರೀಯಲೈಸ್ ಆಗಬೇಕು ಇಲ್ಲದೆ ಬರೀ ವ್ಯವಸಾಯವನ್ನೇ ಅವಲಂಬಿಸಿದರೆ ಸಾಲದು. ಅದರಿಂದಲೇ ನಾವು ಬದುಕುವುದಕ್ಕೆ ಆಗುವುದಿಲ್ಲ. ನಮ್ಮ ಮೈಸೂರನ್ನು ಒಂದು ಮಾದರಿಯ ಮೈಸೂರು ಎಂದು ಹೇಳುತ್ತಿದ್ದರು. ಈಗ ನಾವು ಅದನ್ನು ಒಂದು ಮಾದರಿಯ ಕರ್ನಾಟಕ ರಾಜ್ಯವೆಂದು ಹೇಳಬೇಕು. ನಮ್ಮ ಕರ್ನಾಟಕ ರಾಜ್ಯಕ್ಕೆ ವಿಪುಲವಾದಂಥ ಸೇವೆಯನ್ನು ಸಲ್ಲಿಸಿದಂಥ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದ್ದರು ಇಂಡಸ್ಟ್ರಿಯಲ್ ಫ್ಲರಿಷ್ ಆಗದೆ ಹೋದರೆ ನಾವು ನಾಶವಾಗುತ್ತೇವೆ. ವ್ಯವಸಾಯ ಒಂದರಿಂದಲೇ ನಮಗೆ ಎಲ್ಲಾ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ದೇಶದ ಸಂಪತ್ತು ಹೆಚ್ಚಾಗಬೇಕಾದರೆ ಇಂಡಸ್ಟ್ರಿಯಲೈಸ್ ಆಗಬೇಕು. ಈ ನಮ್ಮ ಪಂಚವಾರ್ಷಿಕ ಯೋಜನೆಗೆ ಮೂಲ ಪುರುಷರು ಅವರೆಂದು ಹೇಳಬೇಕು. ಹಿಂದೆ ಒಂದು ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಲ್ಲಿ ನಮ್ಮ ದೇಶ ಮುಂದೆ ಬರಬೇಕು. ಉದಾಹರಣೆಗೆ ನಮ್ಮ ತುಮಕೂರು ರಸ್ತೆಯಲ್ಲಿ ಎಷ್ಟು ದೂರ ಕೈಗಾರಿಕಗಳು ಬಂದಿವೆ, ಬೆಂಗಳೂರು ಸುತ್ತ ಮುತ್ತಲಲ್ಲಿ ಎಷ್ಟು ಕೈಗಾರಿಕೆಗಳು ಆಗಿವೆ ಇಷ್ಟಾದರೂ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು. ಇನ್ನು ತುಮಕೂರು ರಸ್ತೆಯಲ್ಲಿ ಕೈಗಾರಿಕೆಗಳು ಪ್ರಾರಂಭವಾಗುತ್ತಿದ್ದರೂ ಮೈಸೂರಿನಲ್ಲಿ ಸಾವಿರಾರು ಹೆಕ್ಟೇರು ಭೂಮಿಯನ್ನು ವಶಪಡಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸಲು ಸಹಾಯ ಮಾಡಬೇಕೆಂದು ಪ್ರಯತ್ನಮಾಡುತ್ತಿದ್ದಾರೆ. ಕೈಗಾರಿಕೆಗಳನ್ನು ಸ್ಥಾಪಿಸುವ ಜನರಿಗೆ ಸರ್ಕಾರದವರು ಸಾಕಷ್ಟು ಪ್ರೋತ್ಸಾಹ ಒದಗಿಸುತ್ತಿದ್ದಾರೆ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇದರಲ್ಲಿ ನಮ್ಮ ರಾಜ್ಯದವರಿಂದ ಯಾವ ಪ್ರಮಾಣದಲ್ಲಿ ಕೈಗಾರಿಕೆಗಳು ಬರುತ್ತಿವೆ ಹೊರಗಡೆಯಿಂದ ಬರುತ್ತಿರುವ ಜನರಿಂದ ಯಾವ ಪ್ರಮಾಣದಲ್ಲಿ ಕೈಗಾರಿಕೆಗಳು ಬರುತ್ತಿವೆ ಮತ್ತು ಹಣಕಾಸಿನ ಸೌಲಭ್ಯಗಳು ಯಾವ ಪ್ರಮಾಣದಲ್ಲಿ ನಮ್ಮ ರಾಜ್ಯವರಿಗೆ ದೊರೆತಿದೆ ಎನ್ನುವುದನ್ನು ಅಧ್ಯಯನಮಾಡಿ ಈ ಸಭೆಗೆ ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಹಿನ್ನೆಲೆ ಇರತಕ್ಕಂಥಾದ್ದು ನನ್ನ ಅನುಭವದಲ್ಲಿ ನಾನು ಅಂಕಿ ಅಂಶಗಳನ್ನು ಇಟ್ಟುಕೊಂಡು ಹೇಳು

ತ್ತಿಲ್ಲ. ನನಗೆ ಎಲ್ಲಾ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡತಕ್ಕಂಥ ಅವಕಾಶ ಇಲ್ಲ. ನನ್ನ ಸ್ವಲ್ಪ ಅನುಭವದಲ್ಲಿ ಹೇಳುವುದಾದರೆ ಹೊರಗಡೆಯವರಿಗೆ ಬಹಳ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಸಿಕ್ಕಿ ಕೈಗಾರಿಕೆಗಳು ಹೋಗುತ್ತಾ ಇದೆಯೆಂದು. ಕೈಗಾರಿಕರಣ ಆಗಬೇಕೆಂದು ಹೇಳುವವರಲ್ಲಿ ನಾನು ಒಬ್ಬ. ಆದರೆ ಈ ಕ್ಷೇತ್ರದಲ್ಲಿ ನಮ್ಮವರಿಗೆ ಅವಕಾಶ ಇಲ್ಲದಂತಾಗಿದೆ ಕಾರಣ ನನಗೆ ಗೊತ್ತಿದೆ. ನಾನು ಸ್ವಲ್ಪಮಟ್ಟಿಗೆ ಹೇಳಬಲ್ಲೆ. ಹೊರಗಡೆಯಿಂದ ಬರತಕ್ಕವರಿಗೆ ಕೊಡತಕ್ಕಂಥ ಸುಖಾಗಮನ ನಮ್ಮವರಿಗೆ ಲಭ್ಯವಾಗುತ್ತಿಲ್ಲ ಅದು ಏತಕ್ಕೆಂದರೆ ಹೊರಗಡೆಯಿಂದ ಬಂದವರು ವಾಪಸ್ ಹೋಗಬಹುದು ಎಂದು ಈಗೀಗ ಇದರಲ್ಲಿ ಪೈಪೋಟಿ ಬಂದಿದೆ. ಕಾರಣವಾದರೂ ಇಷ್ಟೇ ಉದಾಹರಣೆಗೆ ನಮ್ಮ ರಾಜ್ಯದವರು 100 ಎಕರೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದರೆ ನಮ್ಮ ನೆರೆ ರಾಜ್ಯದವರು 150 ಎಕರೆ ಕೊಡುತ್ತೇವೆಂದು ಹೇಳುತ್ತಾರೆ. ಆದ್ದರಿಂದ ಅವರು ಎಲ್ಲಾದರೂ ಒಂದುಕಡೆ ಸ್ಥಾಪನೆ ಮಾಡಬೇಕಾಗುತ್ತದೆ. ನನಗೆ ಇರತಕ್ಕಂಥ ಸ್ವಲ್ಪ ಅನುಭವ ದಲ್ಲಿ ಎಲ್ಲಾ ಕೈಗಾರಿಕಾ ಉದ್ಯೋಗಗಳಲ್ಲಿ ಒಳ್ಳೆಯ ಕೆಲಸಗಾರರು ದೊರೆಯುತ್ತಿದ್ದಾರೆ ಬಹಳ ಸಭ್ಯತೆಯಿಂದ ಮತ್ತು ಸೌಮ್ಯತೆಯಿಂದ ಕೆಲಸ ಮಾಡತಕ್ಕವರಿದ್ದಾರೆ ಇದೇ ಪರಿಸ್ಥಿತಿ ಬೇರೆ ಕಡೆ ಇಲ್ಲ. ಈಗ ಒಂದು ಶರಾವತಿ ಕಾರ್ಯ ಮುಗಿಯುವ ಸಂದರ್ಭದಲ್ಲಿ ಕೇರಳದಲ್ಲಿ ಇಡಕಿ ಪ್ರಾಜೆಕ್ಟ್ ಏನು ಕಾರ್ಯವನ್ನು ಮಾಡಿತು ಅದೇ ರೀತಿಯಲ್ಲಿ ಕಾಳಿನದಿಯಲ್ಲಿ ಸಾವಿರಾರು ಜನ ಕೆಲಸಗಾರರು ಕೆಲಸಮಾಡುತ್ತಿದ್ದಾರೆ. ಆದರೂ ಅಲ್ಲಿ ಕೆಲಸಮಾಡತಕ್ಕ ಜನರಲ್ಲಿ ಯಾವ ರೀತಿ ಯಿಂದಲೂ ಅಶಾಂತಿಯಿಲ್ಲ. ಬಹಳ ನೆಮ್ಮದಿಯಿಂದ ಕೆಲಸಮಾಡಿಕೊಂಡು ಹೋಗುತ್ತಿದ್ದಾರೆ. ಒಂದೇ ಒಂದು ವಾಕ್ಯದಲ್ಲಿ ಹೇಳುವುದಾದರೆ ನೆಮ್ಮದಿಯಿಂದ ಇದ್ದಾರೆ. ಅಲ್ಲಿ ಏನು ತೊಂದರೆ ಯಿಲ್ಲ ಎಂದು ಅವರಿಗೆ ಸಲ್ಲಬೇಕಾದ ಸೌಲಭಗಳು ಒದಗುತ್ತಿವೆಯೇ ? ಅವರು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆಯೇ ಎ ಬುದರ ಬಗ್ಗೆ ಸರಿಯಾದ ಗಮನಕೊಡಬೇಕು ನಮ್ಮ ಕಾರ್ಮಿಕರಲ್ಲಿ ಅಲ್ಲಿನ ಸ್ಥಿತಿಗತಿಗಳನ್ನು ನೋಡಿಕೊಂಡು ಯಾವರೀತಿಯಿಂದಲೂ ಅಲ್ಲಿ ಅಶಾಂತಿ ಉಂಟಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಅಲ್ಲಿ ಅವರಿಗೆ ಸರಿಯಾದ ಸೌಲಭ್ಯ ವನ್ನು ಒದಗಿಸಿ ಕೊಡುತ್ತಿದ್ದಾರೆಯೇ ಎನ್ನುವುದನ್ನು ನೋಡಬೇಕು ಮೊನ್ನೆ ಅಲ್ಲಿಗೆ ಹೋದಾಗ್ಗೆ ನಮ್ಮ ಸರ್ಕಾರದವರು ಅಲ್ಲಿನ ಕೆಲಸಕಾರ್ಯಗಳು ತೀವ್ರಗತಿಯಲ್ಲಿ ನಮ್ಮ ವಾಯಿಂದೆ ದೃಷ್ಟಿಯಿಂದ ಅಲ್ಲಿ ಇರತಕ್ಕಂಥ ಕಂಟ್ರಾಕ್ಟರ್‌ಗಳಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದರೂ ಕೂಡ ಕನಿಷ್ಟಮಟ್ಟದಲ್ಲಿ ಕಾರ್ಮಿಕರಿಗೆ ಸೌಲಭ್ಯಗಳು ದೊರೆಯುತ್ತಿಲ್ಲವೆಂದು ಕೇಳಿದ್ದೇವೆ. ಅದು ಆಗಬಾರದು. ಅಲ್ಲಿ ಮೂಗ ಬಸವಣ್ಣನಂತೆ ದುಡಿಯುತ್ತಿದರೂ ಅವರಿಗೆ ಸರಿಯಾದ ಸೌಲಭ್ಯಗಳು ದೊರೆಯದೆ ಇದ್ದರೆ ಸರ್ಕಾರ ಖಂಡಿತವಾಗಿ ಸುಮ್ಮನೆ ಕೂಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅಲ್ಲಿನ ಸ್ಥಿತಿಗತಿಗಳನ್ನು ಅಧ್ಯಯನಮಾಡಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು, ಅದು ಅತ್ಯಗತ್ಯವೆಂದು ನಾನು ತಮ್ಮಲ್ಲಿ ಮಾಡತಕ್ಕಂಥ ಸಲಹೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಒಂದೇ ಒಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹೊರಗಿ ನವರಿಗೆ ಆದ್ಯತೆ ಕೈಗಾರಿಕೆ ನಡೆಸುವುದಕ್ಕೆ ಸಿಕ್ಕುತ್ತದೆ. ಕಾರಣವಾದರೂ ಏನು ? ನಮ್ಮಲ್ಲಿ ಅಷ್ಟು ಬಂಡವಾಳವನ್ನು ಹಾಡುವವರು ಇದ್ದಾರೆಯೇ ? ಅಥವಾ ಇಲ್ಲವೇ ? ಯಾವ ಕಾರಣದಿಂದ ನಮ್ಮವರಿಗೆ ಆದ್ಯತೆ ಸಿಕ್ಕುತ್ತಿಲ್ಲ. ಕಾರಣ ಅಷ್ಟೊಂದು ಬಂಡವಳ ಹಾಡತಕ್ಕಂಥವರು ನಮ್ಮಲ್ಲಿ ಇಲ್ಲವೇ ? ದಯಮಾಡಿ ಇದನ್ನು ತಿಳಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ನನ್ನ ಸ್ಪಷ್ಟವಾದ ಆರೋಪಣೆ ಏನು ಇಲ್ಲ. ಅದಕ್ಕೆ ನಮ್ಮ ಮಂತ್ರಿ ಮಂಡಲದಲ್ಲಿರುವ ಮಂತ್ರಿಗಳು ಚಾಣಾಕ್ಷರು, ಹಿಂದೆ ನಮ್ಮ ರಾಜ್ಯದಲ್ಲಿ ಯಾವುದೇ ಉದ್ಯಮ ಆದರೂ ಪ್ರಧಾನ ಪಾತ್ರ ವಹಿಸುತ್ತಿದ್ದರು, ನಮ್ಮ ಬಂಡವಾಳ ಇದ್ದಾಗಲೂ ಕೂಡ ಜನರಿಗೆ ನಾವು ಎಷ್ಟು ಪ್ರಮಾಣದಲ್ಲಿ ಧೈರ್ಯ ಕೊಡಬೇಕು ಅಷ್ಟು ಧೈರ್ಯವನ್ನು ತಂದು ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರಕ್ಕೆ ಅಷ್ಟು ಧೈರ್ಯವಿಲ್ಲವೇ ?

ಶ್ರೀ ಪುಟ್ಟಸ್ವಾಮಿ.—ನಮ್ಮ ಸರ್ಕಾರಕ್ಕೆ ಸಾಕಷ್ಟು ಧರ್ಯ ಇದೆ ಇದರಲ್ಲಿ ಬಂಡವಾಳ ಮಾಡಬೇಕು ನಾನಾಗಲೇ ಹೇಳಿದಂತೆ ಇದು ಆರೋಪಣೆಯಲ್ಲ. ನಾನು ಅಂಕಿ ಅಂಶಗಳ ಮೂಲಕ ಹೇಳಿದ್ದು ಅಲ್ಲ. ಸರ್ಕಾರದವರು ಇದನ್ನು ಆಲೋಚನೆ ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ.— (ಹಣಕಾಸಿನ ಮತ್ತು ಗೃಹ ವಸತಿ ಶಾಖೆಗಳ ಮಂತ್ರಿಗಳು) ಇದರ ಬಗ್ಗೆ ನನಗೆ ಗೊತ್ತಿರುವಹಾಗೆ ಹಣ ಇನ್‌ವೆಸ್ಟ್ ಆಗಬೇಕು. ಕಾಳಿನದಿ ಸಂಪೂರ್ಣವಾಗಿ ಉಪಯೋಗಿಸಬೇಕಾದರೆ ಒಂದೆರಡುಸಾವಿರ ಕೋಟಿ ರೂಪಾಯಿ ಇನ್‌ವೆಸ್ಟ್ ಆಗಬೇಕು ಎಲ್ಲಾ ಕಡೆಗಳಿಂದ ಸರ್ಕಾರ ಪ್ರಯತ್ನಮಾಡುತ್ತಿದೆ. ಇದು ಸರ್ಕಾರದ ಉದ್ದೇಶ. ತಾವು ಇದನ್ನು ಪ್ರಸ್ತಾಪಮಾಡುವಾಗ ಇಲ್ಲಿ ಇರತಕ್ಕಂಥವರಿಗೆ ಸರಿಯಾದ ಅವಕಾಶ ಸಿಕ್ಕುತ್ತಿಲ್ಲ ಎಂದರೆ ಅದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ. ಕರ್ನಾಟಕದಲ್ಲಿರತಕ್ಕಂಥ ಜನರಿಗೆ ಹೆಚ್ಚು ಅವಕಾಶ ಒದಗಿಸಬೇಕೆಂಬುದೇ ನಮ್ಮ ಧೋರಣೆ ಇಷ್ಟೆಲ್ಲಾ ಕೋಟ್ಯಾಂತರ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಇಲ್ಲಿ ಎಷ್ಟು ದೊಡ್ಡ ಪ್ರಮಾಣದಲ್ಲಿ ಇನ್‌ವೆಸ್ಟ್‌ಮೆಂಟ್ ಆಗುತ್ತಾ ಇದೆಯೋ ಅದರಲ್ಲಿ ಹೆಚ್ಚು ಭಾಗ ನಮ್ಮ ಜನಗಳಿಗೆ ಅದರ ಸೌಲಭ್ಯಸಿಗಬೇಕೆಂಬುದೇ ಸರ್ಕಾರದ ಉದ್ದೇಶ. ಅದರಲ್ಲಿಯೂ ವಿಶೇಷವಾದಂಥ ತರಬೇತನ್ನು ಕೊಡಬೇಕೆಂದು ಸರ್ಕಾರದ ಧೋರಣೆ ಇದೆ. ನಮ್ಮ ದೇಶದಲ್ಲಿ ಏನಾಗಿದೆಯೆಂದರೆ ಹೊರಗಿನಿಂದ ಬರುವ ಜನರಿಗೆ ಸಿಗುವಷ್ಟು ಸೌಲಭ್ಯ ನಮ್ಮ ದೇಶದ ಜನರಿಗೆ ಸಿಗುತ್ತಾ ಇಲ್ಲವೆಂಬ ಅಭಿಪ್ರಾಯವಿದ್ದರೆ ಅದನ್ನು ಸರ್ಕಾರ ಒಪ್ಪುವುದಕ್ಕೆ ಆಗುವುದಿಲ್ಲ. ಆದರೆ ಬೇರೆ ವಿಷಯಗಳನ್ನು ಒಪ್ಪಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರದ ಆಲೋಚನೆಗೂ ನನ್ನ ಆಲೋಚನೆಗೂ ಯಾವ ವ್ಯತ್ಯಾಸವೂ ಇಲ್ಲ. ಸರ್ಕಾರದವರಿಗೆ ನಮ್ಮವರಿಗೆ ಪ್ರೋತ್ಸಾಹ ಕೊಡಬೇಕೆಂದು ಅವರ ಅಭಿಲಾಷೆ ಆದರೆ ವಾಸ್ತವವಾಗಿ ಏನಾಗುತ್ತಿದೆಯೆಂಬುದನ್ನು ತಿಳಿದು ನೋಡಬೇಕಾಗಿದೆ. ನಾನು ಇದರ ಬಗ್ಗೆ ನೇರವಾದಂಥ ಆರೋಪಣೆಯನ್ನು ಮಾಡಿಲ್ಲ. ಸರ್ಕಾರದ ಉದ್ದೇಶ ಸರಿಯಾಗಿಲ್ಲವೆಂತಲೂ ಸಹ ಹೇಳುತ್ತಾ ಇಲ್ಲ. ಮಾನ್ಯ ಸದಸ್ಯರು ಏನೊಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೋ ಅದೇ ಅಭಿಪ್ರಾಯ, ಅಭಿಲಾಷೆ ಸರ್ಕಾರಕ್ಕೂ ಇದೆಯೆಂಬುದು ಎಲ್ಲರಿಗೂ ಗೊತ್ತಿದೆ. ವಾಸ್ತವವಾಗಿ ಆ ಕೆಲಸದಲ್ಲಿ ಎಷ್ಟರಮಟ್ಟಿಗೆ ವ್ಯತ್ಯಾಸ ಇದೆಯೆಂಬುದನ್ನು ತಿಳಿಯುವುದಾದರೆ, ಎಷ್ಟೋ ಕಡೆಗಳಲ್ಲಿ ಪ್ರಗತಿಯ ಹಾದಿಯಲ್ಲಿಯೇ ಮುನ್ನಡೆಯುತ್ತಿರುವುದನ್ನು ನಾವು ಕಾಣಬಹುದು. ಆದರೆ ನಮ್ಮವರಿಗೆ ಇನ್‌ಹಾಸ್ಪಿಟಬಲ್ ಅಟ್‌ಮಾಸ್ಫಿಯರ್ ಇರುತ್ತದೆ, ಹೊರಗಡೆಯಿಂದ ಬಂದಿರತಕ್ಕವರಿಗೆ ಅಂತಹ ಒಂದು ಆಟ್‌ಮಾಸ್ಫಿಯರ್ ಇರುವುದಿಲ್ಲವೆಂಬ ಅಂಶನನ್ನು ನಾವು ಅನೇಕ ಕಡೆಗಳಿಂದ ಕೇಳುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮವರನ್ನು ನಮ್ಮವರೇ ನೋಡಿಕೊಳ್ಳುವುದಕ್ಕೆ ತಯಾರಿಲ್ಲ ಅಂದಮೇಲೆ ಬೇರೆಯವರು ನಮ್ಮನ್ನು ನೋಡಿಕೊಳ್ಳುತ್ತಾರೆಂದು ಹೇಳಬಹುದಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲಿ ಒಂದು ಸಂಶಯವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಸಂಶಯ ನಿಜವಾದ ಸಂಶಯವೇ,

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ರಾಷ್ಟ್ರದಲ್ಲಿ ಪ್ರಗತಿಕಾರ್ಯಗಳು ವೇಗವಾಗಿ ಪ್ರಾರಂಭವಾಗುತ್ತವೆ. ಮತ್ತೆ ಶ್ರೀಸಾಮಾನ್ಯನ ಕುಂದುಕೊರತೆಗಳ ಕಡೆಗೆ ಆಳರಸರ ದೃಷ್ಟಿ ನೇರವಾಗಿ ಬಿದ್ದುದರಿಂದ ಅವರ ಸ್ಥಿತಿಗತಿಗಳನ್ನು ಸುಧಾರಿಸದೆ ಗತ್ಯಂತರವಿಲ್ಲ. ಏಕೆಂದರೆ ಅನೇಕ ಕಡೆಗಳಲ್ಲಿ ಬಡವರಿಗೆ ಮುಟ್ಟಬೇಕಾದ ಸೌಕರ್ಯಗಳು ನೇರವಾಗಿ ಮುಟ್ಟುತ್ತಾ ಇಲ್ಲ. ಸಾಮಾನ್ಯವಾಗಿ ನಮಗೆ ಈಗಾಗಲೇ ತಿಳಿದಿರುವ ಹಾಗೆ ಹರಿಜನ, ಗಿರಿಜನ ಮತ್ತು ಇತರ ಹಿಂದುಳಿದ ವರ್ಗದವರಿಗೆ ಸಾಕಷ್ಟು ಸೌಲಭ್ಯಗಳು ಸರಿಯಾಗಿ ಮುಟ್ಟುತ್ತಾ ಇಲ್ಲ, ದೊರಕುತ್ತಾ ಇಲ್ಲ, ಅವರ ಬಗ್ಗೆ ಶೋಷಣೆ ತಪ್ಪಿಸುವುದಕ್ಕೆ ಸಾಧ್ಯವಾಗಲಿಲ್ಲವೆಂಬ ಅಂಶ ತಿಳಿದು ಸರ್ಕಾರ ಒಂದು ಧೈರ್ಯವಾದಂಥ ದಿಟ್ಟ ನಿಲುವನ್ನು ತಾಳಿತು. 1969ರ ಅಂತ್ಯದ ಅವಧಿಯಲ್ಲಿ ನಮ್ಮಲ್ಲಿ ಬೃಹತ್‌ಪಕ್ಷವಾಗಿದ್ದಂಥ ಕಾಂಗ್ರೆಸ್ ಪಕ್ಷದಲ್ಲಿ ಎರಡು ಭಾಗಗಳಾದಾಗ ಪ್ರಧಾನಿಯವರು ಒಂದು ಧೀರೋದಾತ್ತವಾದ ನಿಲುವನ್ನು ತಾಳಿ ಈ ಕಡೆಗೆ ಹೆಚ್ಚಿನ ಗಮನ ಕೊಡುವುದಕ್ಕೆ ಪ್ರಯತ್ನಮಾಡಿದರು ಆ ವರ್ಷದಲ್ಲಿಯೆ ದೊಡ್ಡದೊಡ್ಡ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ರಾಷ್ಟ್ರೀಕರಣವಾಗುವುದಕ್ಕೆ ಕಾರಣ ಅಲ್ಲಿನ ಕೆಲವು ಬಂಡವಾಳಷಾಹಿಗಳ ಹಿತದಲ್ಲಿ ಯಾವ ರೀತಿಯಲ್ಲಿ ಕೆಲವರು ಸಿಕ್ಕಿಬಿದ್ದರು ಎಂಬುದು ಎಲ್ಲರಿಗೂ ತಿಳಿದ ಅಂಶವೇ ಆಗಿದೆ. ಬ್ಯಾಂಕುಗಳ ರಾಷ್ಟ್ರೀಕರಣವಾದಮೇಲೆ ನಮ್ಮ ರಾಜ್ಯದಲ್ಲಿ ನಮ್ಮ ಜನರಿಗೆ ಯಾವ ಒಂದು ಪ್ರಮಾಣದಲ್ಲಿ ಹಣಕಾಸಿನ ಸೌಲಭ್ಯ ದೊರೆಯುತ್ತಿದೆ ಎನ್ನುವುದನ್ನೂ

ಕೂಡ ನಾವು ಅಂಕಿಅಂಶಗಳ ಮೂಲಕ ಪರಿಶೀಲನೆಮಾಡುವುದು ಅತ್ಯಗತ್ಯ. ಹಣ ಸೌಲಭ್ಯವನ್ನು ಜನರಿಗೆ ಒದಗಿಸಿಕೊಡುವುದರಲ್ಲಿ 1971-72ರಲ್ಲಿ 39 ಕೋಟಿ ರೂಪಾಯಿಗಳು ಇದ್ದುದು 1974-75ಕ್ಕೆ 160 ಕೋಟಿ ರೂಪಾಯಿಗಳಿಗೆ ಬಂದಿದೆ. ಇಷ್ಟು ಬಂದರೂ ಕೂಡ ಈ ಒಂದು ಪ್ರಮಾಣದಲ್ಲಿ ಹೆಚ್ಚಿನ ಹಣ ಜನರಿಗೆ ಲಭ್ಯವಾಗಿದ್ದರೂ ಕೂಡ ಇವತ್ತಿಗೂ ಒಂದು ಅಪವಾದ ಇದ್ದೇ ಇದೆ. ಕನಿಷ್ಠ ದರ್ಜೆಯಲ್ಲಿರತಕ್ಕ ಜನರಿಗೆ ಇದರ ಒಂದು ಸೌಲಭ್ಯ ಮುಟ್ಟಿಲ್ಲ. ನಾನು ಆ ಒಂದು ಅಪಾದನೆಯಲ್ಲಿ ಹುರುಳಿಲ್ಲವೆಂದು ಹೇಳುವಮಟ್ಟಿಗೆ ಇಲ್ಲ. ಆದರೆ ಈ ಒಂದು ವಿಚಾರದಲ್ಲಿ ಸರ್ಕಾರನವರು ಆ ಪಾದನೆಯನ್ನು ಗಮನದಲ್ಲಿಟ್ಟುಕೊಂಡು ಇವತ್ತು ಅದಕ್ಕೆ ಬೇಕಾದಂಥ ಕ್ರಮ ಗಳನ್ನು ಕಂಡುಕೊಂಡಿದೆ. ಅದನ್ನು ಬೇಕಾದರೆ ನಾವು ಅಂಕಿಅಂಶಗಳಿಂದ ಗೊತ್ತುಮಾಡಬಹುದು. ಅದೊಂದೇ ಸಾಧ್ಯ. ಇನ್ನು ಹಣಕಾಸಿನ ಸೌಲಭ್ಯ ಒದಗಿಸಿರುವುದರಲ್ಲಿ ಸೇಕಡಾವಾರು ನೋಡಿದರೆ ನಮ್ಮ ರಾಜ್ಯದಲ್ಲಿ ಸೇಕಡ 45ರಷ್ಟು ಆನ್ಯುಯಲ್ ಗ್ರೋತ್ ಆಗಿದೆ. ರಾಷ್ಟ್ರದಲ್ಲಿ ಸೇಕಡ 26ರಷ್ಟು ಆಗಿದೆ. ನಮ್ಮ ದೇಶದಲ್ಲಿ ಹಿಂದೆ ಡಿಪಾಜಿಟ್ 369ಕೋಟಿ ರೂಪಾಯಿ ಇದ್ದುದು ಈಗ 558 ಕೋಟಿ ರೂಪಾಯಿ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ತಿಳಿದಹಾಗೆ ಸೇಕಡ 7ರಿಂದ ನಮ್ಮ ಗ್ರೋತ್ 20 ಆಗಿದೆ. ಆಲ್ ಇಂಡಿಯಾ ರೇಟ್ ಸೇಕಡ 7ರಿಂದ 20 ಎಂಬುದಾಗಿ ಹೇಳಿದರೆ, ಇದನ್ನು ಯಾವ ಒಂದು ಅಂಕಿಅಂಶಗಳ ಆಧಾರದಮೇಲೆ ಲೆಕ್ಕಹಾಕಿದ್ದಾರೋ ಗೊತ್ತಿಲ್ಲ. ಇಷ್ಟೊಂದು ಅಂತರ ವಿರುವುದಕ್ಕೆ ಸಾಧ್ಯವಿಲ್ಲವೆಂದು ಕೆಲವು ಆರ್ಥಿಕ ತಜ್ಞರೇ ಹೇಳತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮಲ್ಲಿ ಕ್ರೆಡಿಟ್ ಔಟ್‌ಸ್ಟ್ಯಾಂಡಿಂಗ್ 1971-75ರಲ್ಲಿ 39 ಕೋಟಿ ರೂಪಾಯಿಗಳು ಇದ್ದುದು 1974-75ಕ್ಕೆ 160ಕೋಟಿ ರೂಪಾಯಿಗಳಾಗಿದೆಯೆಂದು ನಮ್ಮ ಲೆಕ್ಕ. ಇದರಲ್ಲಿ ಹರಿಜನ, ಗಿರಿಜನ ಮತ್ತು ಇಕನಾಮಿಕಲಿ ವೀಕರ್ ಸೆಕ್ಷನ್ಸ್‌ಗೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಹಣ ದೊರಕಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬಡ್ಜೆಟ್ಟಿನಲ್ಲೇನೋ ಆದು ದೊರಕಿದೆ. ಆದರೆ ಹರಿಜನ, ಗಿರಿಜನರಿಗೆ ಮತ್ತು ಅವರ ಮಕ್ಕಳಿಗೆ ಆ ಹಣ ಮುಟ್ಟಿದೆಯೋ ? ಅದನ್ನು ಹೇಳಿ.

ಶ್ರೀ ಕೆ. ಪುಟ್ಟಸ್ವಾಮಿ.—ನನ್ನಲ್ಲಿ ಅದರ ಬಗ್ಗೆ ಅಂಕಿಅಂಶಗಳು ಇಲ್ಲ. ಮಾನ್ಯ ಆರ್ಥಿಕ ಸಚಿವರು ಮಾನ್ಯ ಸದಸ್ಯರು ಎತ್ತಿದ ವಿಚಾರಕ್ಕೆ ಉತ್ತರವನ್ನು ಹೇಳಲಿ.

ನಾನು ಈಗಾಗಲೇ ಇರ್ರಿಗೇಷನ್ ವಿಚಾರವಾಗಿ ಪ್ರಸ್ತಾಪಮಾಡಿದ್ದೇನೆ. ಯಾವ ಒಂದು ಪ್ರಮಾಣದಲ್ಲಿ ಇರ್ರಿಗೇಷನ್ ಸೌಲಭ್ಯ ಜನರಿಗೆ ಮುಟ್ಟಿದೆಯೆಂಬುದನ್ನು ಅಂಕಿಅಂಶಗಳ ಮೂಲಕ ನೋಡಬೇಕಾಗಿದೆ. ಹಿಂದೆ 13ಲಕ್ಷ 75ಸಾವಿರ ಹೆಕ್ಟೇರುಗಳಷ್ಟು ನೀರಾವರಿ ಇದ್ದುದು ಈಗ 16ಲಕ್ಷ 61ಸಾವಿರ ಹೆಕ್ಟೇರುಗಳಷ್ಟು ಆಗಿದೆಯೆಂದು ಹೇಳಿದ್ದಾರೆ. ಅಂದಮೇಲೆ ನಮ್ಮ ದೇಶದಲ್ಲಿ ಇದರ ಕಾಲುಭಾಗದಷ್ಟು ಅಂದರೆ ಸೇಕಡ 25ರಷ್ಟು ಭಾಗ ಆಗುತ್ತದೆಂದು ಹೇಳಬಹುದು. ಆದರೆ ಎಷ್ಟರಮಟ್ಟಿಗೆ ನೀರಾವರಿ ಸೌಲಭ್ಯ ಹೆಚ್ಚಿಸುವುದಕ್ಕೆ ಸಾಧ್ಯವಾಗಿದೆಯೆಂಬುದನ್ನು ಈಗಾಗಲೇ ನಾನು ವಿವರವಾಗಿ ತಿಳಿಸಿದ್ದೇನೆ.

ಇನ್ನು ಪವರ್ ಕನ್‌ಸಂಪಷನ್ ವಿಚಾರ. ನಾವು ಈ ದೇಶದ ಒಟ್ಟು ಉತ್ಪನ್ನ, ಈ ದೇಶದ ಸಂಪತ್ತು ಮತ್ತು ಈ ದೇಶದ ಪ್ರಗತಿ ಇವೆಲ್ಲವನ್ನೂ ನೋಡಿದರೆ, ವಿದ್ಯುಚ್ಛಕ್ತಿ ಪ್ರಗತಿ ಪ್ರಮಾಣವೇ ಒಂದು ಅಳತೆಗೋಲು ಎಂಬುದಾಗಿ ಹೇಳಬಹುದು. ಅದನ್ನು ಎಲ್ಲರೂ ಒಪ್ಪುವ ವಿಚಾರವೇ ಆಗಿದೆ. ಬಹುಶಃ ಸಾಕಷ್ಟು ಪ್ರಮಾಣದಲ್ಲಿ ಇನ್ನೂ ನಮ್ಮಲ್ಲಿ ವಿದ್ಯುಚ್ಛಕ್ತಿಯು ಉತ್ಪನ್ನ ಆಗಿದ್ದೇ ಆಗಿದ್ದರೆ ಇವತ್ತು ನಮ್ಮ ರಾಜ್ಯದ ಒಟ್ಟು ಉತ್ಪನ್ನ ಇನ್ನೂ ಬಹಳವಾಗಿ ಆಗುತ್ತಿತ್ತು.

ತಮಗೆಲ್ಲಾ ಗೊತ್ತಿದೆ, ಶರಾವತಿ ಕಾರ್ಯ ಮುಗಿದಾಗ, ಶರಾವತಿ ಆಗುವುದಕ್ಕಿಂತ ಮುಂಚೆ ಮಹಾತ್ಮಾಗಾಂಧಿ ವಿದ್ಯುತಗಾರ ಕೆಲಸ ಮುಗಿದಾಗ ಆಗಲೂ ನಾನು ಈ ಶಾಸನ ಸಭೆಯ ಸದಸ್ಯನಾಗಿದ್ದೆ. ಆಗ ಶಾಸನ ಸಭೆಯ ಸದಸ್ಯರು ಹೇಳಿದರು ಇಷ್ಟೊಂದು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿ ಅದನ್ನು ಏನು ಮಾಡುತ್ತೀರಿ? ಅದರಿಂದ ಏನು ಉಪಯೋಗವಾಗುತ್ತದೆ? ಸುಮ್ಮನೇ ನಮ್ಮ ಹಣವನ್ನು ತೆಗೆದುಕೊಂಡು ಹೋಗಿ ಈ ಹಿರೆಭಾಸ್ಕರ್ ಅಣೆಕಟ್ಟಿಗೆ ಹಾಕಿದ್ದೀರಿ, ಈ ಮಹಾತ್ಮಾಗಾಂಧಿ ವಿದ್ಯುತ್‌ಗಾರಕ್ಕೆ ಹಾಕಿಬಿಟ್ಟಿದ್ದೀರಿ ಎಂದು

1948ರಲ್ಲೇ ಹೇಳಿದ್ದರು. ಆದರೆ ಈಗ ಅವರ ಪರಿಸ್ಥಿತಿ ಬದಲಾವಣೆಯಾಗಿದೆ. ಈಗಾಗಲೇ ನಮ್ಮಲ್ಲಿ ವಿದ್ಯುಚ್ಛಕ್ತಿಯ ಬರ ಬಂದಿತು. ಕಾಳಿನದಿ ಪ್ರಾಜೆಕ್ಟ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಸಿಗುತ್ತದೆಂದು ಲೆಕ್ಕಹಾಕಿಕೊಂಡಿದ್ದೇವೆ. ಅಲ್ಲಿ ಈಗಾಗಲೇ ಸತತವಾಗಿ ಕೆಲಸಗಳು ನಡೆಯುತ್ತಿವೆ. ಅಲ್ಲಿಗೆ ಮಾನ್ಯ ಕೃಷ್ಣರವರು ಬಂದಿದ್ದರು. ಕಾಳಿ ನದಿಗೆ ಹೋಗಿದ್ದಾಗ ಅಲ್ಲಿ ಆಗಿರತಕ್ಕಂಥ ಕಾರ್ಯವನ್ನು ನೋಡಿದ್ದಾರೆ. ಅಲ್ಲಿ ಈಗಾಗಲೆ ಎಷ್ಟು ಮುಂದಾಲೋಚನೆಯಿಂದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ನೋಡಿದ್ದಾರೆ. ಇದು ಒಂದು ಸಂತೋಷದ ವಿಚಾರ. ಇನ್ನೊಂದು ವಿಚಾರ ನಾನು ಹೇಳುವುದು ಅಗತ್ಯ. ಈ ಕಾಳಿ ನದಿಯೋಜನೆ ಆಗಬೇಕು ಎನ್ನುವ ಪ್ರಯತ್ನ ರಾಜ್ಯ ಸರ್ಕಾರ ಮಾಡಿದಾಗ ಇಂಡಿಯಾ ಸರ್ಕಾರದವರು ಈ ಯೋಜನೆಯ ಕಡೆ ನೋಡುವುದಕ್ಕೂ ಕೂಡ ಸಿದ್ಧವಾಗಿರಲಿಲ್ಲ, ಇದು ಆಗುವುದೇ ಇಲ್ಲವೆಂದು ಹೇಳಿದ್ದರು. ಆದರೆ ನಮಗೆಲ್ಲಾ ಗೊತ್ತು, ಹಾಗೂ ಇಡೀ ರಾಜ್ಯದ ಜನರಿಗೆಲ್ಲಾ ಗೊತ್ತು, ಮತ್ತೆ ಈ ದೇಶದ ಆಡಳಿತ ನಡೆಸಿದವರಿಗೆ ಗೊತ್ತು, ಕಾಳಿ ನದಿ ಯೋಜನೆ ಕೈಗೊಳ್ಳದೇ ಗತ್ಯಂತರವಿಲ್ಲವೆಂದು ನಮ್ಮ ಸರ್ಕಾರಕ್ಕೆ ಸ್ಪಷ್ಟವಾಗಿ ಗೊತ್ತಿತ್ತು. ಆ ಕಾರಣದಿಂದಲೇ ಇಂಡಿಯಾ ಸರ್ಕಾರದವರು ಇದು ಆಗುವುದಿಲ್ಲವೆಂದು ಕೈ ಎತ್ತಿದಾಗ ನಮ್ಮ ಸರ್ಕಾರದವರು ಧೈರ್ಯ ಮಾಡಿ, ಮೈಸೂರು ಪವರ್ ಕಾರ್ಪೊರೇಷನ್ ಎಂದು ಸ್ಥಾಪನೆ ಮಾಡಿ, ಶರಾವತಿ ಅಸೆಟ್ಸ್‌ಗಳನ್ನು ಇದಕ್ಕೆ ವರ್ಗಾವಣೆ ಮಾಡಿ, ಬ್ಯಾಂಕ್‌ನಿಂದ ಹಣವನ್ನು ತಂದು, ಎಲ್.ಐ.ಸಿ. ಯಿಂದ ಹಣ ತಂದು, ಎಲ್ಲಿಯಿಂದಲಾದರೂ ಹಣವನ್ನು ತಂದು ಈ ಕಾರ್ಯವನ್ನು ಮಾಡಿಯೇ ಮಾಡುತ್ತೇವೆ ಇದು ಯೋಜನೆ ಒಳಗಾದರೂ ಬರಲಿ, ಹೊರಗಾದರೂ ಬರಲಿ ಈ ಕಾರ್ಯವನ್ನು ಮಾಡಿಯೇ ಮಾಡುತ್ತೇವೆ ಎನ್ನುವಂಥ ನಿರ್ಧಾರವನ್ನು ತೆಗೆದುಕೊಂಡರು ಆ ಮೇಲೆ ಇಂಡಿಯಾ ಸರ್ಕಾರಕ್ಕೂ, ರಾಜ್ಯ ಸರ್ಕಾರಕ್ಕೂ ಕಾಗದ ಪತ್ರಗಳ ರವಾನೆಯಾಗಿ, ಚರ್ಚೆಯಾಗಿ ಇವತ್ತು ಯಾವ ಮಟ್ಟಕ್ಕೆ ಬಂದಿದೆ? 4-5 ವರ್ಷಗಳ ಹಿಂದೆ ಈ ಯೋಜನೆಗೆ ಯಾವ ಪುರಸ್ಕಾರವನ್ನೂ ಕೊಡದೇ ಇದ್ದಂಥ ಇಂಡಿಯಾ ಸರ್ಕಾರ ಇವತ್ತಿನ ದಿವಸ ಈ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ ಎಂದು ಕೇಳುವ ಮಟ್ಟಕ್ಕೆ ಬಂದಿದೆ. ಕೆಲವು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದೇನೆ. ಅದೂ ತಮಗೂ ಗೊತ್ತು, ಈ ಕುದುರೆ ಮುಖದಲ್ಲಿರತಕ್ಕಂಥ ಸಂಪತ್ತನ್ನು, ಖನಿಜ ಸಂಪತ್ತನ್ನು ತೆಗೆದು ಬೇರೆ ದೇಶಗಳಿಗೆ ರಫ್ತು ಮಾಡಲು ಅನುಕೂಲವಾಗುವಂತೆ ಇರಾನ್ ದೇಶವು ನಮಗೆ 45 ಕೋಟಿ ರೂಪಾಯಿ ಸಾಲ ಕೊಡಲು ಮುಂದೆ ಬಂದಿದ್ದಾರೆ. ಅವರಿಗೆ ನಮ್ಮ ವಿಚಾರದಲ್ಲಿ ಸರಿಯಾದಂಥ ಸಮಾಧಾನವಿದೆ. ಆದುದರಿಂದ ಅವರು ನಮಗೆ 45 ಕೋಟಿ ರೂಪಾಯಿ ಕೊಡುವುದಕ್ಕೆ ಮುಂದೆ ಬಂದಿದ್ದಾರೆ ಅಲ್ಲದೆ ಮೊನ್ನೆ ತಾನೆ ಇಂಡಿಯಾ ಸರ್ಕಾರದವರು, ಅಂದರೆ ಕೇಂದ್ರ ಸರ್ಕಾರದ ಸಚಿವರಾದ ಶ್ರೀ ಕೆ. ಸಿ. ಪಂತ್‌ರವರು ಹಣದ ವಿಚಾರದಲ್ಲಿ ಯಾವ ಯೋಚನೆಯೂ ಇಲ್ಲ ನಿಮ್ಮ ಹಣ ಲಭ್ಯವಾಗಿ ಬಂದಿದೆ, ಆದಷ್ಟು ಜಾಗ್ರತೆ ಈ ಕೆಲಸ ಮುಗಿಸಿ ಎಂದು ಅವರು ಹೇಳಿದರು. ಅದನ್ನು ಕೇಳಿದಾಗ ಈ ದೇಶದ ಜನರೆಲ್ಲಾ ಬಹಳ ಸಂತೋಷ ಪಟ್ಟರು. ಮಂತ್ರಿಗಳ ನಿಲುವು ಏನು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ ನಮಗೆ ಇತ್ತೀಚೆಗೆ ತಿಳಿದು ಬಂದಿರುವ ಪ್ರಕಾರ ನಮ್ಮಲ್ಲಿ ಒಂದುಗಾದೆ ಇದೆಯಲ್ಲ ''ದೇವರು ವರ ಕೊಟ್ಟರು ಪೂಜಾರಿ ವರ ಕೊಡಲಿಲ್ಲ'' ಎನ್ನುವ ರೀತಿ ಅಲ್ಲಿ ಆಗಿದೆ. ಆ ದೇಶದಿಂದ ನಮ್ಮ ಭಾರತ ಸರ್ಕಾರಕ್ಕೆ ಹಣ ಬಂದಿದ್ದಾಗ್ಯೂ ಕೂಡ ಅಲ್ಲಿರತಕ್ಕಂಥ ಪೂಜಾರಿಗಳು ಸಮಯಕ್ಕೆ ಸರಿಯಾಗಿ ಹಣವನ್ನು ಕೊಡುವುದಕ್ಕೆ ತಡಮಾಡುತ್ತಿದ್ದಾರೆ. ನಮ್ಮಲ್ಲಿ ಯಾರಿಗಾದರೂ ಸಾಲ ಬೇಕಾದರೆ, ಉದಾಹರಣೆಗೆ ನನಗೇ ಸಾಲಬೇಕಾದರೆ ನನ್ನ ಹತ್ತಿರ ಒತ್ತೆ ಇಡುವುದಕ್ಕೆ ಆಸ್ತಿಯಿಲ್ಲ, ಎಂದಾಗ ನಮ್ಮ ಮಾನ್ಯ ಕೃಷ್ಣರವರ ಆಸ್ತಿಯನ್ನು ನಾನು ಒತ್ತೆ ಇಟ್ಟು ಸಾಲ ತೆಗೆದುಕೊಳ್ಳುವ ಸಂಪ್ರದಾಯ ಉಂಟು. ಸಾಮಾನ್ಯವಾಗಿ ಯಾರು ಯಾವ ಉದ್ದೇಶಕ್ಕಾಗಿ ಸಾಲ ತೆಗೆದುಕೊಳ್ಳುತ್ತಾರೋ ಅವರು ಅದನ್ನು ಬಳಸಬೇಕು. ಆದರೆ ಇಂಡಿಯಾ ಸರ್ಕಾರದವರು ಈ ತತ್ವಕ್ಕೆ ವಿರುದ್ಧವಾಗಿ ನಡೆಯುವ ಹಾಗೆ ಕಾಣುತ್ತಿದೆ. ಏಕೆಂದರೆ ಇಂಡಿಯಾ ಸರ್ಕಾರದವರು ಇರಾನ್‌ನಿಂದ ಬಂದಿರತಕ್ಕಂಥ 45 ಕೋಟಿ ರೂಪಾಯಿಗಳ ಸಾಲದ ಹಣವನ್ನು ನಮ್ಮ ಯೋಜನೆಗೆ ಬಳಸಿಕೊಳ್ಳಿ ಎಂದು ಕೊಡುವಂಥ ಪರಿಸ್ಥಿತಿಯಲ್ಲಿಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ. ಅವರು ಏನಾದರೂ ಈ ರೀತಿ ಯಾದ ನಿಲುವನ್ನು ತೆಗೆದುಕೊಂಡಿದ್ದರೆ ಅದು ಸರಿಯಾದಂಥ ನಿಲುವಲ್ಲವೆಂದು ಹೇಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳಿಗೆ ಇದೇನು ಹೊಸ ವಿಷಯವಲ್ಲ ಏತಕ್ಕೆಂದರೆ ಹಿಂದೆ ಶ್ರೀಮತಿ ಇಂದಿರಾ ಗಾಂಧಿಯವರು ಕಾಳಿ ನದಿ ಯೋಜನೆಯ ಶಂಕು ಸ್ಥಾಪನೆ ಮಾಡಲು ಬಂದಿದ್ದಾಗ, ನಾನು ಹೋಗಿದ್ದೆ. ಹಾಗೂ ಮಾನ್ಯ ಚನ್ನಬಸಪ್ಪನವರೂ ಬಂದಿದ್ದರು. ಆಗ ಏನು ಹೇಳಿದರು, ಸರ್ಕಾರದ ಪರವಾಗಿ, ಕೇಂದ್ರ ಸರ್ಕಾರದ ಪರವಾಗಿ ಬಹಳ ಸ್ಪಷ್ಟವಾಗಿ ಹೇಳಬಲ್ಲೆ ಈ ಯೋಜನೆಗೆ ಹಣದ ಕೊರತೆ ಏನು ಇಲ್ಲ ಕಾಳಿ ನದಿ ಯೋಜನೆಯನ್ನು ಮುಗಿಸುವುದಕ್ಕೆ ಶ್ರೀಮತಿ ಇಂದಿರಾ ಗಾಂಧಿಯವರು ಅಪ್ಪಣೆ ಕೊಡಿಸಿದ್ದಾರೆ ಎಂದು ಹೇಳಿದರು. ಅಪ್ಪಣೆ ಕೊಡಿಸಿದ್ದಾರೆಂದು ಹೇಳಿದ್ದ ಅದೇ ಮಾನ್ಯ ಚನ್ನಬಸಪ್ಪನವರು ನಮ್ಮೊದುರಿಗೆ ಹಣ ಸಹಾಯ ಇನ್ನೂ ದೊರೆತಿಲ್ಲವೆಂದು ಗೋಗೆರೆದಿದ್ದರು. ಈಗಲೂ ಸಹ ಅದೇ ಧೋರಣೆಯನ್ನೇ, ಅದೇ ಪಲ್ಲವಿಯನ್ನೇ ಹಿಡಿದಿದ್ದಾರೆಯೇ ಎಂದು ನಮಗೆ ಅನುಮಾನ ಉಂಟಾಗುತ್ತಿದೆ.

ಶ್ರೀ ಎಂ. ವೈ. ಘೋರ್ಪಡೆ.—ಮುಂದಿನ ವರ್ಷ ಕಾಳಿ ನದಿಯ ಮೇಲೆ ಸುಮಾರು 50 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ನಮ್ಮ ಅಂದಾಜು ಇದೆ. ಈ ರೀತಿ ಹಿಂದೆ ಯಾವ ಕಾಲಕ್ಕೂ ಆಗಿಲ್ಲ. ಅಂಥ ಬೃಹತ್ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಸ್ವಾಭಾವಿಕವಾಗಿ ನಮ್ಮ ಪ್ರಯತ್ನಕ್ಕೆ ಪೂರಕವಾಗಿ ಕೇಂದ್ರದಿಂದ ಸಾಕಷ್ಟು ಪ್ರಮಾಣದಲ್ಲಿ ಹಣ ದೊರಕಬೇಕು. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಈಗ ಮುಂದೆ ಬರುವ 1976-77ನೇ ವರ್ಷದ ಪ್ಲಾನ್‌ಗೆ ಕೇಂದ್ರದವರು 14-15 ಕೋಟಿ ರೂಪಾಯಿ ಸಹಾಯ ಕೊಡಲಿಕ್ಕೆ ಒಪ್ಪಿದ್ದಾರೆ. ಈಗ ಒಂದು ಮಾತನ್ನು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಬರಹದ ಮೂಲಕ ತಿಳಿಸಿದ್ದಾರೆ. ಇಷ್ಟೇ ಅಲ್ಲಾ ಪ್ಲಾನಿಂಗ್ ಕಮಿಷನ್ ಡಿಸ್ಕಷನ್ ಆಗುವ ಕಾಲದಲ್ಲೂ ಕೂಡ ಹೇಳಿದ್ದಾರೆ. 1976-77ನೇ ವರ್ಷದಲ್ಲಿ ಕುವೈತ್‌ನಿಂದ ನಮ್ಮ ದೇಶಕ್ಕೆ 15 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದಕ್ಕೆ ಇನ್ನು ಸ್ವಲ್ಪ ಹೆಚ್ಚಿನ ಹಣವನ್ನು ಸೇರಿಸಿ 20 ಕೋಟಿ ರೂಪಾಯಿಗಳನ್ನು ಕೇಂದ್ರದವರು ನಮ್ಮ ರಾಜ್ಯಕ್ಕೆ ಕೊಡಬೇಕೆಂದು ಕೇಳಿದ್ದೇವೆ. ಇದೇ ರೀತಿಯಾದ ಚರ್ಚೆ ವರ್ಷೇ ವರ್ಷೇ ನಡೆಯಲೇ ಬೇಕು. ಹಾಗೂ ನಡೆಯುತ್ತಲಿದೆ. ಆದರೆ ಕಾಳಿ ನದಿ ಯೋಜನೆಯೊಳಗೆ ಕೇಂದ್ರ ಸಹಾಯ ಮಾಡುತ್ತಿಲ್ಲ ಅಥವಾ ಹಿಂದೆ ಮಾಡಿಲ್ಲ, ಮುಂದೆ ಮಾಡುವುದಿಲ್ಲ ಎನ್ನುವಂಥ ಅಭಿಪ್ರಾಯ ಯಾರಿಗೂ ಇರಕೂಡದು. ತಮಗೇ ಗೊತ್ತಿರುವಂತೆ 4ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಬೃಹತ್ ಯೋಜನೆಯನ್ನು ಕೈಗೊಂಡಾಗ ನಮ್ಮಲ್ಲೂ ಕೂಡ ಸಾಕಷ್ಟು ಹಣ ಇರಲಿಲ್ಲ. ಅಗಲೂ ಸಹ ನಮ್ಮ ರಾಜ್ಯದ ಹಣಕಾಸಿನ ಆರ್ಥಿಕ ಪರಿಸ್ಥಿತಿ ಅಷ್ಟು ಭದ್ರವಾಗಿ ಇರಲಿಲ್ಲ. ಅದರೂ ಕೂಡ ಧೈರ್ಯ ಮಾಡಿ 200 ಕೋಟಿ ರೂಪಾಯಿಗಳ ಯೋಜನೆ ಪ್ರಾರಂಭ ಮಾಡಿದವು.

4-00 P.M.

ಆ ಕಾಲಕ್ಕೆ ಪ್ರಯತ್ನ ಮಾಡದೇ ಹೋಗಿದ್ದರೆ ಇವೊತ್ತು ಕಾಳಿ ನದಿ ಯೋಜನೆ ಪ್ರಗತಿ ನಡೆಯುತ್ತಿರಲಿಲ್ಲ. ಆ ಕಾಲಕ್ಕೆ ನಮಗೆ ನಿಜವಾಗಿ ಹೆಚ್ಚಿನ ಹಣದ ಕೊರತೆ ಇದ್ದಾಗ ಔಟ್ ಸೈಡ್ ದಿ ಪ್ಲಾನ್ ಅಲ್ಲದೇ ಸ್ಪೆಷಲ್ ಅಸಿಸ್ಟೆನ್ಸ್ ಎಂದು ಕೇಂದ್ರದಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಕೊನೆಯ ಎರಡು ವರ್ಷದಲ್ಲಿ ಸುಮಾರು 25 ಕೋಟಿ ರೂಪಾಯಿಗಳನ್ನು ಕೊಟ್ಟರು. ಅದನ್ನು ನಾವು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದುದು, ಅಲ್ಲದೇ 1975-76ರಲ್ಲಿ ಎಲ್. ಐ. ಸಿ. ಯಿಂದ 5 ಕೋಟಿ ರೂಪಾಯಿಗಳನ್ನು ಕೊಟ್ಟರು, ಈ ವರ್ಷ 10 ಕೋಟಿ ರೂಪಾಯಿ ಕೊಡುತ್ತಾರೆ ಅಲ್ಲದೇ ಮುಂದಿನ ವರ್ಷ 15 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಒಪ್ಪಿದ್ದಾರೆ, ಆದರೆ ನಾವು, 20 ಕೋಟಿ ರೂಪಾಯಿಗಳನು ಕೇಳುತ್ತಿದ್ದೇವೆ. ಒಟ್ಟಿನಲ್ಲಿ ಹೇಳುವುದಾದರೆ ಹೇಗಾದರೂ ಮಾಡಿ ನಾವು ಈ ಒಂದು ಯೋಜನೆಯನ್ನು ಪೂರೈಸಬೇಕು ಎಂದು ಮಾಡಿದ್ದೇವೆ ನಮ್ಮ ರಾಜ ಸರ್ವಪ್ರಯತ್ನ ಮಾಡಿದ್ದರೂ ಕೂಡ ಹಣದ ಕೊರತೆ ಅನುಭವಿಸಬೇಕಾಗುತ್ತದೆ. ನಮ್ಮ ಲೆಕ್ಕದ ಪ್ರಕಾರ 45 ಕೋಟಿ ರೂಪಾಯಿಗಳ ಹಣದ ಕೊರತೆ ಇರುತ್ತದೆ. ಆ ಕಾರಣ ಕುವೈಟ್‌ನಿಂದ ನೆರವು ಬಂದಾಗ ಅದನ್ನು ನಿರ್ವಹಿಸಬೇಕು ಎಂದು ಚರ್ಚೆ ನಡೆದು ಒಂದು ತೀರ್ಮಾನಕ್ಕೆ ಬಂದೆವು ಅದರ ಪ್ರಕಾರ 45 ಕೋಟಿ ರೂಪಾಯಿಗಳು ಕೇಂದ್ರದಿಂದ ಬರುತ್ತದೆ. ಅಷ್ಟು ಹಣ ಉಪ ಯೋಗಿಸಿ ಈ ಕಾಳಿ ನದಿ ಯೋಜನೆಯನ್ನು ಸಕಾಲಕ್ಕೆ ಪೂರೈಸಿ ಅದರಿಂದ ಸಾಕಷ್ಟು ವಿದ್ಯುಚ್ಛಕ್ತಿ ಪ್ರಯೋಜನ ಆಗುವ ರೀತಿಯಲ್ಲಿ ಮಾಡುತ್ತೇವೆ. ಇದರಲ್ಲಿ ಯಾರಿಗೂ ಅನುಮಾನ ಇರಬೇಕಾಗಿಲ್ಲ ಎಂದು ಹೇಳುತ್ತೇನೆ. ಈಗ ಅವರು ಎಷ್ಟು ಹಣ ಕೊಡಬಹುದು ಅಷ್ಟು ಹಣ ಕೊಡುತ್ತಾರೆ,

ಆದರೆ ನಾವು ಸ್ವಲ್ಪ ಜಾಸ್ತಿ ಹಣ ಕೇಳುವುದು ಸ್ವಾಭಾವಿಕವಾದುದು. ಅದಕ್ಕೆ ನಾವು ಎಷ್ಟು ಅರ್ಥ ಕೊಡಬೇಕೋ ಅಷ್ಟು ಮಾತ್ರ ಕೊಡಬೇಕೇ ಹೊರತು ಹೆಚ್ಚು ಅರ್ಥ ಕೊಡುವ ಪ್ರಯತ್ನ ಮಾಡಬಾರದು ಎಂದು ಹೇಳಬಯಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಮಾನ್ಯ ಅರ್ಥಸಚಿವರು ಹೇಳಿದ ವಿಷಯ ಯಥಾವತ್ತಾದುದಂ ಅದು ನಿಜ. ನಾನು ಯಾವ ವಿಚಾರವನ್ನು ಸ್ಪಷ್ಟೀಕರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದರೆ ಯಾವಾಗಲೂ ಬೇಡಿ, ಬೇಡಿ ಕೈಯೊಡ್ಡಿ ಹಣ ತರ ಬೇಕಾಗಿದೆ. ಸಾಲ ಬಂದಾಗಲೂ ಕೂಡ ಚರ್ಚೆ ನಡೆಯಬೇಕಾಗುತ್ತದೆ. ಈಗ ಅವರು ಹಣ ಕೊಡುವುದರಲ್ಲಿ ಯಾವ ಸಂಶಯವೂ ಕೂಡ ಇಲ್ಲ. ನಮಗೆ ಇಲ್ಲದಿದ್ದರೂ ಇವೊತ್ತು ಈ ದೇಶದ ಭವಿಷ್ಯಕ್ಕಾಗಿ ಅವರು ಹಣವನ್ನು ಕೊಡಲೇ ಬೇಕಾಗುತ್ತದೆ, ಏಕೆಂದರೆ ಇವೊತ್ತಿನ ದಿವಸ ಪವರ್ ಷಾರ್ಟೇಜ್ ಎಲ್ಲ ಕಡೆಗಳಲ್ಲಿ ಇದೆ. ಇಂಡಿಯಾ ಸರ್ಕಾರದವರು ಅದನ್ನು ಮನಗಂಡಿರುತ್ತಾರೆ. ಇವೊತ್ತಿನ ದಿವಸ ಈ ದೇಶದಲ್ಲಿ ವಿದ್ಯುಚ್ಛಕ್ತಿದಾಹ ಏನು ಇದೆ ಎನ್ನುವುದು ಅವರಿಗೆ ಗೊತ್ತಿದೆ, ಆದ್ದರಿಂದ ವರು ಹಣವನ್ನು ಕೊಟ್ಟೇ ಕೊಡುತ್ತಾರೆ ಎಂದು ಹೇಳುತ್ತೇನೆ. ಆದರೆ ನಮ್ಮ ಅರ್ಥಸಚಿವರು ಪದೇ ಪದೇ ಹೋಗಿ ಅವರನ್ನು ಒಲಿಸಿಕೊಂಡು ಹಣ ತರಬೇಕಾಗಿದೆ. ಈ ವಿಷಯವನ್ನು ಬಿಟ್ಟರೆ ಅವರು ಈ ವಿಚಾರದಲ್ಲಿ ಹಣವನ್ನು ಕೊಟ್ಟೇ ಕೊಡುತ್ತಾರೆ ಅದರಲ್ಲಿ ಯಾವ ಸಂಶಯ ಕೂಡ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಅದು ಕುದುರೆಮುಖದ ಯೋಜನೆಗೂ ಕೂಡ ಅನ್ವಯಿಸುತ್ತದೆಯೋ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಲಿಲ್ಲ.

SRI M. Y. GHORPADE.—I don't think there is any controversy about Kudremukh Project.

SRI M. S. KRISHNAN.—But the amount of money expected from the Iranin sources meant for Kudremukh-does it flow into Karnataka?

SRI M. Y. GHORPADE.—Why are you worried about financial sources? Kudremukh Project has reached a definite stage. This is one of the Project where strict time schedules have been worked out. There are consequences on either side for not completing within the period stipulated. There is no doubt about the financial soruces. But some portion of the work we have to do. The State Government has to complete the road work and other works. This need constant negotiation. No Member need feel any apprehension that there is any uncertainity regarding the flow of funds to compleate this big project in time and according to schedule.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷರೆ, ನಾನು ಪ್ರಾರಂಭದಲ್ಲಿ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಒಂದು ಮತ್ತು ಎರಡನೇ ಪ್ಯಾರದಲ್ಲಿರತಕ್ಕ ವಾಕ್ಯ ಓದಿದೆ. ಇದರಲ್ಲಿ ಎರಡನೇ ವಾಕ್ಯ ಇನ್ನೂ ಹೆಚ್ಚು ಮಹತ್ವದ್ದು. ಆ ವಿಚಾರವನ್ನು ಪ್ರಸ್ತಾಪ ಮಾಡುವುದು ಅಗತ್ಯ ಇದೆ. ಹಿಂದಿನ ರಾಜ್ಯಪಾಲರು ಕಳೆದ ವರ್ಷ things should change for the better, ಎಂಬ ಆಸೆಯನ್ನು ವ್ಯಕ್ತಪಡಿಸಿದರು, This has come about. ಇದು ಹೇಗೆ ಆಯಿತು, ಇದು ಎಲ್ಲಾ ಸಾಧನೆ ಮಾಡುವುದಕ್ಕೆ ಏನು ಪರಿಸ್ಥಿತಿ ಇತ್ತು ಎನ್ನುವುದಕ್ಕೆ ಒಂದೇ ವಾಕ್ಯದಲ್ಲಿ ಅವರು ಕಾರಣ ಹೇಳಿದ್ದಾರೆ. ಅದೇನಂದರೆ, "This has come about, chiefly due to the dynamic leadership provided by our Prime Minister in declaring a state of national emergency and announcing the twenty point economic programme" ಎಂದು ಹೇಳಿದ್ದಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ತಾವು ಇದನ್ನು ಮೊದಲು ಹೇಳಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ನಿಮ್ಮ ಮನಸ್ಸನ್ನು ಸಂಪೂರ್ಣವಾಗಿ ವಶ ಮಾಡಿಕೊಂಡ ಮೇಲೆ ಪ್ರಸ್ತಾಪ ಮಾಡಬೇಕೆಂದು ಇದ್ದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ತಾವು ಪ್ರಧಾನಿಯವರ ಹೆಸರನ್ನು ಹೇಳದೆ ಇದ್ದರೆ ತಮಗೆ ಊಟ ಮಾಡಿದ ಅನ್ನ ಜೀರ್ಣವಾಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಇದು ಪ್ರಧಾನಿಯವರು ಹಾಕಿಕೊಟ್ಟ ಒಂದು ರಾಷ್ಟ್ರದ ಕಾರ್ಯಕ್ರಮ.

ಶ್ರೀ ಎಂ. ವೈ. ಘೋರ್ಪಡೆ.—ಅವರು ನಮ್ಮ ರಾಷ್ಟ್ರದ ಪ್ರಧಾನಿಯಾಗಿರುವುದರಿಂದ ಅವರ ಹೆಸರನ್ನು ನಾವು ಹೇಳಲೇ ಬೇಕಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ರಾಷ್ಟ್ರದ ನಾಯಕಿಯಾಗಿದ್ದಾರೆ. ನಮ್ಮ ರಾಷ್ಟ್ರದ ನಾಯಕಿಯವರಾದ ಪ್ರಧಾನಿಯವರು ಹಾಕಿಕೊಟ್ಟ ಕಾರ್ಯಕ್ರಮ, ಆದರಂತೆ ನಿಲುವನ್ನು ತೆಗೆದುಕೊಂಡಿದ್ದಾರೆ. ಇದು ಏಕೆ ಹೀಗೆ ಆಯಿತು? ಯಾರು ಯಾರತ್ತ ಈ ಒಂದು ತುರ್ತು ಪರಿಸ್ಥಿತಿಯನ್ನು ಆಹ್ವಾನ ಮಾಡುವುದಿಲ್ಲ. ಆದರೆ ಇದು ಅನಿವಾರ್ಯವಾಗಿ ಬಂತು, ಅಂತಹ ಅನಿವಾರ್ಯ ಏನು ಎಂಬುದನ್ನು ಈಗ ಪರಿಶೀಲನೆ ಮಾಡಬೇಕಾಗಿದೆ. ನಾನಾದರೂ ಭಾವನೆ ಮಾಡುತ್ತೇನೆ, ತಾವುಗಳು ಸ್ವಲ್ಪ ಸಾವಧಾನ ಚಿತ್ತದಿಂದ ಆಲಿಸಿದ್ದೇ ಆದರೆ ಅನಂತರ ನನ್ನ ವಾದವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೀರಾ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಕಳೆದ ವರ್ಷ ದೇಶದಲ್ಲಿ ಎಂತಹ ರಾಜಕೀಯ ಪರಿಸ್ಥಿತಿ ಇತ್ತು, ರಾಜಕೀಯ ರಂಗದಲ್ಲಿ ಏನೊಂದು ಅಲ್ಲೋಲಕಲ್ಲೋಲ ಆಗುತ್ತಿತ್ತು ಎನ್ನುವುದನ್ನು ತಾವು ನೆನಪು ಮಾಡಿಕೊಳ್ಳ ಬೇಕು. ನಮ್ಮ ರಾಷ್ಟ್ರದಲ್ಲಿ ಅದಂಥ ಘಟನೆಗಳು ಏನು ಎಂಬುದು. ಗೊತ್ತಿದೆ. 1971ರ ಚುನಾವಣೆಯಲ್ಲಿ ಈ ನಮ್ಮ ರಾಷ್ಟ್ರದ ನಾಯಕಿ ಶ್ರೀಮತಿ ಇಂದಿರಾ ಗಾಂಧಿಯವರ ನಿಲುವನ್ನು ಕೆಲವು ಸಂಘಟನಾ ಶಕ್ತಿಗಳು ವಿರೋಧಮಾಡಿದರು. ವೈಯಕ್ತಿಕವಾಗಿ ವಿರೋಧ ಪಕ್ಷದವರಿಗೆ ಮಾನ್ಯ ಮುರಾರ್ಜಿ ದೇಸಾಯಿ ಅವರ ಬಗ್ಗೆ ಎಷ್ಟು ಗೌರವ ಇದೆಯೋ, ಅಷ್ಟೇ ಗೌರವ ನಮಗೂ ಇದೆ. ಆದರೆ ರಾಜಕೀಯದಲ್ಲಿ ಅವರು ಕವಲು ದಾರಿಗೆ ಈ ತಪ್ಪು ದಾರಿಗೆ ಇಳಿದಾಗ ನಾವು ಏನು ಮಾಡುವುದಕ್ಕಾಗುತ್ತದೆ? ಇಂಥಾ ಒಂದು ಪರಿಸ್ಥಿತಿ ಹೇಗೆ ಉಂಟಾಯಿತು? ತಮಗೆಲ್ಲಾ ಗೊತ್ತು, 1971 ರಲ್ಲಿ ಮೂರು ವಿರೋಧ ಪಕ್ಷಗಳು ಸಂಘಟನೆಗೊಂಡವು. ಈ ಮೂರು ವಿರೋಧ ಪಕ್ಷಗಳನ್ನೂ ಒಂದು ಹಳೇ ಹಗ್ಗದಲ್ಲಿ ಕಟ್ಟ ಲಾಗಿತ್ತು. ಆದರೆ, ಆ ಹಗ್ಗಕ್ಕೆ ಶಕ್ತಿ ಇಲ್ಲದೆ ಕಿತ್ತುಹೋಯಿತು; ಹಗ್ಗ ಕಿತ್ತುಹೋದಒಡನೆಯೇ ಎಲ್ಲವೂ ಬಿಡಿ ಬಿಡಿಯಾದವು. ಹೀಗಾದುದರಿಂದ, ಅವು ಹತಾಶಗೊಂಡವು. ಪುನಃ 1972 ರಲ್ಲಿ ಸಂಘಟಿನೆಗೊಂಡು ವಿರೋಧ ಮಾಡಲಾಯಿತು. ಆದರೂ ಏನನ್ನೂ ಸಾಧಿಸಲಾಗಲಿಲ್ಲ. ಅನಂತರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಂಯಮ ತಪ್ಪಿತು. ಅವರ ಬುದ್ಧಿ ಅವರ ಕೈಯಿಂದ ಜಾರಿಹೋಯಿತು. ಮತ್ತೆ ಅವರು ಏನೆಲ್ಲಾ ಮಾಡಿದರು ಎಂದರೆ: ಈ ದೇಶ ಪ್ರಜಾಪ್ರಭುತ್ವ ದೇಶ, ಈ ದೇಶದಲ್ಲಿ ಪ್ರಜಾಸತ್ತೆಯನ್ನು ಒಪ್ಪಿಕೊಂಡಿದ್ದೇವೆ, ಪ್ರಜಾ ಸತ್ತಾತ್ಮಕವಾದ ಪದ್ಧತಿಯ ಮೂಲಕ ಪ್ರತಿನಿಧಿ ಸರ್ಕಾರ ರಚನೆ ಮಾಡಿ ಆಡಳಿತ ನಡೆಸುತ್ತೇವೆ ಎಂದರು. ಇಲ್ಲೂ ಕೂಡ, ಒಂದು ಬಾರಿಯಲ್ಲ; ಎರಡು ಬಾರಿ ಮುಗ್ಗರಿಸಿದರು. ಇದರಿಂದ ವಿರೋಧ ಪಕ್ಷದ ನಾಯಕರಿಗೆ ಇನ್ನಷ್ಟು ಸಂಯಮ ತಪ್ಪಿತು. ಅವರು ತಪ್ಪು ದಾರಿಗಿಳಿದರು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಯಾವ ಕಾರ್ಯಗಳು ಸಲ್ಲವೋ ಅಂಥಾ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಅವರು ಪ್ರಾರಂಭ ಮಾಡಿದರು. ಯಾವುದನ್ನು ಚುನಾವಣಾ ಪೆಟ್ಟಿಗೆ ಮೂಲಕ ಸಾಧಿಸುವುದಕ್ಕಾಗಲಿಲ್ಲವೋ ಅದನ್ನು ಇನ್ನೂ ಹತ್ತಿರದ ದಾರಿಯಲ್ಲಿ ಸಾಧಿಸಬೇಕೆಂದು ಹೊರಟರು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮದರಾಸು ರಾಜ್ಯಕ್ಕೆ ಪ್ರಜಾಪ್ರಭುತ್ವದ ಮೂಲಕ ಸಿದ್ಧಾಂತವನ್ನು ಏತಕ್ಕೆ ಅಳವಡಿಸುವುದಿಲ್ಲ?

ಶ್ರೀ ಕೆ. ಪುಟ್ಟಸ್ವಾಮಿ.—ಮದರಾಸು ರಾಜ್ಯದವರು ಮಾಡಿದಂಥ ವರದಿ ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ಓದುವುದಕ್ಕೆ ತಮಗೆ ಅವಕಾಶವಿಲ್ಲವೆಂದು ಕಾಣುತ್ತದೆ. ಅದನ್ನು ಓದಿದ ಮೇಲೆ ತಮ್ಮ ಅಭಿಪ್ರಾಯವೇ ಬೇರೆಯಾಗುತ್ತದೆ. ಅದನ್ನು ಓದಿ ಗ್ರಹಿಸಿಕೊಳ್ಳತಕ್ಕ ಶಕ್ತಿಯೂ ಕೂಡ ತಮಗೆ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಸರ್ಕಾರದ ಬಗ್ಗೆ 99 ಅಪಾದನೆಗಳನ್ನು ನಿಮ್ಮ ಪಕ್ಷದವರೇ ಮಾಡಿದ್ದರು. ಅದಕ್ಕೆ ಮಾನ್ಯ ಸದಸ್ಯರು ಏನು ಹೇಳುತ್ತಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಭಾಷಣ ಮಾಡುತ್ತಾ ಇರುವಾಗ ನನಗೆ ಸವಾಲಾಗಿ ಪ್ರಶ್ನೆ ಹಾಕಿದರೆ ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ನನಗೆ ಶಕ್ತಿ ಇಲ್ಲದಿದ್ದರೂ, ನಮ್ಮ ಸಚಿವ ಸಂಪುಟದಲ್ಲಿ ಶಕ್ತಿ ಇರುವವರು ಇದ್ದಾರೆ; ಅವರು ಕೊಡುತ್ತಾರೆ; ಸಂಘಟನೆಗೊಂಡ ಈ ವಿರೋಧ ಪಕ್ಷಗಳು ಪ್ರಜಾಪ್ರಭುತ್ವಕ್ಕೆ ಹಾನಿಕಾರಕವಾದ ಕಾರ್ಯಗಳನ್ನು ಕೈಗೊಂಡವು ಅಂತಹ ಪ್ರಸಂಗಗಳು ಈ ಸಭೆಯಲ್ಲೂ ನಡೆಯುತ್ತಿದ್ದವು. ಮಾನ್ಯ ಸದಸ್ಯರು ಯಾರು ಕೋಪ ಮಾಡಿಕೊಳ್ಳುವುದಿಲ್ಲ ಎಂದು ಭಾವಿಸಿ ಹೇಳುತ್ತಿದ್ದೇನೆ : ಕೆಲವು ಸದಸ್ಯರು ಅಧ್ಯಕ್ಷರು ಆ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ, "ಸಭೆ ನಡೆಯುವುದಕ್ಕೇ ಅವಕಾಶ ಕೊಡುವುದಿಲ್ಲ'' ಎಂದು ಹೇಳುತ್ತಿದ್ದರು. 217 ಜನ ಸದಸ್ಯರು ಕುಳಿತು ಕೇಳುತ್ತಿದ್ದಾಗ, ಈ ಒಬ್ಬ ಸದಸ್ಯರಿಗೆ ಅಧ್ಯಕ್ಷರು ಹೇಳಿದ್ದು ಹಿಡಿಸಲಿಲ್ಲವೆಂದರೆ ಏನು ಅರ್ಥ ? ಪ್ರಜಾಪ್ರಭುತ್ವ ತೇರು ಎಳೆದ ಹಾಗೆ; ರಥದಲ್ಲಿ ದೇವರನ್ನು ಕುಳ್ಳಿರಿಸಿ ಎಳೆಯುವುದಕ್ಕೆ ಸಹಸ್ರಾರು ಜನರಿದ್ದರೂ ಕೂಡ, ಚಕ್ರಕ್ಕೆ ಕೊಡತಿ ಕೊಡುವುದಕ್ಕೆ ನಾಲ್ಕು ಜನ ಇದ್ದೇ ಇರಬೇಕು. ರಾಜಕೀಯದಲ್ಲಿ ವಿರೋಧ ಪಕ್ಷದವರ ಪಾತ್ರ ಅದು, ನಾವು ರಥ ಎಳೆಯುವವರು, ರಥದ ಚಕ್ರ ಬೇರೆ ಕಡೆಗೆ ಹೋಗದಂತೆ ಕೊಡತಿ ಕೊಡುವವರು ನೀವು, ಆದರೆ, ನಮ್ಮ ಕೈಯಲ್ಲಿ ಕೊಡದಿ ಇದೆ ಎಂದು ತಿಳಿದುಕೊಂಡು, ಅದನ್ನು ರಥದ ಚಕ್ರಕ್ಕೇ ಅಡ್ಡವಾಗಿ ಕೊಡುತ್ತಾ, ರಥವನ್ನೇ ಮುಂದಕ್ಕೆಹೋಗದಂತೆ ತಡೆದರೆ ಏನು ಮಾಡುವುದು ? ಆದುದರಿಂದಲೇ ನಿಮ್ಮ ಕೈಯಲ್ಲಿದ್ದ ಕೊಡತಿಯನ್ನು ಕಸಿದುಕೊಂಡೆವು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಎಳೆಯುವವರ ಮೇಲೆ ರಥದ ಕಾಲುಗಳು ನಡೆಯುತ್ತಿದ್ದರೆ

ಶ್ರೀ ಕೆ. ಪುಟ್ಟಸ್ವಾಮಿ.—ಯಾವುದೇ ಒಂದು ಶಕ್ತಿಯನ್ನು ಬೆಳೆಸಿಕೊಳ್ಳಬೇಕಾದರೆ, ಆದಕ್ಕೆ ತಪಸ್ಸಾಧನೆ ಬೇಕು, ತಾಳ್ಮೆ ಬೇಕು, ಸಹನೆ ಬೇಕು, ಸಾಮರ್ಥ್ಯಬೇಕು. ಇವೆಲ್ಲಕಿಂತ ಮುಖ್ಯವಾಗಿ ಎಷ್ಟು ಸೋತರೂ ಧೃತಿಗೆಡದೆ ನಿಲ್ಲತಕ್ಕ ಒಂದು ಚೈತನ್ಯಬೇಕು. ನಮ್ಮ ವಿಧಾನ ಸಭೆಯಲ್ಲೇ ಅಲ್ಲದೆ, ರಾಷ್ಟ್ರದ ಲೋಕಸಭೆಯಲ್ಲೂ ಕೂಡ ಯಾವುದೋ ಒಂದು ಲೈಸೆನ್ಸ್ ಡೀಲ್ ಬಗ್ಗೆ ಪ್ರಸ್ತಾಪವೆದ್ದಿತು. ಆಗ ನನಗೆ ಪ್ರಜಾಪ್ರಭುತ್ವದಲ್ಲಿದ್ದ ನಂಬಿಕೆಯೇ ಕಳೆದುಹೋಗುತ್ತಾ ಬಂತು; ಪ್ರಜಾಪ್ರಭುತ್ವ ಈ ರಾಷ್ಟ್ರದಲ್ಲಿ ಉಳಿಯುತ್ತದೆಯೋ ಇಲ್ಲವೋ ಎಂಬ ಅನುಮಾನ ಕೂಡ ಬಂತು. ಒಂದಲ್ಲ, ಎರಡಲ್ಲ, ಸುಮಾರು ಹದಿನೈದು ದಿವಸ ಲೈಸೆನ್ಸ್ ಡೀಲ್ ಕುರಿತು ಪ್ರಸ್ತಾಪವಾಯಿತು.

ಶ್ರೀ ಟಿ. ಎಂ. ಮಂಜುನಾಥ್.—ಈಗ ಪ್ರಜಾಪ್ರಭುತ್ವ ಇದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಸಂಪೂರ್ಣವಾಗಿ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾವು ಭಾಷಣ ಮಾಡಿದ ವಿಚಾರ ಪತ್ರಿಕೆಗಳಲ್ಲೇ ಬರುವುದಿಲ್ಲ. ಇದು ಎಂಥಾ ಪ್ರಜಾಪ್ರಭುತ್ವ,

ಶ್ರೀ ಕೆ. ಪುಟ್ಟಸ್ವಾಮಿ.—ಎಲ್ಲಕ್ಕೂ ಒಂದು ಮಿತಿ ಇದೆ. ವಿರೋಧ ಪಕ್ಷದವರಿಗೂ ಹಕ್ಕು ಇದೆ, ಅಧಿಕಾರ ಇದೆ. ಆದರೆ, ಆ ಹಕ್ಕು ಮತ್ತು ಅಧಿಕಾರಕ್ಕೆ ಒಂದು ಮಿತಿ ಇದೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ಆಳುವ ಪಕ್ಷದವರಾಗಲೀ, ವಿರೋಧ ಪಕ್ಷದವರಾಗಲೀ, ಪ್ರತಿಯೊಬ್ಬರೂ ಸಹ ಸಂಯಮವನ್ನು ಅನುಸರಿಸದೆ, ಅನ್ಯಾಯ ಕಾರ್ಯವನ್ನೆಸಗಿದರೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳು ಒಂದೇ ರಥದ ಎರಡು ಚಕ್ರಗಳಿದ್ದಂತೆ. ಆದರೆ, ರಾಷ್ಟ್ರೀಯ ಲೋಕಸಭೆಯಲ್ಲಿ ಸುಮಾರು 60 ಕೋಟಿ ಜನರ ಪ್ರಾತಿನಿಧ್ಯ ಪಡೆದ ಸಭೆಯಲ್ಲಿ ಒಂದು ಸಣ್ಣ ವಿಷಯ (ಅದು ಗಹನದ್ದೇ ಇರಬಹುದು) ಸುಮಾರು 15 ದಿವಸಗಳ ಕಾಲ

ಚರ್ಚೆಗೆ ಒಳಗಾಯಿತು. ಈಗ ಹದಿನೈದು ದಿವಸಗಳವರೆಗೆ ರಾಷ್ಟ್ರದ ಹಿತಚಿಂತನೆಯ ಮಾತೇ ಇಲ್ಲ, ಬರೀ ಲೈಸೆನ್ಸ್ ಡೀಲ್, ಲೈಸೆನ್ಸ್ ಡೀಲ್, ಸಾಮಾನ್ಯವಾಗಿ ಯಾವ ಪ್ರಜಾಪ್ರಭುತ್ವ ಸರ್ಕಾರವಾಗಲೀ ದಂಡ ಪ್ರಯೋಗ ಆಡಳಿತ ನಡೆಸುವುಲ್ಲ. ಆದರೆ, ದೇಶಕ್ಕಾಗಿ ಅಪಾರವಾಗಿ ತ್ಯಾಗ ಮಾಡಿದಂತಹವರು, ದೇಶದ ಹಿರಿಯ ನಾಯಕರು ದೇಶದಲ್ಲಿ ಘನತೆಯನ್ನು ಸಂಪಾದಿಸಿದ್ದವರು ಅಂತಹವರು ತಮ್ಮ ಸಂಯಮವನ್ನು ಬಿಟ್ಟು, ದೆಹಲಿ ಕಛೇರಿಗೆ ಮುತ್ತಿಗೆ ಹಾಕುತ್ತೇವೆ, ರಾಜ್ಯ ಸರ್ಕಾರದ ಸೂತ್ರ ಹಿಡಿದಿರುವವರಿಂದ ನಾವು ಸೂತ್ರ ಕಸಿದುಕೊಳ್ಳುತ್ತೇವೆ ಎಂದು ಹೇಳುತ್ತಾ ಪೋಲಿಸರಿಗೆ ಮಾತನ್ನು ಕೇಳಬಾರದೆಂದೂ, ಮಿಲಿಟರಿಯವರಿಗೆ ಆಜ್ಞೆಗಳನ್ನು ಪರಿಪಾಲಿಸಬಾರದೆಂದು ಹೇಳುತ್ತಾ ಹೋದರು. ಇಂಥಾ ಮಟ್ಟಕ್ಕೆ ಹೋದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತದೆಯೇ ? ನಾವು ಇವತ್ತಿನ ದಿವಸ ಅಧಿಕಾರದಲ್ಲಿದ್ದೇವೆ, ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತೇವೆ ಎಂದು ತಿಳಿದುಕೊಂಡಿಲ್ಲ. ತಾವುಗಳು ಸರಿಯಾದ ರೀತಿಯಲ್ಲಿ ನಡೆದು, ಜನಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದರೆ, ನಮ್ಮ ಬದಲು ನೀವೇ ಮುಂದಿನ ಚುನಾವಣೆಯಲ್ಲಿ ಆರಿಸಿ ಬರುವುದಕ್ಕೆ ಅವಕಾಶವಿದೆ. ಇಂಥಾ ಅವಕಾಶವನ್ನು ಗಳಿಸಬೇಕಾದರೆ ಪ್ರಯತ್ನ ಮಾಡಬೇಕು ಎನ್ನುವುದನ್ನು ಬಿಟ್ಟು, ಬೇರೆ ಮಾರ್ಗಗಳನ್ನು ಹಿಡಿದು, ಸರ್ಕಾರದ ಯಂತ್ರ ಚಲನೆಯನ್ನು ತಡೆದು ನಿಲ್ಲಿಸುವ ಪ್ರಯತ್ನ ಮಾಡಿದರೆ, ಇದು ಪ್ರಜಾಪ್ರಭುತ್ವದ ಲಕ್ಷಣವೇ ? ದಯವಿಟ್ಟು ಮಾನ್ಯ ಸದಸ್ಯರೇ ಈ ಬಗ್ಗೆ ಆಲೋಚನೆ ಮಾಡಬೇಕು.

ಇಂತಹ ಶಕ್ತಿಗಳು ಈ ದೇಶದಲ್ಲಿ ತಾಂಡವಾಡುತ್ತಿದ್ದವು ತಾವು ಯಾರೂ ಇಂತಹ ಶಕ್ತಿಗಳಿಗೆ ಪ್ರೋತ್ಸಾಹ ಕೊಡುವುದಿಲ್ಲ ಎನ್ನುವ ನಂಬಿಕೆ ನನಗೆ ಇದೆ. ಜನಸಂಘ, ಆರ್. ಎಸ್. ಎಸ್. ಜಮಾಇತ ಎ ಇಸ್ಲಾಮ್ ಮತ್ತು ಆನಂದ ಮಾರ್ಗ. ಇವರೆಲ್ಲಾ ಗುಂಪು ಸೇರಿಕೊಂಡು ವಿಚಿತ್ರ ಕಾರಕ ರೀತಿಯಲ್ಲಿ ನಡೆದುಕೊಂಡು ಬರುತ್ತಿದ್ದರು ನೀವು ನೋಡಿರಬಹುದು ತಲೆಬುರುಡೆಗಳ ಚಿತ್ರಗಳನ್ನು ನೋಡುವುದಕ್ಕೆ ಭಯವಾಗುತ್ತದೆ. ನನಗೆ ಬಹಳ ದುಃಖವಾಗುತ್ತದೆ, ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ಭದ್ರತೆಗಾಗಿ ಅಪಾರವಾದ ತ್ಯಾಗಮಾಡಿದವರು, ನಿಸ್ಸೀಮ ರಾಷ್ಟ್ರಭಕ್ತರೂ ಇಂತಹ ಗುಂಪಿಗೆ ಸೇರಿಬಿಟ್ಟಿದ್ದಾರಲ್ಲಾ ಎಂದು. ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕಾಗಿ, ಪ್ರಜಾಪ್ರಭುತ್ವ ರಕ್ಷಣೆಗಾಗಿ ಈ ತುರ್ತುಪರಿಸ್ಥಿತಿಯನ್ನು ತರಲೇಬೇಕಾಯಿತು. ತುರ್ತುಪರಿಸ್ಥಿತಿ ಎಂದರೆ ಏನು ? ರಾಜ್ಯಾಂಗ ರದ್ದು ಮಾಡುವುದು ಅಲ್ಲ ರಾಜ್ಯಾಂಗ ಶಾಸನ ರದ್ದಾಗಿಲ್ಲ. ರಾಜ್ಯಾಂಗ ಶಾಸನವನ್ನು ನಿರೂಪಿಸಿದವರೇ "ಫಾದರ್ ಆಫ್ ದಿ ಕಾನ್‌ಸ್ಟಿಟ್ಯೂಷನ್" ಇಂಥ ಒಂದು ಪರಿಸ್ಥಿತಿ ಬಂದಾಗ, ಆ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಇಂಥ ಒಂದು ಅಗತ್ಯವಾದ ಶಾಸನವನ್ನು, ಅಧಿಕಾರವನ್ನು ಒದಗಿಸಿಕೊಟ್ಟಿದ್ದಾರೆ. ಈ ಕಾರಣದಿಂದ ರಾಷ್ಟ್ರದಲ್ಲಿ ರಾಜ್ಯಾಂಗ ಶಾಸನ ಬದ್ಧವಾದ ತುರ್ತು ಪರಿಸ್ಥಿಯನ್ನು ಘೋಷಿಸಲಾಯಿತು. ಇಲ್ಲಿರತಕ್ಕ ಮಾನ್ಯ ಸದಸ್ಯರುಗಳು ಯಾರೂ ಅಂತಹ ಶಕ್ತಿಗಳು ಅಲ್ಲ, ಅಂತಹ ವಿರೋಧಿಶಕ್ತಿಗಳಿಗೆ ತಾವು ಬೆಂಬಲ ಕೊಡುವುದಿಲ್ಲ ಎನ್ನುವ ನಂಬಿಕೆ ಇದೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕವರು ಯಾರು ಅಂತಹ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ತುರ್ತು ಪರಿಸ್ಥಿತಿ ಬಂದಮೇಲೆ, ಅದು ಸರ್ಕಾರ ಕೈಗೊಂಡಂತ ನಿಲುವನ್ನು ರಾಷ್ಟ್ರದ ಪಾರ್ಲಿಮೆಂಟಿನ ಪ್ರಜಾಪ್ರತಿನಿಧಿಗಳು, 4 - 5 ವರ್ಷಗಳ ಹಿಂದೆಯೇ ಅತ್ಯಧಿಕ ಬಹುಮತದಿಂದ ಚುನಾಯಿತರಾದವರು ಸರ್ಕಾರ ಕೈಗೊಂಡ ಕ್ರಮವನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಯನಂತರ ಸಮರ್ಥನೆ ಮಾಡಿದ್ದಾರೆ. ಎರಡು ಬಾರಿ ಪಾರ್ಲಿಮೆಂಟ್ ಸೇರಿ ರಾಜ್ಯಗಳ ರಾಷ್ಟ್ರದ ಅನೇಕ ಸಮಸ್ಯೆಗಳ ನಿವಾರಣೆಗೆ ಅಗತ್ಯವಾದಂತಹ ಕಾನೂನುಗಳನ್ನು ಮಾಡಿದ್ದಾರೆ, ಇವತ್ತೂ ಮಾಡುತ್ತಿದ್ದಾರೆ. ಪಾರ್ಲಿಮೆಂಟ್ ವಿಸರ್ಜನೆ ಆಗಿಲ್ಲಿ, ರಾಜ್ಯಾಂಗ ಶಾಸನ ರದ್ದುಮಾಡಿಲ್ಲ. ಕಲವು ಜನರು ತಪ್ಪು ನಡೆವಳಿಕೆಯಿಂದ, ತಪ್ಪು ಮಾರ್ಗದರ್ಶನದಿಂದ ದೇಶದಲ್ಲಿ ಉದ್ಭವಿಸಿದಂತಹ ವಿಷಮ ಪರಿಸ್ಥಿತಿಯನ್ನು ತಹಬಂದಿಗೆ ತಂದು ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡುವ ಉದ್ದೇಶ ಇತ್ತು.

ಶ್ರೀ ಕೆ. ಹೆಚ್. ಹನುಮೇಗೌಡ.--ಗಂಭೀರವಾಗಿದ್ದವರನ್ನೆಲ್ಲಾ ಹಿಡಿದು ಕೊಂಡು ಹೋಗಿದ್ದಾರೆ ಏಕೆ ?

ಶ್ರೀ ಕೆ. ಪುಟ್ಟಸ್ವಾಮಿ.--ಒಂದು ಗಾದೆ ಇದೆ, ಬೆಳ್ಳಗಿರುವುದೆಲ್ಲಾ ಹಾಲಲ್ಲ. ಒಳಗಡೆ ಏನೇನೋ ಮಾಡಿರುತ್ತಾರೆ, ನಮಗೆ ನಿಮಗೆ ಏನು ಗೊತ್ತಿರುತ್ತೆ ? ವಿರೋಧ ಪಕ್ಷದ ಕೆಲವು ಜನ ತಾವಾಗಿಯೇ ಉದ್ಭವ ಮಾಡಿದ ಇಂಥ ಪರಿಸ್ಥಿತಿಗೆ ತುರ್ತು ಪರಿಸ್ಥಿತಿ ಬಂತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪತ್ರಿಕಾ ಸ್ವಾತಂತ್ರ್ಯ ಕಿತ್ತುಕೊಂಡಿದ್ದೀರಲ್ಲಾ ಇದು ಪ್ರಜಾಪ್ರಭುತ್ವವೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ದೇಶದಲ್ಲಿ ಎಷ್ಟು ಸತ್‌ಪರಿಣಾಮವಾಗಿದೆ ಸ್ವಲ್ಪ ಆಲೋಚನೆ ಮಾಡಿ, ತುರ್ತುಪರಿಸ್ಥಿತಿ ಬಹರುವುದಕ್ಕಿಂತ ಮುಂಚೆ ದೇಶದಲ್ಲಿ ಏನು ಪರಿಸ್ಥಿತಿ ಇತ್ತು? ಈಗ ಎಂತಹ ಪರಿಸ್ಥಿತಿ ಇದೆ ? ಇಂದಿನ ವಿದ್ಯಾರ್ಥಿಗಳೇ ಮುಂದಿನ ಪ್ರಜೆಗಳು. ಯಾವಾಗಲೂ ನಾವು ಈ ಪೀಠಗಳನ್ನು ಅಲಂಕರಿಸುವುದಕ್ಕೆ ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಓದತಕ್ಕ ನಮ್ಮ ಮಕ್ಕಳು ಮುಂದೆ ಇಲ್ಲಿಗೆ ಬರುವವರು ಇದ್ದಾರೆ, ಅವರಿಗೆ ಸರಿಯಾದ ವಿದ್ಯೆ ದೊರಕುವಂತೆ ಮಾಡ ಬೇಕಾದುದು ನಮ್ಮ ಕರ್ತವ್ಯವಲ್ಲವೇ ? ಯಾರಿಗೆ ತಾನೇ ಇದರಲ್ಲಿ ಭಿನ್ನಾಭಿಪ್ರಾಯ ಇದೆ. ? ತುರ್ತು ಪರಿಸ್ಥಿತಿ ಘೋಷಣೆ ಆಗುವುದಕ್ಕೆ ಮುಂಚೆ ಎಷ್ಟು ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯೆ ಕಲಿಸತಕ್ಕಂಥಾ ವಾತಾವರಣ ಇತ್ತು ? ಬಹುಶಃ ಅದೇ ಪರಿಸ್ಥಿತಿ ಮುಂದುವರಿದಿದ್ದರೆ, ಇಷ್ಟು ಹೊತ್ತಿಗೆ ಪ್ರಶಾಂತವಾದ ಕರ್ನಾಟಕ ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳನ್ನು ಮುಚ್ಚಬೇಕಾಗಿತ್ತು. ಸಣ್ಣ ಸಣ್ಣ ಕಾರಣಗಳಿಗಾಗಿ ವಿಶ್ವವಿದ್ಯಾನಿಲಯದ ಪರಿಸ್ಥಿತಿಯನ್ನು ಕಲಕಿ, ನೆಮ್ಮದಿಗೆ ಬಂಗ ಉಂಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಇಷ್ಟೆಲ್ಲಾ ಎಷ್ಟೋ ಕಡೆ ನಡೆದು ಶಿಕ್ಷಕರೂ ಕೂಡ ಶಾಮೀಲಾಗಿದ್ದರು. ಈ ರೀತಿ ಪರಿಸ್ಥಿತಿ ಉದ್ಭವಿಸಿದರೆ ಯಾವ ರಾಷ್ಟ್ರತಾನೇ ಉಳಿಯುತ್ತದೆ ? ಯಾವ ರಾಷ್ಟ್ರತಾನೇ ಅಭಿವೃದ್ಧಿಗೆ ಬರುತ್ತದೆ ? ವಿಶ್ವವಿದ್ಯಾನಿಲಯಗಳನ್ನು ಇಟ್ಟುಕೊಂಡಿರತಕ್ಕ ನಮ್ಮ ದೇಶದಲ್ಲಿ ಇಂಥ ಪರಿಸ್ಥಿತಿ ಬಂದರೆ ಹೇಗೆ ತಾವೇ ಹೇಳಿ ? ತುರ್ತು ಪರಿಸ್ಥಿತಿ ಘೋಷಣೆ ಬಂದದ್ದು ಈ ಒಂದು ಕಾರಣಕ್ಕಾಗಿಯೇ, ಈ ಪರಿಸ್ಥಿತಿ ಇನ್ನೂ ಇರಲ್ಲಿ ಎಂದು ಹೇಳುತ್ತೇನೆ. ರಾಜಕೀಯ ಆಕ್ರೋಶಕ್ಕೆ ಒಳಗಾಗಿ ನಾನು ಹೇಳುತ್ತಿಲ್ಲ, ಯಾವ ಒಂದು ಪೂರ್ವ ಪೀಡಿತ ಗ್ರಹಕ್ಕೂ ಒಳಗಾಗಿ ಹೇಳುತ್ತಿಲ್ಲ. ಈ ದೇಶದ ಒಬ್ಬ ಪ್ರಜೆಯಾಗಿ ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ಇವತ್ತು ನಾನು ನೋಡುತ್ತಿದ್ದೇನೆ, ಈ ಒಂದು ತುರ್ತು ಪರಿಸ್ಥಿತಿಯಿಂದ ಅಗಾಧವಾದ ಪರಿಣಾಮ ಮಾಡಿದೆ.

ಈಗ ಅಷ್ಟೇ ಅಲ್ಲ. ಈಗ ನಾವು ಚರ್ಚೆ ಮಾಡತಕ್ಕಂಥಾ ವೇಳೆಯಲ್ಲಿ ನಮ್ಮ ರಾಜ್ಯದಲ್ಲಿ ಉತ್ಪನ್ನ ಎಷ್ಟು ಹೆಚ್ಚಿಸಿದ್ದೇವೆ, ಕಂದಾಯ ಎಷ್ಟು ಹೆಚ್ಚಿಸಿದ್ದೇವೆ, ನಮ್ಮ ಸ್ಟೇಟ್ ಪರ್ ಕ್ಯಾಪಿಟಾ ಇನ್‌ಕಂ ತಲಾ ಒಂದಕ್ಕೆ ಎಷ್ಟು ಉತ್ಪನ್ನವಾಗಿದೆ ಎಂಬ ವಿಚಾರದ ಬಗ್ಗೆ ನಾನು ಮಾತನಾಡುವಾಗ ತಾವು ಇಷ್ಟೇನೋ, ಇಷ್ಟೇನೋ ಎಂದು ಹೇಳುತ್ತಿದ್ದುದು, ೧-೨-೩-೪ ಪರ್ಸೆಂಟ್ ಹೆಚ್ಚಾಗಿದೆ ಎಂದು ಹೇಳುತ್ತಿದ್ದುದು. ಇನ್ನು ಕೆಲವರು ಬಹಳ ಹೊಗಳಿಕೆಯಿಂದ ಇದನ್ನು ಹೇಳುತ್ತಿದ್ದಾರೆ ಅಂತ ಹೇಳುತ್ತಿದ್ದದ್ದು, ಕೇಳಿ ಬಂತು. ನಮ್ಮ ಹೊಲಗಳಲ್ಲಿ ಉತ್ಪನ್ನ ಹೆಚ್ಚಿಸುವುದಕ್ಕೆ ಬೇರೆ ಮಾರ್ಗವೇ ಇಲ್ಲ. ಉಳಲೇ ಬೇಕು, ಬೆಳೆದು ತಿನ್ನಲೇ ಬೇಕು. ತನಗೆ ಯೋಗ್ಯತೆ ಇದ್ದಷ್ಟು ತಾನು ಕೆಲಸ ಮಾಡಲೇಬೇಕು. ಆದರೆ ಕಾರ್ಖಾನೆಗಳ ವಿಚಾರ ತೆಗೆದುಕೊಂಡರೆ, ಈ ವಿಷಯದಲ್ಲಿ ಹೇಳುವಾಗ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರನ್ನು ಗಣನೆಗೆ ತೆಗೆದುಕೊಳ್ಳದೇ ಇರುವುದಕ್ಕಾಗುವುದಿಲ್ಲ. ಕಾರ್ಮಿಕರಿಗೆ ಕೊಡಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ಸರ್ಕಾರ ಯಾವತ್ತೂ ಕೂಡ ಹಿಂಜರಿಯಬಾರದು. ನಾನೂ ಕೂಡ ಕಾರ್ಮಿಕರ ವಿಚಾರದಲ್ಲಿ ಬಹಳ ಆಸಕ್ತಿ ಹೊಂದಿರುವನು. ಅವರಿಗೆ ಲಭ್ಯವಾಗುವುದು ಯಾವುದಾದರೂ ಇದ್ದರೆ ಅದು ಆಗಲೇ ಬೇಕು. ಈ ತುರ್ತು ಪರಸ್ಥಿತಿ ಬರುವುದಕ್ಕೆ ಮುನ್ನ ದೇಶದಲ್ಲಿ ಇದ್ದುದು ಏನೆಂದರೆ, ಬೆಳಿಗ್ಗೆ ಇದ್ದರೆ ಪತ್ರಿಕೆಗಳಲ್ಲಿ ನೋಡುತ್ತಿದ್ದುದು ಆ ಕಾರ್ಖಾನೆಯಲ್ಲಿ ಮುಷ್ಕರ. ಈ ಕಾರ್ಖಾನೆಯಲ್ಲಿ ಮುಷ್ಕರ, ಆ ಕಾರ್ಖಾನೆಯಲ್ಲಿ ಲಾಕ್ ಔಟ್, ಈ ಕಾರ್ಖಾನೆಯಲ್ಲಿ ಲಾಕ್ ಔಟ್ ಅಂತ ಬರುತ್ತಿದ್ದುದನ್ನು ನೋಡುತ್ತಾ ಇದ್ದೆವು. ಅಲ್ಲದೆ ಈ ಕಾರ್ಖಾನೆಗಳಲ್ಲಿ ಇನ್‌ಸ್ಟಾಲ್ಡ್ ಕೆಪಾಸಿಟಿ ಎಷ್ಟು ಇತ್ತೋ ಅದರಲ್ಲಿ ಕೇವಲ 50 ಭಾಗಕ್ಕಿಂತಲೂ ಕಡಿಮೆ ಉತ್ಪನ್ನವಾಗುತ್ತಿತ್ತು. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಕಾರ್ಖಾನೆಗಳು ಏನು ಇವೆ ಅವು ಫಾರಿನ ಎಕ್ಸ್‌ಛೇಂಜ್‌ನಿಂದ ಹೊರಗಡೆ ದೇಶದಿಂದ ಯಂತ್ರಗಳನ್ನು ತರಿಸಿಕೊಂಡು ಕಾರ್ಖಾನೆ ಸ್ಥಾಪನೆ ಮಾಡಿ ಕಾರ್ಮಿಕರನ್ನು ನೇಮಕ ಮಾಡಿಕೊಂಡು ನಂತರ ಅವರು ಮಾಡುತ್ತಿದ್ದುದು ಏನು ಬೆಳಗಾದರೆ ಮುಷ್ಕರ, ಲಾಕ್ ಔಟ್. ಇದರಿಂದ ಯಾರಿಗೂ ನೆಮ್ಮದಿ ಇರುತ್ತಿರಲಿಲ್ಲ.

4-30 P. M.

ಒಬ್ಬ ಸದಸ್ಯರು. — ತುರ್ತು ಪರಿಸ್ಥಿತಿ ಬರುವುದಕ್ಕೆ ಕಾರಣ ಏನು ?

ಶ್ರೀ ಕೆ. ಪುಟ್ಟಸ್ವಾಮಿ.— ತುರ್ತುಪರಿಸ್ಥಿತಿ ಬರುವುದಕ್ಕೆ ಕಾರಣ ಈ ಪ್ರಜಾಪ್ರಭುತ್ವಕ್ಕೆ ಕೊಡಲಿಪೆಟ್ಟು ಬೀಳುತಕ್ಕಂಥ ವೇಳೆಯಲ್ಲಿ ಪ್ರಜಾಪ್ರಭುತ್ವ ಎಲ್ಲಿ ಅಳಿಸಿಹೋಗುತ್ತದೊ ಅನ್ನುವ ಸಂದರ್ಭ ಬಂದಾಗ ಈ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಹೋಗುವುದಕ್ಕೆ ಈ ಒಂದು ತುರ್ತು ಪರಿಸ್ಥಿತಿ ಬಂದದ್ದು.

ಶ್ರೀ ಎಂ. ಎಸ್. ಕೃಷ್ಣನ್.— ಈಗತಾನೇ ತಾವು ಕಾರ್ಮಿಕರ ಬಗ್ಗೆ ಒಂದು ವಿಷಯ ಹೇಳಿದಿರಿ. ತಾವು ಕೂಡ ಹಿಂದೆ ಮಂತ್ರಿಗಳಾಗಿದ್ದಿರಿ. ತಮಗೆಲ್ಲಾ ಗೊತ್ತಿದೆ. ಹಿಂದೆ ಕಾಂಗ್ರೆಸ್ ಅವಿಭಾಜ್ಯವಾಗಿದ್ದಾಗ ಕಾರ್ಮಿಕರ ಬಗ್ಗೆ ಏನು ದೃಷ್ಟಿಕೋನ ಇತ್ತು ? ಮತ್ತು ಸರ್ಕಾರದ ನೀತಿ ಏನು ಇತ್ತು ? ಕಾರ್ಮಿಕರು ತಮಗೆ ಬರಬೇಕಾದಂಥ ಸೌಲಭ್ಯಗಳನ್ನು ಕೇಳಿದರೆ ಪೋಲೀಸರಿಂದ ಲಾಠಿ ಛಾರ್ಜು ನಡೆಯುತ್ತಿತ್ತೇ ಇಲ್ಲವೇ? ತಾವು ಮಂತ್ರಿಗಳಾಗಿದಾಗ ಈ ಬಗ್ಗೆ ಏನು ನಡೆಯುತಿತ್ತು? ನಂತರ ಎರಡು ಕಾಂಗ್ರೆಸ್ ಆದಮೇಲೆ ಸರ್ಕಾರದ ದೃಷ್ಟಿಕೋನ ಬದಲಾವಣೆ ಆಗಲಿಲ್ಲವೇ ? ಕಾರ್ಮಿಕರ ಸಹಕಾರ ಬೇಕು ಅಂತ ಅಲ್ಲವೇ ಈ ಒಂದು ಪರಿಸ್ಥಿತಿ ಬೇರೆ ಆಗಿರುವುದು. ಇದಕ್ಕೆ ತಮ್ಮ ಉತ್ತರವೇನು ?

ಶ್ರೀ ಕೆ. ಪುಟ್ಟಸ್ವಾಮಿ.— ಶ್ರೀ ಮಾನ್ ಕೃಷ್ಣನ್‌ರವರು ಇದಕ್ಕಿಂತ ಹೆಚ್ಚು ಅಪೇಕ್ಷಿಸುವುದಕ್ಕಾಗುವುದಿಲ್ಲ. ಹಿಂದೆ ಸರ್ಕಾರವೂ ಕೂಡ ಕಾರ್ಮಿಕರ ವಿಚಾರದಲ್ಲಿ ಅವರನ್ನು ಉದ್ಧಾರ ಮಾಡಬೇಕು ಅಂತ ಏನು ಒಂದು ನೀತಿ ಇತ್ತೋ ಅದನ್ನು ಅನುಸರಿಸಿಕೊಂಡು ಬಂದಿದೆ. ಆ ಬಗ್ಗೆ ನಾನು ಸಾಕಷ್ಟು ಮಾಹಿತಿ ಕೊಟ್ಟು ಹೇಳಬಲ್ಲೆ, ತುರ್ತು ಪರಿಸ್ಥಿತಿ ಬರುವುದಕ್ಕೆ ಮುನ್ನ ಕಾರ್ಖಾನೆಗಳಲ್ಲಿ ಉತ್ಪಾದನೆ ಹೇಗೆ ಇತ್ತು ? ಈಗ ಹೇಗಿದೆ ಅನ್ನುವುದನ್ನು ನೋಡುವುದಾದರೆ ಈಗ ಇರುವಷ್ಟು ಪ್ರೊಡಕ್ಷನ್ ಹಿಂದೆ ಇರಲಿಲ್ಲ. ಅಷ್ಟೇ ಅಲ್ಲ. ಈವೊತ್ತು ಎಲ್ಲೂ ಕೂಡ ಕಾರ್ಮಿಕ ಮುಷ್ಕರವಾಗಲಿ, ಲಾಕ್ ಔಟ್ ಆಗಲೀ ಹೆಚ್ಚಾಗಿ ಕೇಳುತ್ತಾ ಇಲ್ಲ. ನಾನು ಒಂದು ವಿಚಾರ ಮಾತ್ರ ಹೇಳುತ್ತೇನೆ. ಈವೊತ್ತು ಕಾರ್ಮಿಕರ ವರ್ಗದಲ್ಲಿ ಶಾಂತಿ ಇದೆ. ನೆಮ್ಮದಿ ಇದೆ ಮತ್ತು ಕಾರ್ಖಾನೆಗಳಲ್ಲಿ ಉತ್ಪನ್ನ ಹೆಚ್ಚಿದೆ. ಮತ್ತು ಸರ್ಕಾರದವರು ಅವರ ಯೋಗಕ್ಷೇಮದ ಕಡೆಗೂ ಅಲಕ್ಷ್ಯ ತಳೆಯಬಾರದು. ಸದಾ ಎಚ್ಚರಿಕೆ ವಹಿಸಬೇಕು. ಎಲ್ಲಾದರೂ ಅವರ ಶೋಷಣೆ ಆಗುತ್ತದೆಯೇ ಅನ್ನುವುದನ್ನು ನೋಡಬೇಕು. ಅವರಿಂದ ಫಿರ್ಯಾದು ಬಂದರೆ ನೋಡಬೇಕು ಅಂತ ಇರಬಾರದು. ಎಲ್ಲಾದರೂ ಉಗ್ರ ಪ್ರತಿಭಟನೆ ಆದಾಗ ಸಾರ್ವಜನಿಕರ ನೆಮ್ಮದಿಗೆ ಭಂಗ ಬಂದಾಗ ಆಗ ಹೋಗಬೇಕು ಅಂತ ಇರಬಾರದು. ತಮ್ಮ ಒಂದು ಸಿಬ್ಬಂದಿಯಲ್ಲಿ ಸರಿಯಾದ ಒಂದು ಟ್ರೈನಿಂಗ್ ಮಾಡಬೇಕಾದ್ದು ಇದೆ. ಓರಿಯೆಂಟೇಷನ್ ಟ್ರೈನಿಂಗ್ ಸಿಬ್ಬಂದಿಗೆ ಕೊಡಬೇಕಾದ್ದು ಅವಶ್ಯಕ. ಅಷ್ಟೇ ಅಲ್ಲದೆ ಸಿಂಬ್ಬದಿ ವರ್ಗದಲ್ಲೂ ಕೂಡ ಅವರ ಒಂದು ಕರ್ತವ್ಯ ಏನು ಇದೆ ಅನ್ನುವುದನ್ನು ಮಾಡಬೇಕು. ಈವೊತ್ತು ಕಾರ್ಮಿಕ ವರ್ಗದಲ್ಲಿ ನೆಮ್ಮದಿ ಇದ್ದರೂ ಕೂಡ ಅವರ ಶೋಷಣೆ ಆಗದೇಇರುವಂಥಾ ರೀತಿಯಲ್ಲಿ ಆಗುತ್ತಿದೆಯೇ ಇಲ್ಲವೇ ಅವರ ಹಕ್ಕು-ಭಾದ್ಯತೆಗಳು ಸರಿಯಾಗಿ ಮುಟ್ಟಿದೆಯೇ ಇಲ್ಲವೇ. ಅವರು ಒಳ್ಳೆಯ ನಾಗರೀಕರ ಜೀವನ ನಡೆಸುವುದಕ್ಕೆ ಸರಿಯಾದ ಸೌಲಭ್ಯಗಳು ದೊರೆಯುತ್ತಾ ಇದೆಯೇ ಇಲ್ಲವೇ ಮತ್ತು ಕೈಗಾರಿಕೆಗಳು ಲಾಭದಲ್ಲಿ ನಡೆಯುತಾ ಇದ್ದರೆ ಅವರಿಗೆ ಅದರಲ್ಲಿ ನ್ಯಾಯವಾದ ಪಾಲು ದೊರಕುತ್ತಾ ಇದೆಯೇ ? ಇವೆಲ್ಲವನ್ನೂ ಸರಿಯಾಗಿ ತಿಳಿದು ಖಚಿತಪಡಿಸಿಕೊಳ್ಳಬೇಕು ಅಥವಾ ಅವರಿಗೆ ನ್ಯಾಯಸಮ್ಮತವಾದ ರೀತಿಯಲ್ಲಿ ತಕ್ಕ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಇಲ್ಲದೇ ಹೋದರೆ Lull before the storm ಆಗುತ್ತದೆ. ಈವೊತ್ತು ಅವರಲ್ಲಿ ಶಾಂತಿ ಸರೋವರ ಇದೆ ಎಂದು ಹೇಳುವುದಕ್ಕಾಗುವುದಿಲ್ಲ ಒಳಗೊಳಗೆ ದೊಡ್ಡ ದೊಡ್ಡ ಮರ್ಕಟ ಇರಬಹುದು ಆದುದರಿಂದ ಅಂಥಾದ್ದಕ್ಕೆ ಅವಕಾಶ ಕೊಡಬೇಡಿ ಎಂದು ನಾನು ಈವೊತ್ತು ಎಚ್ಚರಿಕೆ ಹೇಳುತ್ತಿದ್ದೇನೆ. ತುರ್ತು ಪರಿಸ್ಥಿತಿಯಿಂದ ನಮ್ಮ ದೇಶಕ್ಕೆ ನಷ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲವಾಗಿದೆ ಎಂದು ಹೇಳುತ್ತೇನೆ. ಸ್ವಾಮಿ, ನಾವು ಈ ಬಗ್ಗೆ ಸಾಧನೆ ಮಾಡಬೇಕಾದ್ದು ಏನು ಇತ್ತು ಅದನ್ನು ಈ ಸರ್ಕಾರ ಕೆಲವು ತಿಂಗಳಿನಿಂದ ಈಚೆಗೆ ಅವರು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮದಿಂದ ಅಷ್ಟು ಸುಲಭವಾಗಿ ಜಾರಿಗೆ ತರುವುದಕ್ಕಾಗುವುದಿಲ್ಲ ಅಂತ ತಿಳಿದುಕೊಳ್ಳಬೇಡಿ. ಸಾಧ್ಯ ಇದೆ.

ಒಂದು ನಿದರ್ಶನ ಹೇಳುವುದಾದರೆ ಒಮ್ಮಿಂದ ಒಮ್ಮೆಲೇ ಸರ್ಕಾರ ಒಂದು ತುರ್ತು ಶಾಸನ ಮಾಡಿದ್ದು ಪತ್ರಿಕೆಗಳಲ್ಲಿ ಬಂದದ್ದು ತಾವು ಓದಿರಬಹುದು. ಅದು ಯಾವುದೆಂದರೆ 2400 ರೂಪಾಯಿ ಕಡಿಮೆ ಆ ದಾಯ ಬರತಕ್ಕಂಥ ಬಡವರ್ಗದ ಜನರಿಗೆಲ್ಲಾ ಅಂದರೆ 5 ಎಕರೆ ಭೂಮಿ ಇದ್ದವರಿಗೆ ಅದರಲ್ಲಿ ಯಾರು ಯಾರು ಸೇರುತ್ತಾರೋ ಅಂದರೆ ಆತನಿಗೆ $1\frac{1}{4}$ ಎಕರೆ ಖುಷ್ಕಿ ಭೂಮಿ, $1\frac{1}{4}$ ಎಕರೆ ಗದ್ದೆ ಅಥವಾ $2\frac{1}{2}$ ಎಕರೆ ರೈನ್‌ಫೆಡ್ ರ್ಯಾಂಡ್ ಇದ್ದವರು, ಯಾರು ಯಾರು ಸಾಲ ತೆಗೆದುಕೊಂಡಿರುತ್ತಾರೋ ಅವರು ಕೊಡಬೇಕಾದ್ದಿಲ್ಲ ಅಂತ ಒಂದು ತುರ್ತು ಶಾಸನ ಬಂತು.

ಶ್ರೀ ಕೆ. ಹೆಚ್. ಹನುಮೇಗೌಡ.—ಬಡ ವರ್ಗದವರು 2400 ರೂಪಾಯಿ ಕಡಿಮೆ ಆದಾಯ ಇರತಕ್ಕಂಥಾವರ ಸಾಲವನ್ನು ವಜಾ ಮಾಡಿದ್ದೇವೆ ಅಂತ ಹೇಳುತ್ತೀರಿ, ? ಅವರು ಬ್ಯಾಂಕ್ ನಲ್ಲಾಗಲಿ ಸೊಸೈಟಿಗಳಲ್ಲಾಗಲಿ ಸಾಲ ತೆಗೆದುಕೊಂಡಿದ್ದರೆ ಅವರು ಒಂದಕ್ಕೆ 4 ರಷ್ಟು ಬಡ್ಡಿ ಹಾಕಿ, ಪೀನಲ್ ಇನ್‌ಟರೆಸ್ಟ್ ಆ ಬಡ್ಡಿ ಈ ಬಡ್ಡಿ ಅಂತ ಹಾಕಿ 100ಕ್ಕೆ 35 ಪರ್ಸೆಂಟ್ ಅಷ್ಟು ಬಡ್ಡಿಯನ್ನು ಹಾಕಿ ವಸೂಲ್ಮಾಡಿದರೆ ಇದರಿಂದ ಇವರ ಉದ್ಧಾರವಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಬೇರೆಯವರ ಹತ್ತಿರ ಸಾಲ ಮಾಡಿದರೆ ಲೆಕ್ಕದಲ್ಲಿ 12 ಪರ್ಸೆಂಟ್ ಬಡ್ಡಿ ತೋರಿಸಿವರೆ ವಸೂಲ್ಮಾಡುವುದು 24 ಪರ್ಸೆಂಟ್ ಬಡ್ಡಿ. ಇದುವರೆಗೂ ಇಂಥಾ ಒಂದು ಶೋಷಣೆ ಅವರಿಂದ ಆಗುತ್ತಿತ್ತು. ಈ ಒಂದು ತುರ್ತು ಪರಿಸ್ಥಿತಿಯಿಂದ ಅನೇಕ ಜನರಿಗೆ ಅನುಕೂಲವಾಗಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಒಂದು ತುರ್ತು ಪರಿಸ್ಥಿತಿ ಬಂದದ್ದು ತಿರುಪತಿ ತಿಮ್ಮಪ್ಪನ ಕೃಪೆಯಿಂದ ಬಂದಿರಬಹುದು ಎಂದು ನನಗೆ ಅನಿಸುತ್ತದೆ. ಬಹುಶಃ ತಿರುಪತಿ ತಿಮ್ಮಪ್ಪನು ಕೆಲವರಿಗೆ ರಾಷ್ಟ್ರದಲ್ಲಿ ಅಲ್ಲೋಲಕಲ್ಲೋಲ ಪರಿಸ್ಥಿತಿ ಉಂಟಾಗುವಂತೆ ಮಾಡಿ, ಆಗ ಸರ್ಕಾರ ದವರು ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡುತ್ತಾರೆಂದು ಹೇಳಿರಬಹುದೆಂದು ನನಗೆ ಕಾಣುತ್ತದೆ. ಸರ್ಕಾರದವರು ದುರ್ಬಲವರ್ಗದವರ ಋಣಬಾರವನ್ನು ಹೋಗಲಾಡಿಸಿದ್ದಾರೆ. ಇದಕ್ಕೆ ಮೊದಲು ಸಾಲ ಕೊಟ್ಟವರು ವಾಪಸ್ ಕೊಡದಿದ್ದರೆ ಅಂತಹವರನ್ನು ಕಂಬಕ್ಕೆ ಕಟ್ಟಿ ಹೊಡೆದು ವಸೂಲಿ ಮಾಡುತ್ತಿದ್ದರು ; ಆದರೆ ಈಗ ಪೋಲೀಸಿನವರಿಗೆ ಹೆದರಿಕೊಂಡು ಕೊಟ್ಟ ಸಾಲ ವಸೂಲಿ ಮಾಡದೆ ಸುಮ್ಮನಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿ ಬಡವರಿಗೂ ಮತ್ತು ಶ್ರೀಮಂತರಿಗೂ ಒಂದು ರೀತಿಯ ಮಧುರ ಭಾಂದವ್ಯವಿತ್ತು, ಬಡವರು ಕಷ್ಟ ಬಂದಾಗ ಅಥವಾ ತಮ್ಮ ಹೆಂಗಸರನ್ನು ಆಸ್ಪತ್ರೆಗೆ ಸೇರಿಸುವ ಸಂದರ್ಭ ಬಂದಾಗ ಶ್ರೀಮಂತರ ಹತ್ತಿರ ಹೋಗಿ ನೂರು ರೂಪಾಯಿಗಳನ್ನು ಕೇಳಿದರೆ ಅವರು ಕೊಡುತ್ತಿದ್ದರು. ಆದರೆ ಈ ಕಾನೂನು ಬಂದಿರುವುದರಿಂದ ಆ ಒಂದು ಸಹಾಯ ಈಗ ಸಿಗುತ್ತಿಲ್ಲ, ಈ ರೀತಿ ಮಾಡಿದ್ದು ಸರಿಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಧರ್ಮ ಸಾಮ್ರಾಜ್ಯದಲ್ಲಿ ಯಾರಿಗೂ ತೊಂದರೆ ಬರುವುದಿಲ್ಲ, ಬಡವರಾದವರು ಯಾರು ಸರಿಯಾಗಿ ನಡೆದುಕೊಳ್ಳುತ್ತಾರೋ ಅಂತಹವರ ಹತ್ತಿರ ಶ್ರೀಮಂತರೂ ಸಹ ನ್ಯಾಯವಾಗಿ ನಡೆದುಕೊಳ್ಳುತ್ತಾರೆ. ಆದರೆ ಎಲ್ಲರೂ ಆ ರೀತಿ ಮಾಡುತ್ತಾರೆಂದು ತಾವು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ,

ಇನ್ನು ಜೀತ ಪದ್ಧತಿಯನ್ನು ಸಹ ನಿರ್ಮೂಲಗೊಳಿಸಲಾಗಿದೆ. ಈ ಪದ್ಧತಿ ಹೋಗಬೇಕು ಎಂಬ ವಿಚಾರದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ, ಈ ಸದನದ 216 ಜನ ಸದಸ್ಯರೂ ಸಹ ಇದು ಹೋಗಬೇಕೆಂದು ಹೇಳುತ್ತಾರೆ. ಸರ್ಕಾರದವರು ಈ ಜೀತಪದ್ಧತಿಯನ್ನು ನಿರ್ಮೂಲ ಗೊಳಿಸಿದ್ದೇ ಅಲ್ಲದೆ, ಜೀತಕ್ಕೆ ಒಳಗಾಗಿದ್ದವರು ತೆಗೆದುಕೊಂಡಿದ್ದ ಸಾಲವನ್ನು ವಾಪಸ್ ಕೊಡದಂತೆ ರದ್ದು ಮಾಡಿದರು. ಇಂದು ತುರ್ತು ಪರಿಸ್ಥಿತಿ ಜಾರಿಯಲ್ಲಿ ಇಲ್ಲದಿದ್ದರೆ ಈ ಶಾಸನ ವನ್ನು ಯಶಸ್ವಿಯಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ, ಈ ಶಾಸನ ಜಾರಿಗೆ ಬಂದ ದಿನವೇ ಯಾರ ಯಾರ ಮನೆಯಲ್ಲಿ ಇಂತಹ ಆಳುಗಳು ಇದ್ದರೋ ಅವರನ್ನೆಲ್ಲಾ ಆ ಮನೆಯ ಯಜಮಾನರು ಕರೆದು, ಮಹಾರಾಯರೇ ನೀವು ಹೊರಟು ಹೋಗಿ, ನೀವು ತೆಗೆದುಕೊಂಡ ಸಾಲ ವನ್ನು ವಾಪಸ್ ಕೊಡಬೇಕಾಗಿಲ್ಲವೆಂದು ಹೇಳಿದ್ದಾರೆ. ಒಬ್ಬರು ನನ್ನ ಹತ್ತಿರ ಬಂದು ಹೇಳಿದರು,

ಏನೆಂದರೆ, ನಮ್ಮ ಮನೆಯಲ್ಲಿ 6 ಜನರಿದ್ದರು, ಅವರನ್ನೆಲ್ಲಾ ಹೊರಟು ಹೋಗಿ ಎಂದು ಹೇಳಿದ್ದಕ್ಕೆ 4 ಜನರು ಮಾತ್ರ ಹೊರಟು ಹೋದರು, ಉಳಿದ ಇಬ್ಬರು ಏನು ಮಾಡಿದರೂ ಹೋಗುವುದಿಲ್ಲ ಎಂದು, ಕೆಲವು ಕಡೆಗಳಲ್ಲಿ ಅಧಿಕಾರಿಗಳು ಹೋಗಿ ಅಂತಹವರನ್ನು ಜೀತ ಪದ್ಧತಿಯಿಂದ ಮುಕ್ತರನ್ನಾಗಿ ಮಾಡಿರಬಹುದು, ಅದು ಪತ್ರಿಕೆಗಳಲ್ಲಿ ಸಹ ಬರುತ್ತಿದೆ, ಆದರೆ ಅನೇಕ ಕಡೆಗಳಲ್ಲಿ ಅಂದರೆ ಶೇಕಡಾ 90 ಭಾಗದಷ್ಟು ಜನರೇ ಸ್ವಯಂ ಪ್ರೇರಿತರಾಗಿ ತಮ್ಮ ಮನೆಗಳಲ್ಲಿರುವ ಜೀತದಾಳುಗಳನ್ನು ಅವರ ಮನೆಗಳಿಗೆ ಕಳುಹಿಸಿಕೊಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ,—ತುರ್ತು ಪರಿಸ್ಥಿತಿ ಜಾರಿಗೆ ಬರುವುದಕ್ಕೆ ಮೊದಲು ಈ ರೀತಿಯ ಜೀತ ಪದ್ಧತಿಯಿಂದ ಜನರು ನರಳುತ್ತಿದ್ದಾರೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡ ಜನರು ಶೋಷಣೆಗೆ ಒಳಗಾಗಿದ್ದಾರೆಂಬುದು ತಮಗೆ ತಿಳಿದಿರಲಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾವು ಆಡಳಿತ ಪಕ್ಷದಲ್ಲಿದ್ದುಕೊಂಡು ಅದರ ಒಂದು ಜವಾಬ್ದಾರಿಯನ್ನು ನಿರ್ವಹಣೆ ಮಾಡಿದವರಲ್ಲ, ನಾವು ಯಾವುದೇ ಕೆಲಸಗಳನ್ನು ಮಾಡಬೇಕಾದರೂ ಸಹ ನಮ್ಮ ಒಂದು ಶಕ್ತಿ ಸಾಮಾರ್ಥ್ಯವನ್ನು ನೋಡಿಕೊಂಡು, ಅದಕ್ಕನುಗುಣವಾಗಿ ಮಾಡಬೇಕಾಗುತ್ತದೆ. ಕಾಯಿ ಬಲಿಯುವುದಕ್ಕೆ ಮುಂಚೆಯೇ ಕಿತ್ತರೆ ಅದು ಹಣ್ಣಾಗುವುದಿಲ್ಲ, ಅದು ಸಂಪೂರ್ಣವಾಗಿ ಬಲಿತಮೇಲೆ ಕಿತ್ತರೆ ಮಾತ್ರ ಹಣ್ಣಾಗುತ್ತದೆ. ಅಂದರೆ ಅದು ಬಲಿಯುವ ಕಾಲ ಸನ್ನಿಹಿತವಾಗುವವರೆಗೆ ನಾವು ಕಾಯಬೇಕಾಗುತ್ತದೆ. ನೀವು ಕಲ್ಪನೆ ಮಾಡಿಕೊಂಡಾಗಲೇ ಯಾವುದನ್ನೂ ಜಾರಿಗೆ ತರುವುದಕ್ಕಾಗುವುದಿಲ್ಲ, ನಾವು ಯಾವುದನ್ನೇ ಜಾರಿಗೆ ತರಬೇಕಾದರೂ ಸಹ, ದೇಶದಲ್ಲಿ ಮೊದಲು ಸರಿಯಾದಂಥ ಪರಿಸ್ಥಿತಿಯನ್ನು ಉಂಟು ಮಾಡಬೇಕಾಗುತ್ತದೆ. ಅಂತಹ ಒಂದು ಪರಿಸ್ಥಿತಿ ಈಗ ಉಂಟಾಗಿದೆ. ನಮ್ಮ ರಾಷ್ಟ್ರದ ನಾಯಕಿಯಾಗಿರುವ ಶ್ರೀಮತಿ ಇಂದಿರಾಗಾಂಧಿಯವರು ಹಾಕಿಕೊಂಡಿರುವ 20 ಅಂಶಗಳ ಕಾರ್ಯಕ್ರಮದಲ್ಲಿ ಇದೂ ಸಹ ಒಂದಾಗಿದೆ. ಇದು ಇಷ್ಟೊಂದು ಯಶಸ್ವಿಯಾಗಿ ಜಾರಿಗೆ ಬರುತ್ತಿರುವುದಕ್ಕೆ ಕಾರಣ ಈ ತುರ್ತುಶಾಸನ ಜಾರಿಯಲ್ಲಿರುವುದು.

ಇನ್ನು ಭೂಸುಧಾರಣೆ ಕಾನೂನು ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಬೇರೆ ರಾಜ್ಯಗಳಿಗಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದೇವೆ. ಇದರಿಂದ ಬಹುಜನರಿಗೆ ಭೂಮಿಯ ಒಡೆತನ ಲಭಿಸುತ್ತಿದೆ. ಗೇಣಿದಾರರಾಗಿದ್ದವರು, ಗುತ್ತಿಗೆದಾರರಾಗಿದ್ದವರು ಇಂದು ಖಾಯಂ ಜಮೀನುದಾರರಾಗುತ್ತಿದ್ದಾರೆ. ಜೊತೆಗೆ ಹೆಚ್ಚು ಭೂಮಿ ಹೊಂದಿರುವವರು ಸರ್ಕಾರಕ್ಕೆ ಬಿಟ್ಟುಕೊಡಬೇಕಾಗಿದೆ. ಈ ಭೂಮಿ ಬೇರೆಯವರಿಗೆ ಲಭ್ಯವಾಗುತ್ತದೆ. ಈಗ ಈ ಮನೆಯ ಸದಸ್ಯರು ಲ್ಯಾಂಡ್ ಟ್ರಿಬ್ಯೂನಲ್‌ಗಳಲ್ಲಿ ಸಹ ಸದಸ್ಯರಾಗಿದ್ದುಕೊಂಡು ತಮ್ಮ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಇದನ್ನು ಜಾರಿಗೆ ಕೊಡುವ ವಿಚಾರದಲ್ಲಿ ಮಧ್ಯೆಮಧ್ಯೆ ಏನಾದರೂ ಅಡ್ಡಿಅಂತಕಗಳು ಬಂದರೆ, ಅವುಗಳನ್ನು ನಿವಾರಣೆ ಮಾಡಲು ಸರ್ಕಾರದವರು ಕೂಡಲೇ ತುರ್ತು ಶಾಸನಗಳನ್ನು ಹೊರಡಿಸುವುದರ ಮೂಲಕ ಗೇಣಿದಾರರಿಗೆ ಅವರ ಹಕ್ಕು ಲಭ್ಯವಾಗುವಂತೆ ಮಾಡುತ್ತಿದ್ದಾರೆ. ಈ ಒಂದು ಕೆಲಸ ಬೇರೆ ರಾಜ್ಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ.

ಶ್ರೀ ಟಿ. ಎಂ. ಮಂಜುನಾಥ್.—ಕೆಲವು ಕಡೆಗಳಲ್ಲಿ ಅನ್ಯಾಯ ನಡೆದಿದೆ.

ಶ್ರೀ. ಕೆ. ಪುಟ್ಟಸ್ವಾಮಿ.—ಮಾನ್ಯ ಮಂಜುನಾಥ್ ಅವರು ಕೆಲವು ಕಡೆಗಳಲ್ಲಿ ಅನ್ಯಾಯ ನಡೆದಿದೆ ಎಂದು ಹೇಳಿದರು. ಎಲ್ಲ ಕಡೆಯೂ ನ್ಯಾಯ ಸಂಪೂರ್ಣವಾಗಿ ನಡೆದಿದೆ ಎಂದು ನಾನಾದರೂ ಸಹ ಹೇಳುವುದಿಲ್ಲ, ಈ ಒಂದು ಕಾರ್ಯಸಾಧನೆ ಮಾಡಲು ಸರ್ಕಾರ ಯಾವ ಒಂದು ಸಾಧನವನ್ನು ಇಟ್ಟಿದೆ, ಅವರಲ್ಲಿ ಕೆಲಸ ಮಾಡತಕ್ಕಂಥವರ ಪೈಕಿ ಕೆಲವರು ಸರಿಯಾಗಿ ಕೆಲಸ ಮಾಡದಿರಬಹುದು, ಆದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ, ಅಂತಹ ಕಡೆಗಳಲ್ಲಿ ಕರಿಕುರಿಗಳೇನಾದರೂ ಸೇರಿಕೊಂಡಿದ್ದರೆ, ಸಾರ್ವಜನಿಕ ಸೇವಕರಾದವರು, ರಾಜಕೀಯ ಪಟ್ಟಗಳಾದವರು, ಅಂತಹವರ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದರ ಮೂಲಕ ಬಯಲಿಗೆಳೆಯಬೇಕು, ಅವರು ಇಂತಹ ಕೆಲಸ ಮಾಡುತ್ತಿದ್ದಾರೆ, ಆ ರೀತಿ ಮಾಡದಂತೆ ತಡೆಗಟ್ಟಬೇಕು ಎಂಬುದಾಗಿ ಸರ್ಕಾರಕ್ಕೆ ತಿಳಿಸಬೇಕು. ಯಾರೋ ಒಬ್ಬ ಪೂಜಾರಿ ಸರಿಯಾಗಿ ಪೂಜೆ ಮಾಡುವು

ದಿಲ್ಲವೆಂಬ ಕಾರಣದಿಂದ ದೇವಸ್ಥಾನವನ್ನೇ ಕೆಡವುದಕ್ಕಾಗುವುದಿಲ್ಲ ಈ ಭೂಸುಧಾರಣೆಯ ವಿಚಾರ ಅನೇಕ ಸಲ ಈ ಸಭೆಯಲ್ಲಿ ಚರ್ಚೆಯಾಗಿರುವುದರಿಂದ ನಾನು ಅದರ ಬಗ್ಗೆ ಇನ್ನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

ನಮ್ಮ ದೇಶದಲ್ಲಿ ಯಾವ ರೀತಿ ಇದೆಯೆಂದರೆ ನಮಗೆ ಕೆಲವು ದಿನಸಗಳ ಹಿಂದೆ ಹಳ್ಳಿಯವರು (ಶ್ರೀರಂಗಪಟ್ಟಣ ತಾಲ್ಲೋಕಿನವರು) ನನ್ನ ಹತ್ತಿರ ಬಂದು ನಾನು ಒಂದು ಮನೆ ಕಟ್ಟಬೇಕು ನಾನು ಮೈಸೂರಿಗೆ ಬಂದರೆ ಅಲ್ಲಿ ಮನೆ ಕಟ್ಟಲಿಕ್ಕೆ ಜಾಗ ಸಿಕ್ಕಬಹುದು ಆದರೆ ನಮ್ಮ ಊರಿನಲ್ಲಿ ಒಂದು ಸಣ್ಣ ಜಾಗ ಸಿಕ್ಕುವುದಿಲ್ಲ, ಎಂದು ಹೇಳಿದರು. ಅದಕ್ಕೆ ಕಾರಣ ಇಲ್ಲದೆ ಇಲ್ಲ. ಊರಿನ ಪಕ್ಕದಲ್ಲಿ ಜಮೀನು ಸಾಮಾನ್ಯವಾಗಿ ಊರಿನ ಪ್ರತಿಷ್ಠಿತ ವ್ಯಕ್ತಿಗೆ ಸೇರಿರುತ್ತದೆ. ಆ ಜಮೀನನ್ನು ಬೇರೆಯವರಿಗೆ ಕೊಡಬೇಕಾದರೆ ಸರ್ಕಾರದವರು ಅಕ್ವಿಷನ್ ಪ್ರೊಸಿಡಿಂಗ್ಸ್ ಮಾಡಿ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಅಲ್ಲಿ ಯಾರಿಗೆ ಜಾಗ ಇರುವುದಿಲ್ಲ ಅವರಿಗೆ ಕೊಡಬೇಕಾದರೆ ಕನಿಷ್ಠ ಒಂದು ಅಥವಾ ಎರಡು ದಶಕಗಳಾದರೂ ಬೇಕಾಗುತ್ತದೆ. ಈಚೆಗೆ ಕಾನೂನು ತಿದ್ದುಪಡಿ ಆಯಿತು, 1972ರ ಚುನಾವಣೆ ಯಲ್ಲಿ ಜನರಿಗೆ ಒಂದು ಆಶ್ವಾಸನೆ ಕೊಟ್ಟು ಯಾರಿಗೆ ನಿವೇಶನ ಇಲ್ಲವೋ ಅವರಿಗೆ ನಿವೇಶನವನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದೆವು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ ಈಗ ಏನು ತಾವು ತಂದಿದ್ದೀರಿ ತುರ್ತು ಪರಿಸ್ಥಿತಿ ಅದರಲ್ಲಿ ಬಿ.ಡಿ.ಓ. ಅವರ ಪಾತ್ರ ಮುಖ್ಯವಾದದ್ದು. ಅವರನ್ನು ತಾವು ಕೇಳಬೇಕು ಅವರು ಹೇಳು ತ್ತಾರೆ ನಾವು ಯಾವುದೇ ಕೆಲಸಕ್ಕೆ ಹೋದರೂ ಮಂತ್ರಿಗಳೊಬ್ಬರು ನಮ್ಮ ಕೈ ಮತ್ತು ಜೋಬನ್ನು ನೋಡುತ್ತಾರೆಂದು ಹೇಳುತ್ತಾರೆ. ಇದು ತುರ್ತುಪರಿಸ್ಥಿತಿಯ ಧೋರಣೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ನೀವು ನಾವು ಹೇಳುವುದನ್ನು ಕೇಳುವುದಿಲ್ಲ, ಮಂತ್ರಿಗಳು ಹೇಳಿ ದ್ದನ್ನು ಕೇಳುವುದಿಲ್ಲ. ಬಿಡಿಓ. ಹೇಳಿದ್ದನ್ನು ಮಾತ್ರ ನಂಬುತ್ತೀರಿ ? ನಮ್ಮ ಮಾನ್ಯ ಅರ್ಥಿಕ ಸಚಿವರು ಹೇಳಿದಾರೆ ಸುಮಾರು 7 ಲಕ್ಷದ 64 ಸಾವಿರ ಸಂಸಾರಗಳಿಗೆ ನಿವೇಶನ ಇಲ್ಲ. ಇವನ್ನು 5 ರಿಂದ ಗುಣಿಸಿದರೆ ಸುಮಾರು 40 ಸಂಸಾರಗಳಿಗೆ ಮನೆಗಳಿಲ್ಲವೆಂದು ಗೊತ್ತಾಗುತ್ತದೆ. ಇದು ಯಾರೆಂದರೆ ಅತ್ಯಂತ ಅವಶ್ಯಕತೆಯಿರುವವರು ಅಂದರೆ ಕೇವಲ ಒಂದು ಗುಡಿಸಲು ಕಟ್ಟಿಸಿಕೊಳ್ಳು ವುದಕ್ಕೆ ಯೋಗ್ಯತೆ ಇಲ್ಲದೆ ಇರತಕ್ಕಂಥವರು ಅಂಥ ಜನರಿಗೆ ನಮ್ಮ ಸರ್ಕಾರದವರು ಒದಗಿಸಿ ಕೊಟ್ಟಿದ್ದಾರೆ. ಅದಕ್ಕೆ ನಿಜವಾಗಿಯೂ ನೀವು ಶಹಬಸ್ ಎಂದು ಹೇಳಬೇಕು. ಎಕಾನಾಮಿಕಲ್ ಬ್ಯಾಕ್‌ವರ್ಡ್ ಯಾರಿದ್ದಾರೆ ಅವರಿಗೆ ಸೈಟನ್ನು ಕೊಟ್ಟರೆ ಅದರಿಂದ ಮನೆ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲದವರಿಗೆ ಸರ್ಕಾರದವರು ಜನತಾ ಹೌಸಿಂಗ್ ಮಾಡಿದ್ದಾರೆ. ನಿಮ್ಮ ಕ್ಷೇತ್ರದಲ್ಲೂ ಕಟ್ಟಿರಬೇಕು. ಕೆಲವು ಕಡೆ ಅದರ ಮಹತ್ವವನ್ನು ಅರಿತಂತವರು ಅದರ ಲಾಭವನ್ನು ಹೆಚ್ಚು ಪಡೆದು ಅವರ ಮನೆಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡಿದ್ದಾರೆ. ಕೇವಲ ಬಿಡಿಓ ರಿಪೋರ್ಟ್ ಕೊಟ್ಟರೆ ಸಾಕು ಎಂದು ಮಾಡಿದವರು ಸರಿಯಾದ ಮನೆ ಕಟ್ಟಿಕೊಂಡಿಲ್ಲ. ಯಾವ ಮಾನುಮಂದಾ ತರ ಕಾಲದಲ್ಲೂ ಈ ರೀತಿ ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ. ಈ ಸೌಲಭ್ಯವನ್ನು ಒದಗಿಸಿಕೊಟ್ಟಿ ದ್ದಾರೆಂದರೆ ತಾವು ಸ್ವಲ್ಪಮಟ್ಟಿಗೆ ನಮ್ಮ ದೇಶದ ಚರಿತ್ರೆಯನ್ನು ತೆಗೆದುನೋಡಿ. ಇಂಥ ಕಾರ್ಯ ಕ್ರಮವೂ ಯಾವ ಕಾಲಕ್ಕೂ ಇತ್ತೇ ? ಅಂಥಾದ್ದರಲ್ಲಿ ನಮ್ಮ ಸರ್ಕಾರ ಇಂಥ ಕಾರ್ಯಕ್ರಮ ಗಳನ್ನು ಮಾಡಿ ಸಮಾನ್ಯ ಬಡಜನರಿಗೆ ಸಹಾಯ ಒದಗಿಸುತ್ತಿದ್ದರೂ ಕೂಡ ತಾವು ಅದರ ಬಗ್ಗೆ ಒಂದು ಒಳ್ಳೆಯ ಮಾತನ್ನು ಆಡುತ್ತಿಲ್ಲ. ನಮ್ಮ ಮೈಸೂರಿನಲ್ಲಿ ಕೆಲವು ವಿಲಾಸಗಳು ಇವೆ ಅದಕ್ಕೆ ಲಕ್ಷ್ಮಿ ವಿಲಾಸ ಮತ್ತು ಅಗ್ರಹಾರ ಎಂಬುದಾಗಿ ನಾಮಕರಣ ಮಾಡಿದ್ದಾರೆ. ಅದು ಹಿಂದೆ ನಮ್ಮ ಮಹಾರಾಜರು ಕೊಟ್ಟಂಥ ದಾನ. ನಿಜವಾಗಿಯೂ ಯಾರಿಗೆ ಅವಶ್ಯಕತೆ ಇತ್ತೋ ಅವರಿಗೆ ಅದು ಕೊಟ್ಟಿಲ್ಲ ಯಾರಿಗೆ ಅವಶ್ಯಕತೆಯಿರಲಿಲ್ಲವೊ ಅವರಿಗೆ ಕೊಡುತ್ತಿದ್ದರು. ಯಾರು ಸಮಾಜದಲ್ಲಿ ಮೇಲು ವರ್ಗದಲ್ಲಿ ಪ್ರತಿಷ್ಠಿತ ವ್ಯಕ್ತಿಗಳು ಇದ್ದರೋ ಅಂಥವರಿಗೆ ಪ್ರಾಧನ್ಯತೆ ಇತ್ತು.

ಶ್ರೀ ಟಿ. ಎಂ. ಮಂಜುನಾಥನ್.—ಸ್ವಾಮಿ ಹಳ್ಳಿಗಳಲ್ಲಿ ಯಾವುದೋ ಜಮೀನು ಇತ್ತು ಕೊಟ್ಟಿರಿ. ಅದೇ ಬೆಂಗಳೂರಿನಲ್ಲಿ ಯಾವ ಗರೀಬರಿಗೆ ಮತ್ತು ಬಡವರಿಗೆ ಕೊಟ್ಟಿದ್ದೀರಿ ? ಮಂತ್ರಿ ಗಳಿಗೆ ಮಂತ್ರಿಗಳ ಮೊಮ್ಮಕ್ಕಳಿಗೆ ಮಾತ್ರಕೊಟ್ಟಿದ್ದೀರಿ ?

ಶ್ರೀ ಬಿ. ಬೈರಪ್ಪಾಜಿ —ಮಾನ್ಯ ಮಂಜಣ್ಣನವರು ವಿಚಾರ ಮಾಡಬೇಕು. ಬೆಂಗಳೂರಿನಲ್ಲಿ ನಾಲ್ಕನೇ ದರ್ಜೆಯ ಜನರಿಗೆ ಮತ್ತು ನೌಕರರಿಗೆ ಎಕಾನಾಮಿಕಲ್ ಬ್ಯಾಕ್‌ವರ್ಡ್ ಮತ್ತು ಸೋಷಿಯಲ್ ಬ್ಯಾಕ್‌ವರ್ಡ್ ಇದ್ದರೋ ಅಂಥವರಿಗೂ ಬೆಂಗಳೂರಿನಲ್ಲಿ ಹಂಚಿದ್ದಾರೆ. ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಜೆ.ಎಚ್. ಪಾಟೀಲ್.— ಸ್ವಾಮಿ ನಾವು ಕೇಳುವುದು ಇಷ್ಟೇ. ಯಾವ ಜನಾಂಗದವರೇ ಆಗಿರಲೀ ಜನಾಂಗದ ಪ್ರಶ್ನೆ ಬೇಡ. ಅವರು ಎಲ್ಲಾ ರೀತಿಯಿಂದಲೂ ಹಿಂದುಳಿದವರಿದ್ದರೆ ಅವರಿಗೆ ಕೊಡುತ್ತೇವೆ ಎಂದು ಹೇಳಿ, ಅದನ್ನು ನಾವು ಒಪ್ಪುತ್ತೇವೆ. ?

You say all those who are economically backward they will be gived preference irrespective of their community.

MR. DEPUTY SPEAKER.—That is the scheme.

SRI K. PUTTASWAMY.—It appears that my hon. friend seem to be under illusion. I would like to make it clear that the scheme is applicable to all economically weaker persons, to whatever community they may belong. There seems to be a feeling that certain communities are excluded. That is not the case. Fifty per cent of the Janatha houses are given to the non-scheduled caste people. They may belong to any section or community.

ಯಾರೇ ಆಗಲೀ, ನಾನು ಒಂದು ವರ್ಗಕ್ಕೆ ಸೇರಿದವನು, ಅದಕ್ಕೋಸ್ಕರ ನಾನು ಇನ್ನೊಂದು ವರ್ಗದಲ್ಲಿ ಹೋಗಿ ಇರುವುದಕ್ಕಾಗುವುದಿಲ್ಲವೆಂದು ಹೇಳಿದರೆ, ಅಂಥಾದ್ದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. I do not think that it is only Harijans who are under bonded labour ನಮ್ಮ ಭಾಗದಲ್ಲಿ ಹರಿಜನ ಲೇಬರ್ಸ್ ಇಲ್ಲವೇ ಇಲ್ಲ. Harijans are just agricultural Labourers. ಕೆಲವರು ಅವರನ್ನು ಅಗ್ರಿಕಲ್ಚರಲ್ ಲೇಬರ್ಸ್ ಎಂಬುದಾಗಿ ಉಪಯೋಗಿಸುವುದಿಲ್ಲವೆಂದು ಹೇಳಬಹುದು. ಅವರಲ್ಲಿ ಅನೇಕರು ವ್ಯವಸಾಯದಲ್ಲಿ ನಿರತರಾಗಿರುವವರೂ ಇರುತ್ತಾರೆ. ಅವರು ಬೇರೆ ಜನರಂತೆ ಯಾವುದೋ ಒಂದು ವರ್ಗಕ್ಕೆ ಸೀಮಿತರಾಗಿರುತ್ತಾರೆಂದು ಯಾರು ಭಾವನೆ ಮಾಡಬೇಡಿ. It applies to one particular class more than to others. ಜನತಾ ಹೌಸಸ್ ಸಹ ಹಾಗೆಯೇ. ಈಗಾಗಲೇ ಆ ವರ್ಗಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತಾ ಇದ್ದಾರೆ. ಮಾನ್ಯ ಶ್ರೀ ಹಾವನೂರ್ ಅವರ ವರದಿಯ ಬಗ್ಗೆ ಸರ್ಕಾರದ ಆಜ್ಞೆ ಹೊರಬಿದ್ದಾಗ ಯಾವ ರೀತಿಯಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೋ ಅದು ನನಗೆ ಇನ್ನೂ ಗೊತ್ತಿಲ್ಲ; ಈಗಿನ ಒಂದು ಸನ್ನಿವೇಶದಲ್ಲಿ ಎಲ್ಲವೂ ದೋಷರಹಿತವಾದುದು ಎಂಬುದಾಗಿ ನಾನು ಹೇಳುವುದಕ್ಕಾಗುವುದಿಲ್ಲ. ಇವತ್ತು ಬ್ಯಾಕ್‌ವರ್ಡ್ ಕ್ಲಾಸ್ ವಿಷಯವೇನಾಗಿದೆಯೆಂದರೆ, It is not for any particular community or caste. Any person who comes under that definition can claim benefits available to backward classes.

5-00 P. M.

ಬಹುಶ; ಅವರಿಂದ ವರದಿ ಬಂದಮೇಲೆ ಅದರ ಬಗ್ಗೆ ಸೂಕ್ತ ಸುಧಾರಣೆಯಾಗಬಹುದು ಅಂತಹ ಸುಧಾರಣೆಗಳೆಲ್ಲಾ ಯಾವ ಒಂದು ವರ್ಗಕ್ಕೂ ಸೀಮಿತವಾಗಿರುವುದಿಲ್ಲ. ಅದು ಎಲ್ಲರಿಗೂ ಅನ್ವಯವಾಗುವಂತೆ ಇರುತ್ತದೆಂದು ನಾನು ತಿಳಿದಿದ್ದೇನೆ. ಇನ್ನೂ ಅನೇಕ ಕಾರ್ಯಕ್ರಮಗಳು ಇವೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮಗೆ ಹೇಳಬಯಸುತ್ತೇನೆ. This morning I read in a paper which stated that banks benefit goes to some slum dwellers ಈಗ ನಮ್ಮ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದಲ್ಲಿಯೇ ಸಾಮಾನ್ಯವಾಗಿ ಒಬ್ಬ ಸಣ್ಣ ವ್ಯಾಪಾರಿ ದೊಡ್ಡ ದೊಡ್ಡ ರಸ್ತೆಗಳಲ್ಲಿ ನಿಂತು

ಚಿಲ್ಲರೆ ವ್ಯಾಪಾರ ಮಾಡುತ್ತಾ ಇರುವುದನ್ನು ನಾನೆಲ್ಲರೂ ಪ್ರತಿದಿನವೂ ನೋಡುತ್ತಿದ್ದೇವೆ. ಅವನು ಕೇವಲ ೧೦ ರೂಪಾಯಿಗಳನ್ನು ಬೆಳಿಗ್ಗೆ ಸಾಲ ತೆಗೆದುಕೊಂಡು ಬಂದು ತರಕಾರಿ ಅಥವಾ ಹಣ್ಣುಗಳನ್ನು ಕೊಂಡು ಅದನ್ನು ಮಾರಿ ಸಂಜೆಯ ಹೊತ್ತಿಗೆ ೧೨ ರೂಪಾಯಿಗಳನ್ನು ಸಾಲ ಕೊಟ್ಟವನಿಗೆ ವಾಪಸ್ಸು ಕೊಡಬೇಕು. ಹೀಗೆ ಕೇವಲ 10-20-50 ರೂಪಾಯಿಗಳಷ್ಟು ಬಂಡವಾಳ ಹಾಕಿಕೊಂಡು ವ್ಯಾಪಾರ ಮಾಡುವಂತಹ ಜನಗಳ ಬಗ್ಗೆ ಸರ್ಕಾರದವರು ಈಗಾಗಲೇ ಸಮೀಕ್ಷೆ ನಡೆಸಿದ್ದಾರೆ. ನಾನು ಇದನ್ನು ಊಹಾಪೋಹದಿಂದ ಹೇಳುತ್ತಾ ಇಲ್ಲ. ಅಂತಹವರಲ್ಲಿ ಅನೇಕರು ಶೇಕಡ 1800ರಷ್ಟು ಇಂಟರೆಸ್ಟ್ ಕೊಡುತ್ತಾ ಇದ್ದಾರೆ. ಬೆಳಿಗ್ಗೆ 5 ರೂಪಾಯಿಗಳನ್ನು ತೆಗೆದುಕೊಂಡು ಹೋದರೆ ಸಂಜೆ 6 ರೂಪಾಯಿಗಳನ್ನು ಕೊಡಬೇಕಾಗುತ್ತದೆ ಹಾಗೆಯೇ 10 ರೂಪಾಯಿಗಳನ್ನು ತೆಗೆದುಕೊಂಡು ಹೋದವನು ೧೨ ರೂಪಾಯಿಗಳನ್ನು ವಾಪಸ್ಸು ಕೊಡಬೇಕಾಗುತ್ತದೆ. ಅವನಿಗೆ ಬೇರೆ ಮಾರ್ಗವಿಲ್ಲ. ಅಂತಹವರನ್ನು ಸ್ಮಾಲ್‌ಪೆಟ್ಟಿ ಸ್ಟ್ರೀಟ್ ವೆಂಡಾರ್ಸ್ ಎಂಬುದಾಗಿ ಹೇಳಬಹುದು. ಅದೇ ಸರಿಯಾದ ಪದವೆಂದು ಹೇಳುತ್ತೇನೆ. ಈಗ ಅಂತಹವರ ಬಗ್ಗೆ ಸರ್ಕಾರ ಕಣ್ಣು ತೆರೆದಿದೆ. ಅಂತಹ ಕೆಲವು ವರ್ಗಗಳ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸುತ್ತಾ ಇದೆ. ಅಂತಹವರ ಬಗ್ಗೆ ಶೋಷಣೆ ನಡೆಯುತ್ತಿರುವುದನ್ನು ಸರ್ಕಾರ ಈಗಾಗಲೇ ಸಮೀಕ್ಷೆ ಮಾಡುತ್ತಿದೆ. ಸರ್ಕಾರ ಇವರ ಬಗ್ಗೆ ಈಗ ಹೆಚ್ಚಿಗೆ ಗಮನಕೊಟ್ಟು ಅವರಿಗೆ ಹೆಚ್ಚಿಗೆ ಸಾಲ ಸೌಲಭ್ಯಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅವರೂ ಕೂಡ ನನಗೆ ತಿಳಿದು ಬಂದಿರುವ ಪ್ರಕಾರ ಕೇವಲ 150 ರೂಪಾಯಿಗಳಷ್ಟು ಸಾಲ ತೆಗೆದುಕೊಂಡು ದಿನಕ್ಕೆ 10-15 ರೂಪಾಯಿಗಳಷ್ಟು ಬಡ್ಡಿ ಕೊಡುತಿದ್ದಾರೆ. ಇಂಥ ವಿಷಯಗಳ ಕಡೆ ಸರ್ಕಾರದ ಕಣ್ಣು ಅಥವಾ ದೃಷ್ಟಿ ಬಿದ್ದಿದೆ. Now Government have opend its eyes ಕೆಲವರು ಇಂಥಹ ವಿಷಯಗಳ ಕಡೆ ಸರ್ಕಾರದ ದೃಷ್ಟಿ ಇದುವರೆಗೆ ಅಥವಾ ಹಿಂದೆ ಏಕೆ ಬೀಳಲಿಲ್ಲವೆಂದು ಪ್ರಶ್ನೆ ಮಾಡಬಹುದು. ನಾವು ಸಹ ನಮ್ಮನ್ನು ಟೀಕೆ ಮಾಡುವ ವಿರೋಧಪಕ್ಷದವರ ದೃಷ್ಟಿ ಈ ವಿಚಾರ ಕಡೆಗೆ ಏಕೆ ಬೀಳಲಿಲ್ಲವೆಂದು ಪ್ರಶ್ನೆ ಮಾಡಬಹುದು. ಅಂದರೆ ಆ ವಿಚಾರ ನಮಗೂ ಗೊತ್ತಾಗಲಿಲ್ಲ, ನಿಮಗೂ ಗೊತ್ತಾಗಲಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಇದುವರೆಗೂ ಈ ವಿಚಾರದಲ್ಲಿ ವಿರೋಧ ಪಕ್ಷದವರೂ ಸಹ ಯಾವ ಒಂದು ಮಾತನ್ನೂ ಹೇಳಲಿಲ್ಲ. ಸ್ಮಾಲ್‌ವೆಂಡಾರ್, ಎಕ್ಸ್‌ಪ್ಲಾಯಿಟೇಷನ್ ಪ್ರಾರಂಭವಾದ್ದರಿಂದಲೇ ಹಿಂದೆ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಲು ಪ್ರಯತ್ನವಾಯಿತು. ಹಿಂದಿನ ಕಾಲದಲ್ಲಿ ಬ್ಯಾಂಕುಗಳು ಸರ್ಕಾರದ ನೀತಿನಿಯಮಗಳಿಗೆ ಅನೇಕ ಸಂದರ್ಭಗಳಲ್ಲಿ ಬದ್ಧವಾಗುತ್ತಿರಲಿಲ್ಲ. ಈಗ ಸರ್ಕಾರದ ನೀತಿನಿಯಮಗಳಿಗೆ ಬದ್ಧರಾಗಿ ನಡೆಯಬೇಕಾದಂತ ಕಾಲ ಬಂದಿದೆ. ಇದು ಕೇವಲ ಒಂದೇ ಸಾರಿ ಪೂರ್ತಿಯಾಗಿ ಸರಿಮಾಡಿಬಿಡುತ್ತೇವೆಂದರೆ ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಒಂದು ಉದಾಹರಣೆಯನ್ನು ತೆಗೆದುಕೊಂಡು ಹೇಳುವುದಾದರ, ನಮ್ಮ ವಿಧಾನಸೌಧ ಕಟ್ಟಡವನ್ನು ಕಟ್ಟಬೇಕಾದರೆ, ಮೊದಲೇ ಗೋಪುರವನ್ನು ಕಟ್ಟುವುದಿಲ್ಲ. ಮೊದಲು 30 ಅಡಿಗಳಷ್ಟು ತಳಪಾಯ ತೆಗೆದು ಭದ್ರವಾಗಿ ಕಟ್ಟಡ ಕಟ್ಟಿದ ಮೇಲೆ ಅದಕ್ಕೆ ಒಂದು ಲಾಯಕ್ಕಾದಂಥ ಒಂದು ಗೋಪುರವನ್ನು ಇಡಬೇಕು. ಆ ರೀತಿಯಾಗಿ ಬ್ಯಾಂಕುಗಳ ರಾಷ್ಟ್ರೀಕರಣವಾದ ಕೂಡಲೇ ಎಲ್ಲ ಅನುಕೂಲಗಳನ್ನು ಒಂದೇ ಸಾರಿ ಜನರು ಪಡೆಯುವುದಕ್ಕಾಗುವುದಿಲ್ಲ. ಇನ್ನೂ ಹೆಚ್ಚಿನ ಅನುಕೂಲಗಳನ್ನು ಮುಂದೆಮುಂದೆ ಇವುಗಳಿಂದ ಪಡೆಯಬಹುದೆಂದು ನಿರೀಕ್ಷಣೆ ಮಾಡಬೇಕಾಗುತ್ತದೆ, ಏಕೆಂದರೆ ಈಗ ಒಂದು ಒಳ್ಳೆಯ ಕಾಲ ಬಂತು. ಆದ್ದರಿಂದಲೇ ಯಾವ್ಯಾವ ಕಡೆಗಳಲ್ಲಿ ಶೋಷಣೆ ಅವರ ಬಗ್ಗೆ ಆಗುತ್ತಿದೆಯೆಂಬುದನ್ನು ಸರ್ಕಾರ ಹುಡುಕುವುದಕ್ಕೆ ಪ್ರಯತ್ನ ಮಾಡುತ್ತಿದೆ. ಅಂತಹ ವಿಚಾರಗಳನ್ನು ಮಾನ್ಯ ಸದಸ್ಯರೂ ಸಹ ಸರ್ಕಾರದ ಗಮನಕ್ಕೆ ತಂದರೆ ಸರ್ಕಾರಕ್ಕೆ ಬಹಳವಾಗಿ ಉಪಕಾರ ಮಾಡಿದಂತಾಗುತ್ತದೆ, ಮತ್ತು ಒಂದು ರೀತಿಯಲ್ಲಿ ನೆರವು ಸರ್ಕಾರಕ್ಕೆ ಕೊಟ್ಟಂತಾಗುತ್ತದೆ. ಶೋಷಿತ ವರ್ಗಕ್ಕೆ ಸರ್ಕಾರದವರು ಎಲ್ಲ ತರಹ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರ ಹತ್ತಿದೆ. ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಬಹುದು. ಬೀದಿಯಲ್ಲಿ ಕೈಗಾಡಿ ಎಳೆದುಕೊಂಡು ಹೋಗುವವನ ಜೊತೆಯಲ್ಲಿ ಇಬ್ಬರು ಮೂವರು ಸಾಮಾನುಗಳ ಮೂಟೆಗಳಿಗೆ ತಲೆ ಕೊಟ್ಟು ಸಾಮಾನುಗಳನ್ನು ತೆಗೆದು ಕೊಂಡು ಹೋಗುತ್ತಿದ್ದಾಗ, ಅವನು ಗಾಡಿಯ ಮಾಲೀಕನಲ್ಲದಿದ್ದರೂ ಯಾರೋ ಒಬ್ಬ ಬುದ್ಧಿವಂತ, ಹಣ ಇದ್ದವನು ಸಾಲಕೊಟ್ಟು ತನ್ನ ಗಾಡಿಯನ್ನು ಬಾಡಿಗೆಗೆ ಬೆಳಗ್ಗೆ ಕೊಡುವುದು ಮತ್ತೆ ಸಂಜೆಯೊಳಗೆ ಅದನ್ನು ವಾಪಸ್ಸು ತೆಗೆದು ಕೊಳ್ಳುವುದು ಮತ್ತು ಅವನಿಂದ ಬಡ್ಡಿಯನ್ನು ವಸೂಲುಮಾಡುವುದು

ಈ ರೀತಿಯಾಗಿ ಬಡವನ ಬಗ್ಗೆ ಶೋಷಣೆ ನಡೆಯುತ್ತಿತ್ತು. ಇಂತಹ ಒಂದು ಪ್ರಸಂಗವನ್ನು ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ನಿಂತು ನೋಡಿ ಯಾವುದೇ ಒಂದು ಬ್ಯಾಂಕಿನಿಂದ ಅವನಿಗೆ ಸಾಲ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. ಹೀಗೆ ಎಷ್ಟೋ ವಿಷಯಗಳು ಪ್ರತಿದಿನವೂ ನಡೆಯುತ್ತಾ ಇರುತ್ತವೆ. ಇಂತಹ ವಿಷಯಗಳನ್ನು ಆಲೋಚನೆಮಾಡಿದರೆ, ಸರ್ಕಾರ ತಾನು ಯಾವ ಒಂದು ಕಾರ್ಯಕ್ಕಾಗಿ ದೀಕ್ಷಾಬದ್ಧವಾಗಿ ರಚನೆಯಾಯಿತೋ ಅದು ತನ್ನ ಕಾರ್ಯವನ್ನು ಸಫಲವಾಗಿ ಮಾಡುತ್ತಿದೆ. ಅದರ ಬಗ್ಗೆ ಸಾಕಷ್ಟು ಸಮೀಕ್ಷೆಯನ್ನು ಸಹ ಮಾಡುತ್ತಿದೆ. ಈಗಿನ ಸರ್ಕಾರದ ಕಾರ್ಯಗಳೆಲ್ಲವೂ ತುಂಬಾ ಸಮಾಧಾನವಾಗಿದೆಯೆಂದು ಹೇಳಿಕೊಳ್ಳುವುದಕ್ಕೂ ಬಹಳ ಸಂತೋಷವಾಗುತ್ತಿದೆ. ಇಂತಹ ವಿಷಯಗಳ ಬಗ್ಗೆ ಸರ್ಕಾರದ ಸಾಧನೆ ನೋಡಿದರೆ ನನಗೆ ನಿಜವಾಗಿಯೂ ಹೆಮ್ಮೆಯಾಗುತ್ತದೆ. ತಮಗೂ ಸಂತೋಷವಾಗಿರಬಹುದು. ನಾನು ಹಿಂದೆ ಹೇಳಿದಂಥ ಒಂದು ವಾಕ್ಯವನ್ನು ಓದಿ ಹೇಳುತ್ತೇನೆ. ತಮಗೂ ಆ ವಾಕ್ಯದಲ್ಲಿರತಕ್ಕ ಅರ್ಥ ಸಂಪೂರ್ಣವಾಗಿ ಮನಸ್ಸಿಗೆ ಹಿಡಿದಿದೆಯೆಂದು ನಾನು ತಿಳಿದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಎಂಬ ಕೈಪಿಡಿಗೆ ಬರೆದಂಥ ಪ್ರಸ್ತಾವನೆಯಲ್ಲಿ ಹೇಳಿರುವ ಮೊದಲನೆಯ ವಾಕ್ಯ ಈ ರೀತಿ ಇದೆ. "I am mindful of the fact that in a republic like ours, people judge the quality of the Government not by its pronouncement and promises but by its achievements. ಪ್ರೊನೌನ್ಸ್‌ಮೆಂಟ್ ಮತ್ತು ಪ್ರಾಮಿಸಸ್ ಇವುಗಳನ್ನು ಅನೇಕವಾಗಿ ಹೇಳಿದ್ದಾರೆ. ಆದರೆ ಅವನ್ನೇನೂ ಮುಚ್ಚಿಡುವ ವಸ್ತು ಅಲ್ಲ. ಚುನಾವಣೆ ಘೋಷಣೆಯ ವಿಚಾರವನ್ನೂ ಸಹ ಹೇಳಿದ್ದಾರೆ, ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ನಮಗೆ ಬೇಕಾಗಿರುವುದು ನಿಮ್ಮ ಸರ್ಟಿಫಿಕೇಟ್, ತಾವೆಲ್ಲರೂ ಅದರ ಬಗ್ಗೆ ಯೋಚನೆಮಾಡಿ ಸರಿಯಾದಂತ ರೀತಿಯಲ್ಲಿ ನಿಮ್ಮ ಅಭಿಪ್ರಾಯವನ್ನು ಸೂಚಿಸಿದರೆ, ಅದಕ್ಕೆ ನಿಜವಾಗಿ ಬೆಲೆಯುಂಟು.

ನೀವು ಕೊಟ್ಟಿದ್ದೇ ಅದರೆ ಬಹಳ ಬೆಲೆಯುಂಟು. ಆದರೆ ನೀವು ಪೂರ್ವಾಗ್ರಹ ಪೀಡಿತರಾಗಿ ನಾನು ಹೇಳಿದಂಥ ಅಂಕಿಅಂಶಗಳು ಯಾವುದನ್ನು ನಿಮ್ಮ ಮನಸ್ಸಿಗೆ ಹಾಕದೆ ಇದ್ದರೂ ಕೂಡ ಹೊರಗಡೆ ಜನ ತೀರ್ಪು ನೀಡುವಂಥವರು ಅವರಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮಗೆ ಸರ್ಟಿಫಿಕೇಟ್ ಕೊಡಿ ಎಂದು ನೀವು ನಮ್ಮನ್ನು ಕೇಳದೇ, ನಾವು ಸರ್ಟಿಫಿಕೇಟ್ ಕೊಡುತ್ತೇವೆಯೋ ಇಲ್ಲವೋ ಎಂದು ಹೇಳಿದರೆ ಹೇಗೆ ?

ಶ್ರೀ ಕೆ. ಪುಟ್ಟಸ್ವಾಮಿ.—ನಾವು ಮಾಡತಕ್ಕಂಥ ಕೆಲಸ ಸರಿಯಾಗಿದೆಯೋ ಇಲ್ಲವೊ ಎಂದು ನಿರ್ಣಯ ಮಾಡುವುದಕ್ಕೆ ಜನ ಹೊರಗಡೆ ಇದ್ದಾರೆ. ತೀರ್ಪು ಕೊಡುವವರೂ ಕೂಡ ಹೊರಗಿರತಕ್ಕಂಥ ಜನತೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದಕೋಸ್ಕರ ಚುನಾವಣೆ ಮಾಡಬಾರದೆಂದು ಇರುವುದು.

ಶ್ರೀ ಕೆ. ಎಚ್. ಹನುಮೇಗೌಡ.—ಸರ್ಟಿಫಿಕೇಟ್ ಕೊಡುವಂಥ ಜನ ಹೊರಗಡೆ ಇದ್ದಾರೆಂದೇ ಚುನಾವಣೆಯನ್ನು ನಡೆಸದೇ ಮುಂದಿನ ವರ್ಷಕ್ಕೆ ಮುಂದೂಡಿದ್ದೀರಿ. ಒಳ್ಳೆಯ ಸರ್ಟಿಫಿಕೇಟು ಪಡೆಯುವುದಕ್ಕೆ ಒಳ್ಳೆಯ ಅವಕಾಶವಿದ್ದರೂ ಮುಂದಕ್ಕೆ ಹಾಕುವುದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮನ್ನು ನಿಮ್ಮನ್ನು ಜಡ್ಜ್ ಮಾಡುವವರು ಹೊರಗಡೆ ಇದ್ದಾರೆ. ಸತ್ಯಾಂಶದಿಂದ ಕೂಡಿರದೇ ಇರತಕ್ಕಂಥ ಭಾಷಣವನ್ನು ಮಾಡುವುದಕ್ಕೆ ನನಗೇನೂ ಭ್ರಾಂತಿ ಇಲ್ಲ. ನಾನು ಹೇಳಿದ್ದೆಲ್ಲಾ ನೀವು ಒಪ್ಪಿಕೊಳ್ಳುತ್ತೀರಾ ಎಂದೂ ಅಲ್ಲ, ಆದರೆ ನಾನು ಮಾತನಾಡುವಾಗ ಅಂಕಿಅಂಶಗಳ ಆಧಾರದ ಮೇಲೆ ದೇಶದಲ್ಲಿ ಆಗಿರತಕ್ಕಂಥ ವಾಸ್ತವಾಂಶಗಳ ಆಧಾರದ ಮೇಲೆ, ಹಿಂದೆ ಆಗಿರತಕ್ಕಂಥ ಕೆಲಸಗಳ ಬಗ್ಗೆ ಹೇಳಿದ್ದೇನೆ. ಭವಿಷ್ಯದ ಬಗ್ಗೆ ಹೇಳಿಲ್ಲ. 1976-77ನೇ ಇಸ್ವಿಯಲ್ಲಿ ಏನು ಆಗುತ್ತದೆ ಎನ್ನುವ ವಿಚಾರವನ್ನು ನಾನು ಇನ್ನೂ ಹೇಳಿಲ್ಲ. ಆದುದರಿಂದ ನಾನು ಮುಂಬರುವ ವರ್ಷಗಳಲ್ಲಿ ಏನಾಗುತ್ತದೆ ಎನ್ನುವುದನ್ನು ಸ್ವಲ್ಪ ಸೂಕ್ಷ್ಮವಾಗಿ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಮುಂದಿನ ವರ್ಷ ನಮ್ಮ ಸರ್ಕಾರದವರು ಕೈಗೊಳ್ಳತಕ್ಕಂಥ ಕೆಲಸಕಾರ್ಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾದ್ದು ನನ್ನ ಕರ್ತವ್ಯ. ಏತಕ್ಕೆಂದರೆ ನಾವು ಬರೀ ಹಿಂದಿನ ವರ್ಷಗಳಲ್ಲಿ ನಾವು ಏನೇನು ಸಾಧಿಸಿದ್ದೇವೆ ಎನ್ನುವ ಬಗ್ಗೆ ಹೇಳಿಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ ಹಿಂದಿನ ವರ್ಷ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ಅದೇ ರೀತಿ ಬಾಕಿ ಕೆಲಸಗಳನ್ನು ಮುಂದೆಯೂ ಕೂಡ ಕೈಕೊಂಡು ಅದರ ಫಲ ಜನತೆಗೆ ದೊರೆಯುವಂತೆ ಮಾಡಬೇಕಾದ್ದು ನಮ್ಮ ಕರ್ತವ್ಯ. ಇದು ಅತ್ಯಂತ ಅವಶ್ಯಕ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು 28–29 ವರ್ಷಗಳಾದವು. ಯಾರು ಶ್ರೀಸಾಮಾನ್ಯರು, ದಲಿತ ವರ್ಗದ ಜನರು, ಹಿಂದುಳಿದ ವರ್ಗದ ಜನರಿದ್ದಾರೆ ಯಾರು ಇಷ್ಟು ವರ್ಷಗಳ ಕಾಲ ಅವರಿಗಾದ ಅನ್ಯಾಯವನ್ನು ಸಹಿಸಿಕೊಂಡಿದ್ದಾರೆ, ಅದನ್ನು ನಾವು ಅವರಿಗೆ ಅನ್ಯಾಯ ಮಾಡಿದ್ದು ಅಂತ ಅಲ್ಲ. ಅವರಿಗೆ ನ್ಯಾಯ ಸಲ್ಲಿಸಲಿಲ್ಲ. ಹಿಂದೆ ಭಾರತದೇಶ ವಿಭಾಗವಾದಂಥ ಕಾಲದಿಂದಲೂ ಅನೇಕ ಸಮಸ್ಯೆಗಳು ಇದ್ದವು, ಅನೇಕ ಜ್ವಲಂತ ಸಮಸ್ಯೆಗಳು ಇದ್ದವು ಅವುಗಳನ್ನೆಲ್ಲಾ ಪರಿಹಾರ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಇತ್ತೀಚಿನ ದಿನಗಳಲ್ಲಿ ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಸರ್ಕಾರ ಧಿರೋದ್ಧಾತವಾದ ನಿಲವನ್ನು ತಾಳಿದೆ. ಶ್ರೀಸಾಮಾನ್ಯ ಪರಿಸ್ಥಿತಿ ಸುಧಾರಿಸುವಂತೆ ಕಾರ್ಯಕ್ರಮಗಳನ್ನು ಕೈಗೊಂಡು ಸ್ವಾತಂತ್ರ್ಯದ ಫಲ ಈ ವರ್ಗದ ಜನತೆಗೆ ದೊರೆಯುವಂತೆ ಆಗುತ್ತಿದೆ ಎನ್ನುವ ನಂಬಿಕೆ ನನಗಿದೆ. ಈ ಕಾರಣದಿಂದ ನಾನಾದರು ಭಾವನೆ ಮಾಡುತ್ತೇನೆ. ನಮ್ಮ ರಾಜ್ಯಪಾಲರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳಲ್ಲಿ ಎಲ್ಲಾ ವಿಷಯಗಳು ಇದೆ, ಎಲ್ಲಾ ಸಮಸ್ಯೆಗಳೂ ಇವೆ, ಅಥವಾ ಕೆಲವು ಬಿಟ್ಟಿರಬಹುದು. ಸಾಮಾನ್ಯವಾಗಿ ಏರುತ್ತಿರ ತಕ್ಕಂಥ ಬೆಲೆಗಳನ್ನು ಹತೋಟಿಯಲ್ಲಿ ತರುವುದಕ್ಕೆ ಏನು ಮಾಡಿದೆ? ನಮ್ಮ ರೈತ ಬೆಳೆದಂಥ ವಸ್ತುಗಳನ್ನು ಪರಿಷ್ಕರಣ ಗೊಳಿಸುವುದಕ್ಕೆ ಏನು ಮಾಡಿದೆ? ಮತ್ತು ವರಲಕ್ಷ್ಮಿ ಹತ್ತಿ ಬೆಳೆ ಇನ್ನು ಮುಂತಾದ ವಿಷಯಗಳ ಬಗ್ಗೆ ಮಾತನಾಡಬಹುದು. ಮಾತನಾಡುವುದಕ್ಕೆ ಬೇಕಾದಷ್ಟು ಸಾಮಗ್ರಿಗಳು ಇವೆ ಆದರೆ ಈಗಾಗಲೇ ಮಾನ್ಯ ಅಧ್ಯಕ್ಷರು ನನಗೆ ಬಹಳ ಕಾಲವನ್ನು ಕೊಟ್ಟಿದ್ದಾರೆ ಅವರ ಔದಾರ್ಯವನ್ನು ದುರುಪಯೋಗ ಮಾಡಿಕೊಳ್ಳುವ ಉದ್ದೇಶ ನನಗಿಲ್ಲ. ನಾನು ಹೇಳಿದಂಥ ಮಾತುಗಳನ್ನು ತುಲನೆ ಮಾಡಿ ನಾನು ಮಂಡಿಸಿರತಕ್ಕಂಥ ನಿರ್ಣಯಕ್ಕೆ ಒಮ್ಮತದಿಂದ ಬೆಂಬಲವನ್ನು ಕೊಡುತ್ತೀರಿ ಎನ್ನುತಕ್ಕಂಥ ನಂಬಿಕೆ ಇಟ್ಟುಕೊಂಡಿದ್ದೇನೆ. ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ,

[ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು]

† ಶ್ರೀ ಜೆ. ಎಸ್. ಅಮ್ಮಣ್ಣವರ್.—(ಸದಲಗ) ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿ ಯವರು ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿರುವುದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವೊಂದು ಮಾತುಗಳನ್ನು ಹೇಳಬಯಸು ತ್ತೇನೆ. ಇಷ್ಟು ಹೊತ್ತಿನವರೆಗೆ ಅವರು ಬಹಳ ಸಾಮಗ್ರಿಯನ್ನು ಒದಗಿಸಿದ್ದಾರೆ. ಇಷ್ಟು ಹೊತ್ತು ಭಾಷಣವನ್ನು ಕೇಳಿ ಮಾನ್ಯ ಹನುಮೇಗೌಡರವರಿಗೆ ಹಾಗೂ ಕಾಗೋಡು ತಿಮ್ಮಪ್ಪ ನವರಿಗೆ ಇತ್ತಕಡೆಗೆ ಬಂದು ಬಿಡಬೇಕೆಂದು ಅನ್ನಿಸಿರಬಹುದು ಆದರೆ ಅವರ ಮನಸ್ಸು ಒಪ್ಪದೇ ಆಕಡೆಗೆ ಕುಳಿತಿದ್ದಾರೆ. ಈಗ ಮಾನ್ಯ ಹನುಮೇಗೌಡರವರು ಕೇಳುವುದು ಏನೆಂದರೆ ಕೆಳವರ್ಗದ ಜನರಿದ್ದಾರಲ್ಲ ಅವರಿಗೆ ಏನು ಮಾಡಿದ್ದೀರಿ ಎಂದು ಪದೇ ಪದೇ ಕೇಳುತ್ತಿದ್ದಾರೆ. ಈ ಕೆಳವರ್ಗದ ಜನಕ್ಕೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 28–29 ವರ್ಷಗಳಾದರೂ ಈ ದೇಶ ನನ್ನದು, ನಮಗೆ ಸ್ವಾತಂತ್ರ್ಯಬಂದಿದೆ ಎಂದು ಹೇಳಿ ಯಾರಿಗಾದರೂ ಭಾವನೆ ಬಂದಿದೆಯೆ? ಅದು ಏನಾದರೂ ಅವರ ಮನಸ್ಸಿಗೆ ಬಂದಿದ್ದರೆ ಅದು ಈಗಲೇ ಎಂದು ಹೇಳುತ್ತೇನೆ. ಮಾನ್ಯ ಸದಸ್ಯರು ಇಲ್ಲವೆಂದು ಹೇಳಲಿ, ಚಿಕ್ಕವರಿಗೆ ಏನು ಮಾಡಿದ್ದೀರಿ ಎಂದು ತಾವು ಪದೇ ಪದೇ ಕೇಳುತ್ತಿದ್ದೀರಿ. ಅದಕ್ಕೆ ತಮಗೆ ಉದಾಹರಣೆಯನ್ನು ಕೊಡುತ್ತೇನೆ. ಮೊದಲನೆಯದಾಗಿ ಋಣ ವಿಮೋಚನ ಬಗ್ಗೆ ಈಗಾಗಲೇ ಹೇಳಿದ್ದಾರೆ. 100ರಲ್ಲಿ ಪ್ರತಿ ಶತ ಬಡವರು ದೇಶದಲ್ಲಿರುವ

ವರು ಸುಮಾರು 80 ಪರ್ಸೆಂಟ್. ಈ 80 ಪರ್ಸೆಂಟ್ ಜನರು ಯಾವಾಗಲೂ ಸಾಲಗಾರರಾಗಿ ಕಷ್ಟ ಪಡುತ್ತಿದ್ದರು ಅಂಥವರನ್ನು ಋಣವಿಮೋಚನೆ ಮಾಡಲು ಒಂದು ಸದವಕಾಶವನ್ನು ಮಾಡಿಕೊಟ್ಟಿದ್ದೇವೆ ಇದೊಂದು ಅತ್ಯಂತ ಹೆಮ್ಮೆಯ ವಿಷಯವೆಂದು ಹೇಳುತ್ತೇನೆ. ಇಷ್ಟೇ ಅಲ್ಲ ಅವರು ಹೇಳಿದ ಹಾಗೆ ಬೇಡಿಕೆಯನ್ನು ಪೂರೈಕೆ ಮಾಡಲು ಕಮರ್ಷಿಯಲ್ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದ ನಂತರ ಬಡವರಿಗೆ ಸಹಾಯ ಸಿಗುತ್ತಿದೆ. ಮೊದಲು ಬ್ಯಾಂಕ್‌ಗಳಿಗೆ ಯಾರು ಹೋಗುತ್ತಿದ್ದರು ? ಮಾನ್ಯ ಮಂಜುನಾಥರವರೋ ಇಲ್ಲ ಹನುಮೇಗೌಡರವರೋ, ಮಾನ್ಯ ಪುಟ್ಟಸ್ವಾಮಯ್ಯನಂಥ ಬಡವರೋ ಹೋಗುತ್ತಿದ್ದವರು ?

ಶ್ರೀ ಜೆ. ಎನ್. ಪಾಟಿಲ್—ನಮ್ಮ ದೇಶದಲ್ಲಿ ಬಡ ಜನರ ಸಂಖ್ಯೆ ಎಷ್ಟಿದೆ? ನಮ್ಮ ಕಮರ್ಷಿಯಲ್ ಬ್ಯಾಂಕ್ಸ್‌ಗಳು ಎಷ್ಟು ಜನರಿಗೆ ಅವರು ದುಡ್ಡು ಕೊಟ್ಟಿದ್ದಾರೆ ? ಅಂಕೆ ಸಂಖ್ಯೆಗಳು ಇಲ್ಲದೇ ಬರೀ ಭಾಷಣ ಮಾಡುವುದರಿಂದ ಏನೂ ಪ್ರಯೋಜನವಿಲ್ಲ: ಅಂಕಿಅಂಶ ಗಳೊಂದಿಗೆ ಸವಿಸ್ತಾರವಾಗಿ ಭಾಷಣ ಮಾಡಿದರೆ ಉಪಯೋಗವಾಗುತ್ತದೆಂದು ಹೇಳುತ್ತೇನೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಅದಕ್ಕೆಲ್ಲಾ ಆ ಮೇಲೆ ನಾನು ಕೂಲಂಕಷವಾಗಿ ಉತ್ತರ ಕೊಡುತ್ತೇನೆ. ಕಮರ್ಷಿಯಲ್ ಬ್ಯಾಂಕ್‌ಗಳು ಏನೂ ಬಂಡವಾಳವಿಲ್ಲದೆ ಹಣವನ್ನು ಕೊಡು ವುದಕ್ಕೆ ಆಗುವುದಿಲ್ಲ. ಅವರಲ್ಲಿ ಬಂಡವಾಳವೇನಿದೆ ಅದರಲ್ಲಿ ಕೆಲವೊಂದು ಪರ್ಸೆಂಟೇಜ್ ಕೊಡ ಬೇಕಾಗುತ್ತವೆ. ಒಮ್ಮೆಲೆ ಮನೆ ಇಲ್ಲದವರಿಗೆ ಮನೆ ಕಟ್ಟಿಸಿಕೊಡುತ್ತೇವೆ ದುಡ್ಡನ್ನು ಕೊಡು ತ್ತೇವೆಂದು ಹೇಳಿದರೂ ಕೂಡ ಅವರು ತೆಗೆದುಕೊಳ್ಳತಕ್ಕಂಥ ಹಣದಿಂದ ಅವರು ಸರಿಯಾಗಿ ದುಡಿಯುವಂತೆ ಮಾಡಬೇಕು ಇಲ್ಲದೇ ಹೋದರೆ ಬಡವರ ಕಲ್ಯಾಣ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ ಹೆಚ್. ಹನುಮೇಗೌಡ.—ಮಾನ್ಯ ಸದಸ್ಯರು ಬ್ಯಾಂಕ್ ರಾಷ್ಟ್ರೀಕರಣ ಆದ ನಂತರ ಬಡವರಿಗೆ ಬಹಳ ಅನುಕೂಲವಾಗಿದೆ ಎಂದು ಹೇಳುತ್ತಿದ್ದಾರೆ, ಮೊದಲು ಬ್ಯಾಂಕ್ ರಾಷ್ಟ್ರೀಕರಣ ಆಗುವುದಕ್ಕೆ ಮುಂಚೆ ಅತಿ ಹೆಚ್ಚು ಅಂದರೆ ಬ್ಯಾಂಕುಗಳಲ್ಲಿ 6–7 ಪರಸೆಂಟ್ ಬಡ್ಡಿಗೆ ಹಣ ದೊರೆಯುತ್ತಿತ್ತು, ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 18 ಪರಸೆಂಟ್ ಮೇಲೆ ಬಡ್ಡಿ ಹಾಕುತ್ತಿದ್ದಾರೆ. ಇದರಿಂದ ಬಡವರಿಗೆ ಅನುಕೂಲ ಮಾಡಿದ ಹಾಗೆ ಆಯಿತೇ ಎಂದು ಕೇಳುತ್ತೇನೆ. ಆಗ ಬಡವರಿಗೆ ನಾಲ್ಕು ಪರಸೆಂಟ್ ಬಡ್ಡಿಗೆ ಹಣ ಕೊಡುತ್ತಿದ್ದರು. ಆರು ಪರಸೆಂಟ್ ಕೂಡ ಇರಲಿಲ್ಲ. ಅದುದರಿಂದಲೇ ಈ ದೇಶದ ಬಡ ಜನತೆಗೆ ಒಂದು ನೆಮ್ಮದಿ ಸಿಕ್ಕಿ ಸರ್ಕಾರದ ಮೇಲೆ ಒಂದು ವಿಶ್ವಾಸ ಬಂದಿತ್ತು ಎಂದು ಹೇಳುತ್ತೇನೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಈಗ ತಾವು ಬೆಂಗಳೂರಿನಲ್ಲಿ ಜನರಿಗೆ ಯಾವ ರೀತಿ ನಿವೇಶನ ಒದಗಿಸಿದ್ದೀರಿ ಎಂದು ಕೇಳಿದಿರಿ, ಬೆಂಗಳೂರಿನಲ್ಲಿ ಸ್ಥಳ ಒದಗಿಸಿರುವುದರ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಅಲ್ಲದೇ ಯಾವ ಒಂದು ವಿಶಿಷ್ಟವರ್ಗಕ್ಕೆ ಸ್ಥಳ ಹಂಚಿಕೆಯಾಗಿದೆ ಎಂದು ಕೇಳಿದಿರಿ ಅದಕ್ಕೆ ಹೇಳುವುದಾದರೆ 1 ಲಕ್ಷ 80 ಸಾವಿರ ಜನ ಹರಿಜನ ಗಿರಿಜನರಿಗೆ ಸ್ಥಳ ಹಂಚಿಕೆಯಾಗಿದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರ ಬಯಸುತ್ತೇನೆ. ಅನಂತರ ಹೇಳುವುದಾದರೆ ಈಗ ಏನಾಗಿದೆ ಎಂದರೆ ತಾವು ಹೇಳುವಾಗ ತುರ್ತುಪರಿಸ್ಥಿತಿ ತಂದು ನಮ್ಮ ಬಾಯಿಗಳನ್ನು ಬಂದ ಮಾಡಿದ್ದೀರಾ ಎಂದು ಹೇಳಿದಿರಿ, ನಾವು ಯಾರ ಬಾಯಿಗಳನ್ನು ಬಂದ್ ಮಾಡಿಲ್ಲ, ನಾವು ಯಾವಾಗಲೂ ತಮ್ಮ ವಿಚಾರಗಳನ್ನು, ತಾವು ಹೇಳುವುದನ್ನು ಸ್ವಾಗತ ಮಾಡುತ್ತೇವೆ ಆದರೆ ನಾನು ತಮ್ಮನ್ನು ಇಷ್ಟುಮಾತ್ರ ಕೇಳಬಯಸುತ್ತೇನೆ, ಅದು ಏನೆಂದರೆ ಇದುವರೆಗೂ ದೇಶದಲ್ಲಿ ಏನು ಒಂದು ಅಶಾಂತಿ ನಿರ್ಮಾಣವಾಗಿತ್ತು ಅದನ್ನು ಮಾತ್ರ ತಾವು ಒಪ್ಪುತ್ತೀರೋ ಇಲ್ಲವೋ ? ಅದನ್ನು ತಾವೇ ಹೇಳಬೇಕು. ಇನ್ನೂ ಏನೇನೋ ಗಲಾಟೆ ಮಾಡಿ ದೊಣ್ಣೆಯಿಂದ ಹೊಡೆದು ಅಶಾಂತ ಪರಿಸ್ಥಿತಿ ಉಂಟುಮಾಡಬೇಕು ಎನ್ನುವುದರೊಳಗೆ ಕಾನೂನು ಬದ್ಧವಾಗಿ ತುರ್ತು ಪರಿಸ್ಥಿತಿ ಬಂತು. ತಾವು ಚುನಾವಣೆಯಿಂದ ಬಂದಂಥ ಸದಸ್ಯರು ಈಗ ಬಂದಿರತಕ್ಕ ಎಮರ್ಜೆನ್ಸಿ ಯೇನಿದೆ ಇದನ್ನು ದಬ್ಬಾಳಿಕೆ ಎಂದು ಹೇಳಿದರೆ ಇದನ್ನೂ ಒಪ್ಪುತ್ತೀರಾ ? ಅಶಾಂತ ಪರಿಸ್ಥಿತಿಯನ್ನು ಉಂಟುಮಾಡುವುದು ಡೆಮಾಕ್ರಸಿ ಎಂದು ಹೇಳುತ್ತೀರಾ ? ದೇಶದ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರ ಚುನಾವಣೆ ತೀರ್ಪಿನ ಬಗ್ಗೆ ಗಲಾಟೆ

ನಡೆಯಿತು. ನಾವು ಸುಮ್ಮನೆ ಇದ್ದಿದ್ದರೆ ಇವರಿಗೆ ನಮ್ಮ ದೇಶದ ಆಡಳಿತವನ್ನು ನಡೆಸುವುದಕ್ಕೆ ಬರುವುದಿಲ್ಲ ಎಂದು ಹೇಳಿಬಿಡುತ್ತಿದ್ದರು. ಈಗ ಏನು ಒಂದು ತುರ್ತುಪರಿಸ್ಥಿತಿ ಬಂದಿದೆ. ಅದು ಬಂದನಂತರ ಯಾವ ರೀತಿಯ ಒಂದು ಅನುಕೂಲ ಜನರಿಗೆ ಆಗಿದೆ ಎಂಬುದನ್ನು ಇವೊತ್ತಿನ ದಿವಸ ನೋಡ ಬೇಕಾಗಿದೆ. ಉದಾಹರಣೆ ಹೇಳುವುದಾದರೆ ತಾವೇ ಮೊದಲು ವಿಧಾನ ಸೌಧದ ಯಾವ ಆಫೀಸಿನಲ್ಲಿ ಹೋದರು ಸಂಬಂಧಪಟ್ಟ ನೌಕರರು ಅಲ್ಲಿ ಸಿಕ್ಕುತ್ತಿರಲಿಲ್ಲ, ಅವರು ಕಾಫಿ ಹೋಟಲಿನಲ್ಲಿ ಸಿಕ್ಕುತ್ತಿದ್ದರು ಎಂದು ಹೇಳಿದ್ದೀರಿ, ಆದರೆ ಇವೊತ್ತಿನ ದಿವಸ ಏನಾಗಿದೆ ಎಂಬುದನ್ನು ತಾವೇ ನೋಡಬೇಕು. ಈಗ ತುರ್ತುಪರಿಸ್ಥಿತಿ ವಿನಹ ಯಾವ ಕ್ರಮ ತಂದಿದ್ದರೂ ಕೂಡ ಆಗುತ್ತಿರಲಿಲ್ಲ ಎಂದು ಹೇಳುತ್ತೇನೆ. ಈಗ ತಾವು ಬಡ ಜನತೆಗೆ ಯಾವ ಅನುಕೂಲತೆ ಮಾಡಿದ್ದೀರಾ ಎಂದು ಕೇಳುತ್ತೀರಾ, ಅದಕ್ಕೆ ಹೇಳುವುದಾದರೆ ಅರ್ಬನ್ ಸೀಲಿಂಗ್ ಮಾಡಿದ್ದೇವೆ. ತಾವು ಬಡ ಜನರ ಹಿತವನ್ನು ಬಯಸುವವರು 1961ರಲ್ಲಿ ಲ್ಯಾಂಡ್ ಫಾರಮ್ಸ್ ಆ್ಯಕ್ಟ ಮಾಡಿದಿರಿ ಆದರೆ 1965ರ ವರೆಗೂ ಅದನ್ನು ಜಾರಿಗೆ ಕೊಡುವುದಕ್ಕೆ ತಮ್ಮ ಕೈಯಿಂದ ಸಾಧ್ಯವಾಗಲಿಲ್ಲ, ತಾವು ಬಡ ಜನರ ಹೆಸರನ್ನು ಹೇಳಿಕೊಂಡು ತಾವೆ ಅಧಿಕಾರಕ್ಕೆ ಬರಬೇಕು ಎಂದು ಪ್ರಯತ್ನ ಮಾಡಿದಿರಿ, ಆದರೆ ಜನರು ತಮ್ಮ ಮಾತನ್ನು ಕೇಳಲಿಲ್ಲ, ಆದರೂ ತಾವು ಏನೋ ಒಂದು ಗಲಾಟೆ ಮಾಡಿ ಹೋರಾಡಿದಿರಿ, ಆದರೂ ಸಹ ಅದು ಸಾಧ್ಯವಾಗಲಿಲ್ಲ. ಆದುದರಿಂದ ಈ ಅನುಶಾಸನ ಪರ್ವದಲ್ಲಿ ಗಲಾಟೆ ಮಾಡದ ದೇಶವನ್ನು ಪ್ರಗತಿ ಪಥಕ್ಕೆ ಒಯ್ಯಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈಗ ನಮ್ಮ ಸರ್ಕಾರ ಏನು ಒಂದು ಅಚೀವಮೆಂಟ್ ಸಾಧಿಸಿದೆ ಎನ್ನುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಅಂಕಿ ಅಂಶಗಳನ್ನು ಕೊಟ್ಟು ಹೇಳಿದ್ದಾರೆ ಅವರು ಹೇಳಿದರೂ ಕೂಡ ಕೆಲವು ವಿಷಯಗಳನ್ನು ನಾನು ಹೇಳಬೇಕಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಮಾಜ ಕಲ್ಯಾಣ ಇಲಾಖೆ ಒಂದರಲ್ಲೇ ತಮ್ಮ ಸರ್ಕಾರದ ಕರ್ತವ್ಯ ಏನಾಗಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ. ಜೆ. ಎಸ್. ಅಮ್ಮಣ್ಣವರ್.—ಒಮ್ಮೆ ಒಬ್ಬ ಮನುಷ್ಯ ಧರ್ಮರಾಜನನ್ನು ಏನಯ್ಯಾ ಧರ್ಮರಾಜ ಜಗತ್ತು ಹೇಗಿದೆ ಎಂದು ಕೇಳಿದನಂತರ ಅದಕ್ಕೆ ಧರ್ಮರಾಜನು ಎಲ್ಲಾ ಧಾರ್ಮಿಕವಾಗಿದೆ ಎಂದು ಹೇಳಿದನಂತೆ, ಅದೇ ಮನುಷ್ಯ ದುರ್ಯೋಧನನ ಬಳಿ ಹೋಗಿ ಏನಯ್ಯಾ ದುರ್ಯೋಧನ ಜಗತ್ತು ಹೇಗಿದೆ ಎಂದು ಕೇಳಿದನಂತೆ ಅದಕ್ಕೆ ದುರ್ಯೋಧನನು ಎಲ್ಲಾ ದುಷ್ಟಮಯವಾಗಿದೆ ಎಂದು ಹೇಳಿದನಂತೆ ಹಾಗೆ ತಮ್ಮ ಕಣ್ಣಿಗೆ ಹಾಗೆ ಕಂಡರೆ ನಾನು ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಬಿ. ಪುಟ್ಟಸ್ವಾಮಯ್ಯ —ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಷ್ಟು ತಿಂದಿದ್ದಾರೆ, ಅವರನ್ನು ಶಿವನೇ ಕಾಪಾಡಬೇಕು.

ಶ್ರೀ ಜೆ ಎಸ್ ಅಮ್ಮಣ್ಣವರ್ —ಇನ್ನು ನಮ್ಮ ಸರ್ಕಾರ ಮಾಡಿರತಕ್ಕ ಅಚೀವಮೆಂಟ್ ಬಗ್ಗೆ ಒಂದೆರಡು ವಿಷಯ ಹೇಳುತ್ತೇನೆ. ಒಕ್ಕಲುತನ ಹುಟ್ಟುವಳಿ ವಿಷಯವಾಗಿ ಹೇಳುವುದಾದರೆ 1971–72ರಲ್ಲಿ 10 ಲಕ್ಷ 85 ಸಾವಿರ ಎಕರೆ ಬಂಡೆ ಕೆಲಸ ಆಗಿತ್ತು ಆದರೆ ಮೂರು ವರ್ಷದಿಂದ ಈಚೆಗೆ 8 ಲಕ್ಷ ಹೆಕ್ಟೇರ್ ಬಂಡೆ ಕೆಲಸ ಮಾಡಿಸಲಾಗಿದೆ. ಇನ್ನು ಅರಣ್ಯ ಇಲಾಖೆಯ ಉತ್ಪಾದನೆ ಬಗ್ಗೆ ಹೇಳಬೇಕಾದರೆ 1971–72ರಲ್ಲಿ 15 ಕೋಟಿ ರೂಪಾಯಿ ಇದ್ದುದು 19-2–73 ಮತ್ತು 19 3–74ರಲ್ಲಿ ಅದು 24 ಕೋಟಿ 50 ಲಕ್ಷ ರೂಪಾಯಿ ಆಗಿದೆ. ಅಲ್ಲದೇ ಹೈಬ್ರಿಡ್ ವೆರೈಟಿ 5 ಲಕ್ಷ 70 ಸಾವಿರ ಹೆಕ್ಟೇರ್ ಇದ್ದುದು ಈಗ ಅದು 11 ಲಕ್ಷ 50 ಸಾವಿರ ಹೆಕ್ಟೇರ್ ಆಗಿದೆ ಆದುದರಿಂದ ನಾವು ಅತ್ಯಂತ ಗಮನಾರ್ಹವಾದಂಥ ಪ್ರಗತಿ ಮಾಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಿವೇಶನ ಹಂಚಿಕೆ ವಿಚಾರದಲ್ಲ ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರಿಂದ, ನಾನು ಬೇರೆ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡತ್ತೇನೆ. ವಿಶ್ವಬ್ಯಾಂಕಿನಿಂದ ನಮ್ಮ ರಾಜ್ಯಕ್ಕೆ ಸುಮಾರು 51 ಕೋಟಿ ರೂಪಾಯಿಗಳ ಸಹಾಯ ನೀಡಲಿದೆ. ಇದರ ಅನುಕೂಲತೆಯನ್ನು ರಾಜ್ಯದ 9 ಜಿಲ್ಲೆಗಳಿಗೂ ಸಾಲಸೌಲಭ್ಯ ರೂಪದಲ್ಲಿ ಒದಗಿಸುವ ಏರ್ಪಾಡು ಇದೆ. ಅಷ್ಟೇ

ಅಲ್ಲದೆ, ಕಡಿಮೆ ಭೂ ಹಿಡುವಳಿ ಇರುವವರಿಗೂ ಸಾಲಸೌಲಭ್ಯ ಒದಗಿಸುವ ಏರ್ಪಾಡು ಇದೆ ಅದನ್ನು ನಾನು ಮಾನ್ಯ ಸದಸ್ಯರಾದ ಶ್ರೀ ಹನುಮೇಗೌಡರ ಗಮನಕ್ಕೆ ತರಬಯಸುತ್ತೇನೆ. 51 ಕೋಟಿ ರೂಪಾಯಿ ಹಣದ ಪೈಕಿ 5 ಎಕರೆ ಕಡಮೆ ಇರುವ ಜನರಿಗೆ 50 ಪರ್ಸೆಂಟ್ ಕೊಡತಕ್ಕ ವ್ಯವಸ್ಥೆ ಇದೆ. ಈ ಎಲ್ಲಾ ಯೋಜನೆಗಳನ್ನು ನಮ್ಮ ಸರ್ಕಾರದವರು ಜಾರಿಗೆ ತಂದಿರುವುದು ಶ್ರೀಮಂತರಿಗಲ್ಲ ; ಬಡವರಿಗಾಗಿ ; ಎರಡೂವರೆ ಎಕರೆ ಜಮೀನುಳ್ಳ ರೈತನಿಗೆ, ಆ ಭೂಮಿಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಅದರಲ್ಲಿ ಬಾವಿ ತೊಡಸಲಿಕ್ಕೆ ಮತ್ತು ಪಂಪ್‌ಸೆಟ್ ಹಾಕಿಸಲಿಕ್ಕೆ ಸುಮಾರು ಹದಿನಾಲ್ಕು ಸಾವಿರ ರೂಪಾಯಿಗಳ ಧನ ಸಹಾಯ ನೀಡುವ ಸೌಲಭ್ಯ ಇದೆ. ಹಿಂದಿನವರು ಇಂತಹ ಸೌಲಭ್ಯಗಳನ್ನು ತಂದಿದ್ದರೇ ಎಂದು ನಾನು ಪ್ರಶ್ನೆ ಮಾಡುತ್ತೇನೆ.

5-30 P. M.

ಇನ್ನು ಶಿಕ್ಷಣದ ಬಗ್ಗೆ ಹೇಳಬೇಕಾದರೆ, ಸುಮಾರು 75 ಸಾವಿರ ರೂಪಾಯಿಗಳನ್ನು ಅಂಟೆಂಡೆನ್ಸ್ ಸ್ಕಾಲರ್‌ಶಿಪ್ ಎಂದು ಕೊಡಲು ವಿದ್ಯಾರ್ಥಿಗಳಿಗಾಗಿ ಇಡಲಾಗಿದೆ. ಈ ಹಣದ ಸಹಾಯ ವೆಲ್ಲಾ ಹಿಂದುಳಿದ ವರ್ಗದವರಿಗೆ ಸಿಗುತ್ತದೆ. ಅಷ್ಟೇ ಅಲ್ಲದೆ. 40 ರೂಪಾಯಿಗಳನ್ನು ಪ್ರತಿ ವಿದ್ಯಾರ್ಥಿಗೆ ಬಟ್ಟೆ ಮಾತ್ತು ಲೇಖನ ಸ್ತಾಮಗ್ರಿ ಕೊಳ್ಳುವುದಕ್ಕೆ ಕೊಡಲಾಗುವ ಸೌಲಭ್ಯವೂ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹೀಗೆ ಕೊಡುವುದರಲ್ಲಿ ಅವ್ಯವಹಾರ ನಡೆದಿರುವುದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲಿ, ಹಳ್ಳಿಗಾಡುಗಳಲ್ಲಿ 50 ರೂಪಾಯಿ ಕಂದಾಯ ಕೊಡದೇ ಇರುವವರನ್ನು ಹರಾಜು ಹಾಕುತ್ತಿದ್ದಾರೆ. ಇಲ್ಲಿ ಲಕ್ಷಗಟ್ಟಲೆ ಲೂಟಿ ಆಗಿದೆ. ಅದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಜೆ. ಎಸ್. ಅಮ್ಮಣ್ಣವರ್.—ಶಿಷ್ಯರು ತಮ್ಮವರೇ ಇದ್ದಾರೆ. ಲಕ್ಷಗಟ್ಟಲೆ ಲೂಟಿ ಯಾರು ಹೊಡೆಯುತ್ತಿದ್ದಾರೆ ಅವರನ್ನು ಹಿಡಿದು ಕೊಡಿ ನಾವು ಅವರಿಗೆ ಶಿಕ್ಷೆ ಕೊಡುತ್ತೇವೆ. ಸರ್ಕಾರ ಒಂದು ಶಾಸನ. ಇದು ಶಾಸನ ಸಭೆ ಶಾಸನಕ್ಕೆ ಒಳಪಡಿಸಿದರೆ ಅದು ಯಾರನ್ನೂ ಬಿಡುವುದಿಲ್ಲ.

ಶ್ರೀ ಜಿ. ಎನ್. ಪಾಟೀಲ್.—ಮಾನ್ಯ ಸದಸ್ಯರಾದ ಅಮ್ಮಣ್ಣನವರು ಏನು ಹೇಳುತ್ತಿದ್ದಾರೆ, ಅವುಗಳನ್ನು ಅಂಕಿ-ಅಂಶಗಳ ಮುಂಖಾಂತರ ಹೇಳುತ್ತಿದ್ದಾರೋ ಅಥವಾ ಸುಮ್ಮಸುಮ್ಮನೆ ಹೇಳುತ್ತಿದ್ದಾರೋ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಈ ಸಭೆಯಲ್ಲಿ ಮಾತನಾಡುವಾಗ ಸತ್ಯ ಮಾತನಾಡಬೇಕೆಂದು ನಿಯಮ ಇದೆ. ಆದುದರಿಂದ, ಮಾನ್ಯ ಸದಸ್ಯರು ಅಂಕಿ-ಅಂಶಗಳ ಆಧಾರದ ಮೇಲೆ ಹೇಳುತ್ತಿರುವುದು ಸತ್ಯ ಎಂದು ನನ್ನ ಮತ್ತು ಸದಸ್ಯರ ಭಾವನೆ. ಅದು ತಪ್ಪಾಗಿದ್ದರೆ, ತೋರಿಸಿಕೊಡುವುದು ಸದಸ್ಯರ ಕರ್ತವ್ಯ ; ಜವಾಬ್ದಾರಿ ; ಅದು ಬಿಟ್ಟು ಸುಮ್ಮನೆ ಉಪ್ಯೋಗವಿಲ್ಲದ ಉದ್ಯೋಗ ಮಾಡುವುದು ಬೇಡ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಇನ್ನು ಮಿಡ್ ಡೇ ಮೀಲ್ಸ್ ವಿಚಾರ. ಇದನ್ನು ಸುಮಾರು 25 ಪರ್ಸೆಂಟ್ ಜನರಿಗೆ ಇವತ್ತಿನ ದಿವಸ ಕೊಡುತ್ತಿದ್ದಾರೆ. ಮತ್ತೆ ಕೆಲವು ಸಂಸ್ಥೆಗಳ ಮೂಲಕವೂ ಈ ಒಂದು ವ್ಯವಸ್ಥೆ ನಡೆಯುತ್ತಾ ಇದೆ. ಮತ್ತು ಇದನ್ನು ನಿಲ್ಲಿಸದೆ ಸರಾಗವಾಗಿ ಮುಂದುವರಿಸಿಕೊಂಡು ಹೋಗುವ ಆಲೋಚನೆಯನ್ನು ಸರ್ಕಾರ ಮಾಡುತ್ತಿದೆ. ಇಷ್ಟೇ ಅಲ್ಲದೆ, 42 ಸಾವಿರ ಶಾಲಾ ಮಕ್ಕಳಿಗೆ ಇನ್ನೊಂದು ಯೋಜನೆಯಲ್ಲಿ ಆಹಾರವನ್ನು ಒದಗಿಸುತ್ತಾ ಇದೆ. ಈ ಯೋಜನೆಗಳು ಬಡವರ ಮಕ್ಕಳಿಗಾಗಿ ಮಾಡಿದ್ದು. ಶ್ರೀಮಂತ ಮಕ್ಕಳಿಗೆ ಇದು ಹೋಗುತ್ತಾ ಇಲ್ಲ.

ಇನ್ನು ಭೂಸುಧಾರಣೆ ವಿಚಾರ.—ನಾವು ಹಿಂದೆ ಊರಿನಲ್ಲಿ ನಾಲ್ಕು ಜನ ಕುಳಿತು ನ್ಯಾಯ ಮಾಡುತ್ತಿದ್ದಂತೆ, ಇವತ್ತೂ ಕೂಡ ಸದಸ್ಯರನ್ನು ನೇಮಿಸಿ ಶೀಘ್ರವಾಗಿ ಭೂಸುಧಾರಣೆಯನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ ಈಗಾಗಲೇ ಗುರಿ ಇಟ್ಟು ಕೊಂಡಿದ್ದಂತೆ 1976ರ ಅಂತ್ಯದೊಳಗೆ ಗೇಣಿದಾರರನ್ನು ಮಾಲೀಕರನ್ನಾಗಿ ಮಾಡುವುದು ಸರ್ಕಾರದ ಮುಂದಿದೆ. ಮತ್ತು ಅವರು ಆ ಜಮೀನುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಬೇಕಾದಂಥ ಸಾಲಸೌಲಭ್ಯಗಳನ್ನು ಒದಗಿಸುವುದಕ್ಕೆ ಭೂ ಅಭಿವೃದ್ಧಿ ಬ್ಯಾಂಕಿನವರು ಮುಂದೆ ಬಂದಿದ್ದಾರೆ,

ಇನ್ನು, 7 ಸಾವಿರ ಕಿಲೋ ಮೀಟರು ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಿವೆ. ಇನ್ನು ಮುಂದೆ ಅದು ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು. ಇಂಥಾ ಒಂದು ಮಹತ್ಸಾಧನೆಯನ್ನು ನಮ್ಮ ಸರ್ಕಾರ ಇವತ್ತಿನ ದಿವಸ ಮಾಡಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪೇಪರ್‌ನಲ್ಲಿ ಮಾತ್ರ ಟ್ರಾನ್ಸ್‌ಫರ್ ಆಗಿವೆ. ಒಂದು ರಸ್ತೆಗೂ ಮಣ್ಣು ಹಾಕಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ. —ರಸ್ತೆಗಳಲ್ಲಿ ಮನುಷ್ಯರೇ ತಿರುಗಾಡುವುದಕ್ಕಾಗುವುದಿಲ್ಲ.

ಶ್ರೀ ಜೆ ಎಸ್. ಅಮ್ಮಣ್ಣವರ್.—ಮಾನ್ಯ ಸದಸ್ಯರು ಬೆಂಗಳೂರಿನಲ್ಲೇ ಕುಳಿತರೆ, ಹಳ್ಳಿಗಾಡಿನ ಕಡೆ ರಸ್ತೆ ಆಗಿದೆಯೋ ಇಲ್ಲವೇ ಎಂಬುದನ್ನಾದರೂ ತಿಳಿಯುವುದು ಹೇಗೆ ?

ಶ್ರೀ ಜಿ ಎನ್. ಪಾಟೀಲ್.—ಒಂದು ರಸ್ತೆಯೂ ಸರಿಯಾಗಿಲ್ಲ.

ಶ್ರೀ ಜೆ. ಎಸ್ ಅಮಣ್ಣವರ್.—ರಸ್ತೆಗಳನ್ನು ತೆಗೆದುಕೊಂಡಿದ್ದು ಡಿಸೆಂಬರ್ ತಿಂಗಳಲ್ಲಿ. ಒಂದು ದಿವಸದಲ್ಲೇ ಎಲ್ಲಾ ರಸ್ತೆಗಳ ರಿಪೇರಿ ಮಾಡುವುದಕ್ಕೆ ಆದೇನೂ ಜಾದು ಅಲ್ಲ

ಶ್ರೀ ಟಿ. ಎಂ. ಮಜುನಾಥ್.—ನಿಮ್ಮ ಸರ್ಕಾರ ಬಂದಮೇಲೆ ರಸ್ತೆಗಳೆಲ್ಲಾ ಹಾಳು ಬಿದ್ದು ಹೋಗಿವೆ.

(ಈ ಸಮಯದಲ್ಲಿ ನಾಲ್ಕಾರು ಮಾನ್ಯ ಸದಸ್ಯರು ಒಮ್ಮೆಲೆ ಎಂದು ನಿಂತು ಮಾತನಾಡ ತೊಡಗಿದರು)***

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಹೇಳುತ್ತಿರುವುದನ್ನು ದಾಖಲು ಮಾಡಬಾರದೆಂದು ಹೇಳುತ್ತೇನೆ.

ಶ್ರೀ ಎಸ್. ಎಂ ಕೃಷ್ಣ.—ಮಾನ್ಯ ಸದಸ್ಯರಾದ ಶ್ರೀ ಜಿ. ಎನ್. ಪಾಟೀಲರು ಕಳೆದ ನಾಲ್ಕು ವರ್ಷಗಳಲ್ಲಿ ಮಾತನಾಡಿದ್ದೇ ನಾನು ಕೇಳಿಲ್ಲ : ಇವತ್ತು ಒಂದೇ ದಿವಸ ಇಷ್ಟು ಮಾತನಾಡಿಬಿಟ್ಟರೆ ಜೀರ್ಣಿಸಿಕೊಳ್ಳುತ್ತಾರೆಯೇ ?

ಶ್ರೀ ಜಿ. ಎನ್. ಪಾಟೀಲ್.—ತಾವಾದರೂ ಜೀರ್ಣಿಸಿಕೊಂಡಿದ್ದೀರಲ್ಲಾ

ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ತಾವು ಸಾಕಷ್ಟು ರಕ್ಷಣೆ ಕೊಟ್ಟಿದ್ದೀರಿ. ಭಾಷಣ ಮಾಡತಕ್ಕ ಕಾಲದಲ್ಲಿ ಇನ್ನೊಬ್ಬರು ಆ ಭಾಷಣದ ವಿಷಯದ ಬಗ್ಗೆ ಕ್ಲಾರಿಫಿಕೇಷನ್ ಕೇಳಬಹುದು. ಆದರೆ, ಅದಕ್ಕೂ ಒಂದು ಮಿತಿ ಇದೆ. ಮಾನ್ಯ ವಿರೋಧಿ ಪಕ್ಷದ ಹಂಗಾಮಿ ನಾಯಕರು ಈ ವಿಚಾರದಲ್ಲಿ ಆಸ್ಥೆ ವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್ ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕ್ಷಮಿಸಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಜಿ ಎಸ್. ಅಮ್ಮಣನವರು ನಿರರ್ಗಳವಾಗಿ ರಸ್ತೆಗಳ ಬಗ್ಗೆ ಸುಳ್ಳನ್ನು ಪ್ರಶಂಸನಾ ರೀತಿಯಲ್ಲಿ ಹೇಳುತ್ತಿರುವುದರಿಂದ ಹೀಗಾಗುವುದು ಸ್ವಾಭಾವಿಕವೇ ?

ಶ್ರೀ ಜೆ. ಎಸ್. ಅಮ್ಮಣ್ಣವರ್.—ಇನ್ನು ಸಹಕಾರ ಸಂಘಗಳ ಬಗ್ಗೆ ಹೇಳುವುದಾದರೆ, ಸರ್ಕಾರದವರು ಇವುಗಳನ್ನು ಬಲಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆ ಮಾನ್ಯ ಸದಸ್ಯರೆಲ್ಲರಿಗೂ ಜ್ಞಾಪಕವಿರುವಂತೆ ಇದೇ ಸದನದಲ್ಲಿ, ಸಹಕಾರ ಸಂಘಗಳಲ್ಲಿ ಸದಸ್ಯತ್ವವನ್ನು ಎನ್‌ರೋಲ್ ಮಾಡುವುದರಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಅನೇಕ ಪ್ರಸ್ತಾಪಗಳು ನಡೆದಿದ್ದವು. ಒಂದು ಅರ್ಜಿಯನ್ನು ಸಹಕಾರ ಸಂಘಕ್ಕೆ ಕೊಟ್ಟರೆ, ಅವರು ಆ ಸದಸ್ಯರನ್ನು ಎನ್‌ರೋಲ್ ಮಾಡುತ್ತಲೇ ಇರಲಿಲ್ಲ ಈ ಒಂದು ಅನಾನುಕೂಲತೆಯನ್ನು ತಪ್ಪಿಸುವುದಕ್ಕೋಸ್ಕರ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿ, ಒಬ್ಬ ಸದಸ್ಯರು ಅರ್ಜಿ ಕೊಟ್ಟ ಕೂಡಲೇ ಆತನ ಹೆಸರನ್ನು ಎನ್‌ರೋಲ್ ಮಾಡಿಕೊಳ್ಳಬೇಕೆಂದು ತಿಳಿಸಿದ್ದಾರೆ. ಇದೆಲ್ಲವೂ, ಹಿಂದುಳಿದ ವರ್ಗದವರು ಯಾವುದೇ ತೊಂದರೆ ಇಲ್ಲದೆ ಒಂದು ಸಹಕಾರ ಸಂಘದ ಸದಸ್ಯರಾಗಲು ಅನುಕೂಲ ಆಗುವ ಹಾಗೆ ಮಾಡಿದ್ದು. ಈ ಕ್ರಮ ತೆಗೆದುಕೊಂಡಿರುವುದು ಸರ್ಕಾರದ ಕಾರ್ಯಗಳಲ್ಲಿ ಒಂದು ಮಹತ್ವದ ಹೆಜ್ಜೆ;

*** Matter not recorded as ordered by the chair.

ಮೈಸೂರಿಗಲ್ಲಾಗಿದೆ. ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಇಲ್ಲಿಯವರೆಗೆ ಸುಮಾರು ಶೇಕಡ 50 ಮಂದಿಗೆ ಮಾತ್ರ ಅನುಕೂಲ ಲಭ್ಯವಾಗುತ್ತಿತ್ತು. ಆದರೆ ಈಗ ಸುಮಾರು ನೂರಕ್ಕೆ ನೂರರಷ್ಟು ಎಲ್ಲಾ ಕುಟುಂಬಗಳಿಗೂ ಅನ್ವಯಿಸುವುದಕ್ಕೆ ಈಗ ಸರ್ಕಾರ ಕೈಗೊಂಡಿರುವ ಕ್ರಮಗಳು ಪೂರಕವಾಗಿವೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛೆಪಡುತ್ತೇನೆ.

ಸಹಕಾರ ರಂಗದಲ್ಲಿ ಸಾಲಸೌಲಭ್ಯದ ವಿಚಾರದಲ್ಲಿ, ಷಾರ್ಟ್ ಟರ್ಮ್ ಲೋನ್, ಮೀಡಿಯಂ ಟರ್ಮ್ ಲೋನ್, ಲಾಂಗ್ ಟರ್ಮ್ ಲೋನ್‌ನ್ನು ಒಂದೇ ಏಜನ್ಸಿ ಮುಖಾಂತರ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ, ಫಾರ್ಮರ್ಸ್ ಸರ್ವೀಸ್ ಕೋಆಪರೇಟಿವ್ ಸೊಸೈಟಿಗಳನ್ನು ಈಗಾಗಲೇ ದೇಶದಲ್ಲಿ ಅಂದರೆ ಕರ್ನಾಟಕದಲ್ಲಿ 50 ಸಹಕಾರ ಸಂಘಗಳನ್ನು ಮಾಡುವ ಸಲುವಾಗಿ ಈಗಾಗಲೇ 44 ಸಂಘಗಳನ್ನು ಮಾಡಿ 21ಕ್ಕೆ ಸಾಲವನ್ನು ಒದಗಿಸಿದ್ದಾರೆ. ಒಂದು ಸಾವಿರ ಹಳ್ಳಿಗೆ ವಿದ್ಯುದ್ದೀಕರಣ ಮಾಡಿ, 16,500 ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಶರಾವತಿಯಲ್ಲಿ 9-10 ಜನರೇಟರ್ ಕಾರ್ಯ ಶೀಘ್ರದಲ್ಲಿಯೇ ಆಗುತ್ತದೆ. ಕಾಳಿ ಯೋಜನೆ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರು ಹೇಳಿದ್ದಾರೆ. ದುಡ್ಡಿನ ವಿಚಾರದಲ್ಲಿ ಆತಂಕ ಇತ್ತು. ಈಗತಾನೇ ಮಾನ್ಯ ಮಂತ್ರಿಗಳು ಆತಂಕ ಇಲ್ಲ. ಆದರೂ ನಮಗೆ ಬಂದಂತ ಹಣವನ್ನು ಕಾರ್ಯ ಮಾಡುವ ಮುಖೇನ ತೋರಿಸಿದ ಕೂಡಲೇ ಮಧ್ಯವರ್ತಿ ಸರ್ಕಾರ ಹಣ ಕೊಡುತ್ತದೆಂದು ಹೇಳಿದ್ದಾರೆ. ಗೋದಾವರಿ ನದಿ ನೀರಿನ ಬಗ್ಗೆ ಇರುವರೆಗೂ ಇದ್ದ ವ್ಯಾಜ್ಯದ ಬಗ್ಗೆ ಈಗಾಗಲೇ ನ್ಯಾಯವಾದ ಒಮ್ಮತಕ್ಕೆ ಬಂದಿದ್ದಾರೆ. ಅದೇ ಪ್ರಕಾರ ಕಾವೇರಿ ಯೋಜನೆ ಬಗ್ಗೆಯೂ ಶೀಘ್ರವೇ ನ್ಯಾಯ ಬರಲಿ ಎಂದು ಹೇಳುತ್ತೇನೆ. ಇನ್ನು ಕೃಷ್ಣ ನದಿ ನೀರಿನ ವ್ಯಾಜ್ಯದ ಬಗ್ಗೆ ಒಂದು ಮಾತು ಹೇಳುತ್ತೇನೆ. ಹಿಂದೆ ಈ ಸರ್ಕಾರಕ್ಕೆ ಮಹಾರಾಷ್ಟ್ರ ಸರ್ಕಾರದಿಂದ ಕಾಗದ ಬಂದಿತ್ತು. ನನ್ನ ತಿಳುವಳಿಕೆ ಪ್ರಕಾರ ಬಿಜಾಪುರ ಜಿಲ್ಲೆಯ ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಿಗೆ ಎಂದು ಭಾವಿಸಿದ್ದೇನೆ. ಹಣಕೊಟ್ಟರೆ ಬಿಜಾಪುರ ಜಿಲ್ಲೆಯ ಮೇಲೆ ಕೊಡುತ್ತೇವೆಂದು ಹೇಳಿದರು. ಆಗ ಹಣ ಕೊಟ್ಟಿದ್ದರೆ ಈ ಪ್ರಸಂಗ ಇರುತ್ತಾ ಇರಲಿಲ್ಲ. ನೀರಾವರಿ ಸೌಲಭ್ಯವನ್ನು ಒಂದು ಕಾಯಿದೆ ಮುಖೇನ ದುರಸ್ತಿ ಮಾಡಬೇಕಾಗಿದೆ. ಎಷ್ಟೋ ಕಡೆ ಕಟ್ಟೆಗಳನ್ನು ಕಟ್ಟಿದ ನಂತರ, ನೀರನ್ನು ಕಾಲುವೆಗಳ ಮುಖಾಂತರ ಹರಿಸುವಾಗ, ಎರಡನೆಯವರ ಜಮೀನಿನ ಮೇಲೆ ಹರಿಸುವಾಗ ಆತಂಕ ಒಡ್ಡುತ್ತಾರೆ. ಇಂಥ ಆತಂಕಗಳು ಬರದಂತೆ ಸೂಕ್ತವಾದ ತಿದ್ದುಪಡಿಯನ್ನು ಇರಿಗೇಷನ್ ಆಕ್ಟ್ ಮತ್ತು ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟನಲ್ಲಿ ಮಾಡಬೇಕು. ಬೆಳೆಯನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಅತ್ಯಂತ ಪ್ರೋತ್ಸಾಹ ಕೊಡುವುದು ಅವಶ್ಯಕ.

ಇನ್ನೂ ಡೈರಿ ಡವಲಪ್‌ಮೆಂಟ್‌ನಲ್ಲಿ ಎಲ್ಲಾ ಕಡೆ ಒಂದು ಸಾವಿರ ಲೀಟರ್ ಕ್ಯಾಪಾಸಿಟಿ ಡೈರಿಗಳು ಉಂಟು. ಉದಾಹರಣೆಗೆ ಬೆಳಗಾವಿ ಜಿಲ್ಲೆಯನ್ನು ಹೇಳುತ್ತೇನೆ. ಅಲ್ಲಿ ನಮ್ಮ ಹಾಲಿನ ಸಹಕಾರ ಸಂಘಗಳು ಹೆಚ್ಚಾಗಿದ್ದು, ಹಾಲು ಮಾರುವವರಿಗೆ ದೊಡ್ಡ ಪ್ರಶ್ನೆ ಉದ್ಭವಿಸಿದೆ. ಅವರು ನೆರೆ ರಾಜ್ಯಕ್ಕೆ ಕೊಡುತ್ತಾರೆ. ಆದಷ್ಟು ಶೀಘ್ರವೇ ಬೆಳಗಾವಿ ಡೈರಿಯನ್ನು 50 ಸಾವಿರ ಲೀಟರ್ ಕ್ಯಾಪಾಸಿಟಿಗೆ ಮಾಡಬೇಕೆಂದೂ, ಹಾಲಿನ ಪೌಡರ್ ಪ್ಲಾಂಟಿಗೂ ಗಮನ ಕೊಡಬೇಕೆಂದು ಕೇಳುತ್ತೇನೆ. ಈಗಾಗಲೇ ಕೆಲವು ಕಡೆ ಇದು ನಡೆಯುತ್ತದೆ. ಅನುಶಾಸನ ತಂದಿದ್ದಕ್ಕಾಗಿ ಕೇಂದ್ರ ಸರ್ಕಾರದವರನ್ನು ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ತಂದಂತ ವಂದನಾ ನಿರ್ಣಯಕ್ಕೆ ಮನಃಪೂರ್ವಕವಾಗಿ ಬೆಂಬಲಕೊಟ್ಟು, ತಾವು ನಾಲ್ಕು ಮಾತುಗಳನ್ನು ಆಡುವುದಕ್ಕೆ ಅನುಮತಿ ಕೊಟ್ಟಿದಕ್ಕಾಗಿ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ)—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಮಂಡಿಸಿರತಕ್ಕಂಥಾ ವಂದನಾ ನಿರ್ಣಯವನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣ ಮೊದಲು ಪ್ರಕಟವಾಗಿರುವ ಪ್ರಕಾರ ನಿನ್ನೆ ದಿನ ಒಂದು ಗಂಟೆಗೆ ಪ್ರಾರಂಭವಾಗಬೇಕಾಗಿತ್ತು. ಅದನ್ನು 3 ಗಂಟೆಗೆ ಮುಂದೂಡಿದರು. ಕಾರಣವಾದರೂ ಇಷ್ಟೇ. ನಾನು ತಿಳಿದುಕೊಂಡಿರುವ ಪ್ರಕಾರ ಮೈಸೂರು ಮಹಾರಾಜರ ಮಕ್ಕಳ ಮದುವೆಗೆ ಮಂತ್ರಿಗಳು ಹೋಗುವುದಕ್ಕಾಗಿ ಮಾಡಿಕೊಂಡಂಥಾ ಒಂದು ಕಾರ್ಯಕ್ರಮದಿಂದ ಎಂದು.

ಶ್ರೀ ಆರ್. ಎಸ್. ಪಾಟೀಲ್.—ನಿಮಗೆ ಯಾರು ಹೇಳಿದರು ಈ ರೀತಿ ಒಂದು ಕಾರಣದಿಂದ ಎಂದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಮಗೆ ಗೊತ್ತು. ಅದೇನೇ ಇರಲಿ. ಸಂಸದೀಯ ಇತಿಹಾಸ ದಲ್ಲಿ ಅದೂ ಕರ್ನಾಟಕದಲ್ಲಿ ಇದು ಒಂದು ಹೊಸ ಸಂಪ್ರದಾಯ ಎಂದು ನನಗೆ ಅನಿಸುತ್ತದೆ. ನನಗೆ ಹೊರ ರಾಜ್ಯಗಳ ವಿಚಾರ ಅಷ್ಟು ಚೆನ್ನಾಗಿ ತಿಳಿಯದು. ಈ ಒಂದು ಕಾರಣದಿಂದ ಈ ಸದ ನದ ಸದಸ್ಯರಿಗೆ ಮಾಡಿದ ಒಂದು ಅಪಮಾನ ಎಂದು ನಾನು ಭಾವಿಸ ಬೇಕಾಗಿದೆ. ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವರಾಗಿರಲಿ ಅವರ ಮನೆಯ ಒಂದು ಕಾರ್ಯ ಎಷ್ಟೇ ಮಹತ್ವ ಪೂರಿತವಾಗಿದ್ದಾಗಿರಲಿ ಅದು ರಾಜ್ಯದ ವಿಚಾರಕ್ಕೆ ಬಂದಾಗ ಆ ಕೆಲಸ ಅಷ್ಟು ಮಹತ್ವವಾಗಿ ಉಳಿಯುವುದಿಲ್ಲ; ಈ ಸದ ನದ ಕಾರ್ಯಕಲಾಪಗಳಿಗೆ ಹೆಚ್ಚು ಆದ್ಯತೆ, ಅರ್ಹತೆಗೆ ಹೊಂದಿಕೊಂಡಿರುತ್ತದೆ. ಅದು ಬಿಟ್ಟು ಈ ಮದುವೆಗೆ ಈ ಸಭೆಯನ್ನು 2 ಗಂಟೆ ಕಾಲ ಮುಂದೂಡಿದ್ದು ಅದು ಎಲ್ಲರ ಖಂಡನೆಗೆ ಗುರಿಯಾದದ್ದು ಎನ್ನುವುದನ್ನು ನಾನು ಮೊಟ್ಟ ಮೊದಲು ಹೇಳಬಯಸುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಕೆಲವು ಸರ್ಕಾರದ ಸಾಧನೆಗಳ ಬಗ್ಗೆ ಪ್ರಸ್ತಾಪಿಸ ಬೇಕಾ ಗಿದೆ. ಸರ್ಕಾರ ಮುಂದಿನ ದಿನಗಳಲ್ಲಿ ಒಂದು ಮುನ್ನೋಟವನ್ನು ಕೊಡತಕ್ಕಂಥ ಒಂದು ಕಾರ್ಯ ಕ್ರಮವನ್ನೂ ಕೂಡ ನಾನು ನೋಡಿದ್ದೇನೆ. ಮಾನ್ಯ ಅಧ್ಯಕ್ಷರೇ ಈ ಭಾಷಣದಲ್ಲಿ ಮುಂದಿನ ದಿನ ಗಳು ಸರ್ಕಾರ ಏನು ಮಾಡಬೇಕು ಅನ್ನತಕ್ಕಂಥ ಒಂದು ಕಾರ್ಯಕ್ರಮ ಏನು ಇದೆ, ಅದು ದೇಶದ ಜನತೆಯಲ್ಲಿ ಏನು ಒಂದು ಆಸೆಯನ್ನು ಉದ್ದೀಪನ ಗೊಳಿಸುವುದಾಗಲಿ ಅಥವಾ ಸರ್ವೋತ್ಮಕ ವಾದ ಬೆಳವಣಿಗೆಗೆ ಅದು ಸಹಾಯಕವಾಗುತ್ತದೆ ಎನ್ನುವ ವಿಚಾರದಲ್ಲಿಯಾಗಲಿ ನನಗೆ ಎಳ್ಳಷ್ಟೂ ವಿಶ್ವಾಸ ಇಲ್ಲ. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಬಹಳ ಹೊತ್ತು ಮಾತನಾಡಿದರು. ಅವರು ವಕೀಲರಾಗಿದ್ದವರು, ನಾನೇನು ವಕೀಲನಲ್ಲ. ಯಾವಾಗಲೂ ಉದ್ದವಾದ ಭಾಷಣ ಮಾಡತಕ್ಕಂಥಾವರ ಕಷ್ಟ ನೋಡಿದರೆ ಅವರು ದೌರ್ಬಲ್ಯವಾಗಿರುವುದರಿಂದ ಅವರು ವಾದ ಮಾಡು ತಕ್ಕಂಥಾದ್ದು ಬಹಳ ಹೆಚ್ಚು. ಈ ಕಾರಣದಿಂದ ಅದನ್ನು ಮೆಚ್ಚಿಸಿಕೊಳ್ಳುವುದಕ್ಕೋಸ್ಕರ ಅವರು ದೀರ್ಘವಾದ ಭಾಷಣ ಮಾಡಿದರು ಎಂದು ನನಗೆ ಅನಿಸುತ್ತದೆ. ಆದುದರಿಂದ ಇದನ್ನು ಯಾವ ರೀತಿಯಲ್ಲೂ ಮರೆ ಮಾಚುವುದಕ್ಕಾಗುವುದಿಲ್ಲ. ಅಲ್ಲದೆ ದೇಶದ ಜನತೆಗೆ ಯಾವ ವಿಧವಾದ ಸಂತೋಷವನ್ನೂ ಸಮಾಧಾನವನ್ನೂ ಉಂಟು ಮಾಡತಕ್ಕಂಥಾ ಭಾಷಣವಲ್ಲ ಎಂದು ನಾನು ಹೇಳ ಬೇಕಾಗಿದೆ ಏಕೆಂದರೆ ಒಬ್ಬ ಮನುಷ್ಯನನ್ನು 3 ದಿವಸ ಉಪವಾಸ ಕೂಡಿಸಿ ಅನಂತರ ಅವನನ್ನು ಬಿಟ್ಟು ಅವನಿಗೆ ಭಕ್ಷ್ಯ ಭೋಜನ ಕೊಟ್ಟು ಚೆನ್ನಾಗಿ ಊಟ ಮಾಡು ಎಂದರೆ ಅದು ಯಾರಿಗೆ ತಾನೇ ಬೇಕಾಗುತ್ತದೆ ? ಜನಗಳನ್ನು ವಿಚಾರಿಸಿದರೆ ನಿಮಗೇನೇ ಗೊತ್ತಾಗುತ್ತದೆ. ನಿಮ್ಮ ತಲೆಗಳ ಒಂದು ಸೀಮೆ ಇದೆ. ನಮ್ಮ ತಲೆಗೂ ಒಂದು ಸೀಮೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಒಂದು ಪರಿಸ್ಥಿತಿ ಬಗ್ಗೆ ಮುಖ್ಯವಾಗಿ ರೈತರ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಏನು ಮಾತ ನಾಡಿದರು ಎಂದರೆ ಅವರು ಬಹಳ ಸಂತೋಷದಿಂದ ಇದ್ದಾರೆ. ಅವರು ತೃಪ್ತಿಯಿಂದ ಇದ್ದಾರೆ ಅವರಿಗೆ ಶೋಷಣೆ ಆಗುತ್ತಾ ಇಲ್ಲ ಅವರಿಗೆಲ್ಲಾ ವಿವಿಧವಾದಂಥ ಸೌಲಭ್ಯಗಳನ್ನು ಕೊಡುತ್ತಾ ಇದ್ದೇವೆ ಅಂತ ಹೇಳಿದರು. ಅವರು ಈ ರೀತಿ ಹೇಳಿದ್ದು ಆತ್ಮವಂಚನೆಯ ಮಾತು ಎಂದು ಹೇಳು ತ್ತೇನೆ. ಒಂದು ವೇಳೆ ಈ ರೀತಿಯ ಆತ್ಮವಂಚನೆಯ ಮಾತನಾಡಿದರೂ ಕೂಡ ಅದರಲ್ಲಿ ಕೊಂಚ ಮಟ್ಟಿಗಾದರೂ ಕೂಡ ಅದಕ್ಕೆ ಹೊಂದಿಕೊಳ್ಳುವಂಥಾದ್ದಾಗಿರಬೇಕು. ಈ ಮಾತನ್ನು ನಾನು ವಿಶದದಿಂದ ಹೇಳಬೇಕಾಗಿದೆ.

ಇನ್ನು ತುರ್ತು ಪರಿಸ್ಥಿತಿ ಸಂಬಂಧವಾಗಿ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಬಹಳ ಹೇಳಿದರು ಈ ದಿನ ನಾನು ಕುಳಿತಿರುವ ಈ ಜಾಗದಲ್ಲಿ ಶ್ರೀಮಾನ್ ದೇವೇಗೌಡರು ಭಾಷಣ ಮಾಡಬೇಕಾಗಿತ್ತು. ಶ್ರೀಮಾನ್ ದೇವೇಗೌಡರ ಹತ್ತಿರ ಸರ್ಕಾರಕ್ಕೆ ತಿಳಿಸಬೇಕಾದಂಥ ಅನೇಕ ಮುಖ್ಯವಾದ ಅಂಶಗಳು ಇತ್ತು. ಆದರೆ ಈ ಸಂದರ್ಭದಲ್ಲಿ ತಮ್ಮನ್ನು ಒಂದು ಪ್ರಶ್ನಿಸ ಬೇಕಾ ಗಿದೆ. ಅದೇನೆಂದರೆ ಶ್ರೀಮಾನ್ ದೇವೇಗೌಡರು ಏನಾದರೂ ಕೊಲೆ ಮಾಡಿದರೇ ಅಥವಾ ಏನಾ ದರೂ ಮೋಸ ಮಾಡಿದರೇ ? ಅವರನ್ನು ಯಾವ ಕಾರಣಕ್ಕಾಗಿ ಈ ದಿವಸ ಈ ಜಾಗದಲ್ಲಿ ಅವರು ನಿಂತು ಕೆಲಸ ಮಾಡುವ ಹಕ್ಕನ್ನು ಕಸಿದುಕೊಂಡಿದ್ದೀರಿ ? ಮೊದಲು ಈ ಪ್ರಶ್ನೆಗೆ ದಯವಿಟ್ಟು ಉತ್ತರ ಕೊಡಿ. ಶ್ರೀಮಾನ್ ದೇವೇಗೌಡರು ಸರ್ಕಾರ ಮಾಡಿರತಕ್ಕಂಥ ಲೋಪದೋಷಗಳನ್ನು

ಹೇಳುತ್ತಾರೆ ಅನ್ನುವ ಭಾವನೆಯೇ ಅಥವಾ ಅವರ ಮೇಲೆ ಇನ್ನೇನಾದರೂ ಅಪಾದನೆ ಇದೆಯೇ ಎಂಬುದನ್ನು ದಯವಿಟ್ಟು ತಿಳಿಸಿ. ಶ್ರೀ ಮಾನ್ ದೇವೇಗೌಡರನ್ನು ನೀವು ಬಂಧನದಲ್ಲಿಟ್ಟು ಈ ಶಾಸನ ಸಭೆಯನ್ನು ನಡೆಸತಕ್ಕಂಥಾದ್ದನ್ನು ನೋಡಿದರೆ ಈ ಪ್ರಜಾಪ್ರಭುತ್ವಕ್ಕೆ ನೀವು ಎಷ್ಟು ಬೆಲೆಯನ್ನು ಕೊಟ್ಟಿದ್ದೀರಿ ಅಂತ ಗೊತ್ತಾಗುತ್ತದೆ ಅಲ್ಲದೆ ಇದು ಪ್ರಜಾಪ್ರಭುತ್ವ ಎಂದು ಹೆಸರು ಹೇಳುವುದಕ್ಕೂ ನೀವು ಅರ್ಹರಲ್ಲ ಎಂದು ಹೇಳಬೇಕಾಗಿದೆ. ದೇಶದಲ್ಲಿ ಒಬ್ಬ ವ್ಯಕ್ತಿ ಕೊಲೆ ಮಾಡಿದರೂ ಕೂಡ ವಿಚಾರಣೆ ಮಾಡಿಸಿಕೊಳ್ಳತಕ್ಕಂಥಾ ಹಕ್ಕು ಅವನಿಗೆ ಇದೆ. ಅದನ್ನು ವಿಚಾರಣೆ ಮಾಡಿಸುತ್ತಾರೆ. ಅವನು ನಿಜವಾಗಿ ಕೊಲೆಗಾರನೇ ಎಂದು ರುಜುವಾತು ಮಾಡುವುದಕ್ಕೆ ಹತ್ತಾರು ಸಾಕ್ಷಿಗಳನ್ನು ಕರೆದು ವಿಚಾರಣೆ ಮಾಡುವ ಹಕ್ಕನ್ನು ಇಟ್ಟುಕೊಂಡಿದ್ದಾನೆ ಅಂಥಾವನಿಗೂ ಕೂಡ ಈ ಒಂದು ಹಕ್ಕು ಇದೆ. ಆದರೆ ಈ ಸರ್ಕಾರ ಯಾವ ರೀತಿ ಆಗಿದೆ ಎಂದರೆ ಈ ಸರ್ಕಾರದ ನೀತಿಯನ್ನೂ, ಸರ್ಕಾರದ ಧೋರಣೆಯನ್ನೂ, ಸರ್ಕಾರದ ಕಾರ್ಯಕ್ರಮವನ್ನೂ ಒಪ್ಪದೇ ಇರತಕ್ಕಂಥಾ ಜನರನ್ನು ನೀವು ದೇಶದ್ರೋಹಿಗಳು ಎಂದು ಕರೆಯತಕ್ಕಂಥ ಒಂದು ಕೀಳುಮಟ್ಟಕ್ಕೆ ಇಳಿದು ರಾಜಕೀಯ ಮುಖಂಡರನ್ನು ಬಂಧನದಲ್ಲಿ ಇಡತಕ್ಕಂಥಾದ್ದು ನೋಡಿದರೆ........

ಶ್ರೀ ಆರ್. ಎಸ್. ಪಾಟೀಲ್.—ನೀವು ತಪ್ಪು ಕಲ್ಪನೆ ಮಾಡಿಕೊಂಡಿದ್ದೀರಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಾನು ತಪ್ಪು ಕಲ್ಪನೆ ಮಾಡಿಕೊಂಡಿಲ್ಲ. ನಮ್ಮ ದೇಶದಲ್ಲಿ ಅಂತರಿಕ ಭದ್ರತೆಯನ್ನು ಕಾಪಾಡಕೊಳ್ಳುವುದಕ್ಕೋಸ್ಕರ ಈ ಒಂದು ತುರ್ತು ಪರಿಸ್ಥಿತಿಯನ್ನು ಕರೆಯತಕ್ಕಂಥ ಅವಕಾಶ ಇತ್ತೇ ? ನಮ್ಮ ದೇಶದಲ್ಲಿ ಅಂಥಾ ಒಂದು ಪರಿಸ್ಥಿತಿ ಏನಾಗಿತ್ತು ? ಬೇರೆ ರಾಜ್ಯಗಳ ವಿಚಾರವನ್ನು ಅಮೇಲೆ ನಾನು ಪ್ರಸ್ತಾಪ ಮಾಡುತ್ತೇನೆ. ಮೊದಲು ಸದ್ಯಕ್ಕೆ ನಮ್ಮ ಕರ್ನಾಟಕ ರಾಜ್ಯದ್ದು ಪ್ರಸ್ತಾಪ ಮಾಡೋಣ. ಏತಕ್ಕೆಂದರೆ ನಾವು ಇರತಕ್ಕಂಥಾದ್ದು ಕರ್ನಾಟಕ ರಾಜ್ಯದಲ್ಲಿ, ಮತ್ತು ನಾವು ಕರ್ನಾಟಕ ರಾಜ್ಯದ ಶಾಸನ ಸಭಾಸದಸ್ಯರಾಗಿ ಕೆಲಸ ಮಾಡುವುದರಿಂದ ಮೊದಲು ನಮ್ಮ ಕರ್ನಾಟಕ ರಾಜ್ಯದ ಬಗ್ಗೆ ಪ್ರಸ್ತಾಪ ಮಾಡೋಣ.

MADAM SPEAKER.—The House now stands adjourned to meet again to-morrow at 1 P. M.

The House adjourned at Six of the Clock to meet again at One of the Clock on Wednesday the Fourth February 1976.